ಮೈಸೂರು ಮಿತ್ರ

ಮೈಸೂರು–ಮಂಡ್ಯ–ಚಾಮರಾಜನಗರ–ಕೊಡಗು–ಹಾಸನ

ಬೆಳಗಿನ ಪ್ರಾದೇಶಿಕ ದಿನಪತ್ರಿಕೆ

ಅಕ್ಟೋಬರ್ 26 ಬುಧವಾರ 2022

₹4

ಸಂಪುಟ: 43 | ಸಂಚಿಕೆ: 190 | ಪುಟಗಳು: 10

ದೂರವಾಣಿ: 2496520, 2496521, 2496526, 2496527, 2496528. ಜಾಹೀರಾತು: 2496522, 2496523
ನಗರ ಕಚೇರಿಗಳು: ಕೆ.ಆರ್. ಸರ್ಕಲ್, ವಿಶ್ವೇಶ್ವರಯ್ಯ ಕಟ್ಟಡ Ph: 2431774, ಡಿ.ದೇವರಾಜ ಅರಸು ರಸ್ತೆ, Ph: 2428695

ಸುದ್ದಿ, ಫೋಟೋಗೆ: news@mysurumithra.com ಜಾಹೀರಾತು: ad@mysurumithra.com

ನ.11ರಂದು ನಾಡಪ್ರಭು ಕೆಂಪೇಗೌಡರ 108 ಅಡಿ ಕಂಚಿನ ಪ್ರತಿಮೆ ಉದ್ಘಾಟನೆ

ಪವಿತ್ರ ಮೃತ್ತಿಕೆ ಸಂಗ್ರಹ ಅಭಿಯಾನ ಸಂಬಂಧ ಸಚಿವ ವಿಡಿಯೋ ಕಾನ್ಫರೆನ್ಸ್



ಅಭಿಯಾನವು ಜಿಲ್ಲಾ ಮಟ್ಟಗಳಲ್ಲಿ ಆರಂಭವಾಗಿರುವ ಬಗ್ಗೆ ಸರ್ಕಾರಕ್ಕೆ ಅಧಿಕೃತ ಮಾಹಿತಿ ನೀಡಬೇಕು ಮತ್ತು ನಿರ್ದಿಷ್ಟ ಮಾರ್ಗಗಳಲ್ಲಿ ಸಾಗುವ ಬಗ್ಗೆ ಎಚ್ಚರ ವಹಿಸಬೇಕು. ಅಲ್ಲದೆ ಅಂದಂದಿನ ಪ್ರಗತಿಯನ್ನು ಸರ್ಕಾರಕ್ಕೆ ಸಲ್ಲಿಸಬೇಕು. ಪ್ರತಿ ಗ್ರಾಮದಲ್ಲೂ ಇರುವ ಪವಿತ್ರ ಕೆರೆಕಟ್ಟೆ, ನದಿ, ಕಲ್ಯಾಣಿ ಅಥವಾ ಪುಷ್ಕರಿಣಿಯಿಂದ ಮೃತ್ತಿಕೆ ಸಂಗ್ರಹವಾಗುವ ಬಗ್ಗೆ ಖಾತ್ರಿಪಡಿಸಿಕೊಳ್ಳಬೇಕು. ಜೊತೆಗೆ ವಿಶೇಷ ರಥಗಳು ಆಗಮಿಸಿದಾಗ ದೇವಸ್ಥಾನಗಳಲ್ಲಿ ಪೂರ್ಣಕುಂಭ ಸ್ವಾಗತಕ್ಕೆ ವ್ಯವಸ್ಥೆ ಮಾಡಬೇಕು. –ಡಾ. ಅಶ್ವತ್ಥ್ ನಾರಾಯಣ, ಸಚಿವ

ಬೆಂಗಳೂರು, ಅ.25(ಕೆಎಂಶಿ)–ನ. 11ರಂದು ನಡೆಯಲಿರುವ ನಾಡಪ್ರಭು ಕೆಂಪೇಗೌಡರ 108 ಅಡಿ ಎತ್ತರದ ಕಂಚಿನ ಪ್ರತಿಮೆ ಉದ್ಘಾಟನೆ ಕಾರ್ಯಕ್ರಮಕ್ಕೆ ಪೂರಕವಾಗಿ ನಡೆಯುತ್ತಿರುವ ರಾಜ್ಯಮಟ್ಟದ ಪವಿತ್ರ ಮೃತ್ತಿಕೆ ಸಂಗ್ರಹಣಾ ಅಭಿಯಾನವನ್ನು ಸುಗಮವಾಗಿ ನಡೆಸುವ ಕುರಿತು ಎಲ್ಲಾ ಜಿಲ್ಲಾಧಿಕಾರಿಗಳು ಮತ್ತು ಜಿಲ್ಲಾ ಪಂಚಾಯಿತಿ ಸಿಇಓಗಳ ಜೊತೆ ಮಂಗಳವಾರ ವಿಡಿಯೋ ಕಾನ್ಫರೆನ್ಸ್ ನಡೆಸಲಾಯಿತು.

ಸಭೆಯಲ್ಲಿ ಕೆಂಪೇಗೌಡ ಪಾರಂಪರಿಕ ತಾಣಗಳ ಅಭಿವೃದ್ಧಿ ಪ್ರಾಧಿಕಾರದ ಉಪಾಧ್ಯಕ್ಷರಾಗಿರುವ ಸಚಿವ ಡಾ. ಸಿ.ಎನ್.ಅಶ್ವತ್ಥ ನಾರಾಯಣ, ಪ್ರಾಧಿಕಾರದ ಸದಸ್ಯ ಹಾಗೂ ಕಂದಾಯ ಸಚಿವ ಆರ್.ಅಶೋಕ್, ಮತ್ತು ಸಚಿವರಾದ ಎಸ್.ಟಿ.ಸೋಮಶೇಖರ್, ನಾರಾಯಣಗೌಡ, ಮುನಿರತ್ನ ಪಾಲ್ಗೊಂಡಿದ್ದರು.

ಅಭಿಯಾನದ ಅಂಗವಾಗಿ ಚಾಲನೆ ಪಡೆದಿರುವ ವಿಶೇಷ ರಥಗಳು ಈಗಾಗಲೇ ಜಿಲ್ಲೆಗಳನ್ನು ತಲುಪಿವೆ. ಹಾಸನ, ಮಂಡ್ಯ, ಕೋಲಾರ ಮತ್ತು ದಕ್ಷಿಣ ಕನ್ನಡ ಜಿಲ್ಲೆಗಳಿಗೆ ಮಾತ್ರ ಈ ರಥಗಳು ಇನ್ನೂ ತಲುಪಿಲ್ಲ ಎಂದು ವಿವರಿಸಿದರು.

ಅಭಿಯಾನಕ್ಕೆ ಸಂಬಂಧಪಟ್ಟಂತೆ ಈಗಾಗಲೇ ಹೊರಡಿಸಿರುವ ಮಾರ್ಗಸೂಚಿಗೆ ಎಲ್ಲರೂ ಬದ್ಧವಾಗಿರಬೇಕು. ವಿಶೇಷ ರಥಗಳು ಆಯಾ ಗ್ರಾಮವನ್ನು ತಲುಪುವ ಮೊದಲೇ ಸಂದೇಶ ತಲುಪಿಸಿ ಅಭಿಯಾನಕ್ಕೆ ಒದಗಿಸಿರುವ ಪೌಚುಗಳಲ್ಲಿ ಪವಿತ್ರ ಮೃತ್ತಿಕೆಯನ್ನು ಸಂಗ್ರಹಿಸಬೇಕು ಎಂದು ಅಶ್ವತ್ಥ್ ನಾರಾಯಣ್ ಸೂಚಿಸಿದರು.

ಹೀಗೆ ಸಂಗ್ರಹವಾದ ಪವಿತ್ರ ಮಣ್ಣನ್ನು ನ.7ರಂದು ಜಿಲ್ಲಾ ಕೇಂದ್ರಗಳಲ್ಲಿ, ನ.8ರಂದು ಈ ರಥಗಳು ಬೆಂಗಳೂರನ್ನು ತಲುಪುವಂತೆ ನೋಡಿಕೊಳ್ಳುವುದು ಜಿಲ್ಲಾಧಿಕಾರಿಗಳು ಮತ್ತು ಸಿಇಓಗಳ ಹೊಣೆಯಾಗಿದೆ. ಬಳಿಕ ಪವಿತ್ರ ಮೃತ್ತಿಕೆ ಸ್ವೀಕಾರ ಕಾರ್ಯಕ್ರಮ ನಡೆಸಲಾಗುವುದು ಎಂದು ಅವರು ನುಡಿದರು. ಸಭೆಯಲ್ಲಿ ನಗರಾಭಿವೃದ್ಧಿ ಇಲಾಖೆ ಹೆಚ್ಚುವರಿ ಇಲಾಖೆ ಹೆಚ್ಚುವರಿ ಮುಖ್ಯ ಕಾರ್ಯದರ್ಶಿ ರಾಕೇಶ್ ಸಿಂಗ್, ಗ್ರಾಮೀಣಾಭಿವೃದ್ಧಿ ಇಲಾಖೆ ಹೆಚ್ಚುವರಿ ಮುಖ್ಯ ಕಾರ್ಯದರ್ಶಿ ಎಲ್ ಕೆ ಅತೀಕ್, ಕಾಲೇಜು ಮತ್ತು ತಾಂತ್ರಿಕ ಶಿಕ್ಷಣ ಇಲಾಖೆ ಆಯುಕ್ತ ಪಿ.ಪ್ರದೀಪ್, ಪ್ರಾಧಿಕಾರದ ಆಯುಕ್ತ ವಿನಯ್ ದೀಪ ಉಪಸ್ಥಿತರಿದ್ದರು.

ರಾಹುಲ್ ಗಾಂಧಿ ಆರೋಪಕ್ಕೆ ತಿರುಗೇಟು ನೀಡಲು ಸಚಿವರು, ಪಕ್ಷದ ನಾಯಕರು ವಿಫಲ


● ಮಾಜಿ ಸಿಎಂ ಯಡಿಯೂರಪ್ಪ ಸಿಡಿಮಿಡಿ ● ಬಿಜೆಪಿ ಸಂಕಲ್ಪ ಯಾತ್ರೆಯಿಂದಲೂ ದೂರ

ಬೆಂಗಳೂರು, ಅ.25(ಕೆಎಂಶಿ)–ಕಾಂಗ್ರೆಸ್‌ನ ಅಧಿನಾಯಕ ರಾಹುಲ್‌ಗಾಂಧಿ ರಾಜ್ಯದಲ್ಲಿ ಭಾರತ್ ಜೋಡೋ ಯಾತ್ರೆ ಸಂದರ್ಭದಲ್ಲಿ ರಾಜ್ಯ ಸರ್ಕಾರದ ವಿರುದ್ಧ ಮಾಡಿದ ಶೇ.40ರಷ್ಟು ಕಮಿಷನ್ ಆರೋಪಕ್ಕೆ ಸಮರ್ಥ ತಿರುಗೇಟು ನೀಡುವಲ್ಲಿ ಸಚಿವರು ಮತ್ತು ಪಕ್ಷದ ನಾಯಕರು ವಿಫಲರಾಗಿದ್ದಾರೆಂದು ಬಿಜೆಪಿಯ ಹಿರಿಯ ನಾಯಕ ಹಾಗೂ ಮಾಜಿ ಮುಖ್ಯಮಂತ್ರಿ ಬಿ.ಎಸ್.ಯಡಿಯೂರಪ್ಪ ಸಿಡಿಮಿಡಿಗೊಂಡಿದ್ದಾರೆ.

ಚಾಮರಾಜನಗರದಿಂದ ಬಳ್ಳಾರಿವರೆಗೂ ನಡೆದ ಯಾತ್ರೆಯುದ್ದಕ್ಕೂ ರಾಹುಲ್ ಟೀಕಾ ಪ್ರಹಾರ ನಡೆಸಿದ್ದಾರೆ. ಇದಕ್ಕೆ ಸಮರ್ಥವಾದ ಉತ್ತರ ನೀಡಿ ಆರೋಪ ನಿರಾಕರಿಸುವಲ್ಲಿ ವಿಫಲರಾಗಿದ್ದೀರಿ ಎಂದು ಪಕ್ಷದ ನಾಯಕರನ್ನು ತರಾಟೆಗೆ ತೆಗೆದುಕೊಂಡಿದ್ದಾರೆ.

ಸಮರ್ಪಕ ಉತ್ತರ ನೀಡಲಿಲ್ಲವೆಂದು ಬೇಸತ್ತು ಅಸಮಾಧಾನಗೊಂಡಿರುವ ಯಡಿಯೂರಪ್ಪ, ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಜತೆಗೂಡಿ ನಡೆಸುತ್ತಿದ್ದ ಸಂಕಲ್ಪ ಯಾತ್ರೆಯಿಂದಲೂ ಹಿಂದೆ ಸರಿದಿದ್ದಾರೆ.

ಮೊದಲೇ ಬಳ್ಳಾರಿ ಮತ್ತು ಕಲ್ಬುರ್ಗಿಯಲ್ಲಿ ಸಂಕಲ್ಪ ಯಾತ್ರೆ ನಿಗದಿಯಾಗಿದ್ದರೂ ಅದರಲ್ಲಿ ಭಾಗಿಯಾಗದೇ ಮೂರು ದಿನಗಳ ಕಾಲ ದೆಹಲಿಗೆ ತೆರಳಿ ಬಿಟ್ಟರು.



ಯಡಿಯೂರಪ್ಪ ಕೋಪ ತಣಿಸಲು ಕೇಂದ್ರದ ನಾಯಕರು ಮಧ್ಯೆ ಪ್ರವೇಶ ಮಾಡಿ ಮಾತುಕತೆ ನಡೆಸಿದ್ದಾರೆ. ಇಷ್ಟಾದರೂ ಬಿಎಸ್‌ವೈ ಜನಸಂಕಲ್ಪ ಯಾತ್ರೆಯಿಂದ ದೂರ ಉಳಿದಿದ್ದಾರೆ.

ಅಷ್ಟೇ ಅಲ್ಲ, ಇದಕ್ಕೂ ಮುನ್ನ ಸಚಿವರಾದ ಎಸ್.ಟಿ. ಸೋಮಶೇಖರ್, ಮುನಿರತ್ನ ಬೈರತಿ ಬಸವರಾಜ್, ಆರ್. ಅಶೋಕ್, ಸಿ.ಸಿ.ಪಾಟೀಲ್ ಸೇರಿದಂತೆ ಕೆಲವು ಸಚಿವರನ್ನು ಸಂಪರ್ಕಿಸಿ ಹಿಗ್ಗಾಮುಗ್ಗಾ ತರಾಟೆಗೆ ತೆಗೆದುಕೊಂಡಿದ್ದಾರೆ. ರಾಹುಲ್‌ಗಾಂಧಿ ಹಾಗೂ ಕಾಂಗ್ರೆಸ್ ನಾಯಕರು ಅಷ್ಟೊಂದು ಗಂಭೀರ ಆರೋಪ ಮಾಡುತ್ತಿದ್ದರೂ ಇದಕ್ಕೂ ನಮಗೂ ಸಂಬಂಧವಿಲ್ಲ ಎಂಬ ರೀತಿ ಇದ್ದೀರಿ, ಪ್ರವಾಸ ಮಾಡಿ ಏನು ಕಡಿದು ಕಟ್ಟೆ ಹಾಕಿದ್ದೀರಿ. ಎಲ್ಲವೂ ನನ್ನ ಆಡಳಿತಾವಧಿಯಲ್ಲಿ ನಡೆದಿದೆ ಎಂಬ ರೀತಿಯಲ್ಲಿ ಪರೋಕ್ಷವಾಗಿ ಬಿಂಬಿಸಲಾಗಿದೆ ಎಂದು ಬಿ.ಎಸ್.ಯಡಿಯೂರಪ್ಪ ತೀವ್ರ ಆಕ್ರೋಶಗೊಂಡು ಹರಿಹಾಯ್ದಿದ್ದಾರೆ.

ಪಕ್ಷದ ರಾಜ್ಯಾಧ್ಯಕ್ಷ ನಳಿನ್ ಕುಮಾರ್ ಕಟೀಲ್ ಅವರನ್ನೂ ಬಿಡದ ಯಡಿಯೂರಪ್ಪ, ಬರೀ ಸಿದ್ದರಾಮಯ್ಯ ಎಂದು ಜಪ ಮಾಡುತ್ತಿದ್ದೀರಿ. ಅವರನ್ನು ಎದುರಿಸುವ ಶಕ್ತಿ ಇಲ್ಲವೇ? ಅವರ ಆರೋಪ ಎದುರಿಸುವ ಸಮರ್ಥ ಟೀಕಾಸ್ತ್ರಗಳಿಲ್ಲವೇ? ಯಾವುದು ಸತ್ಯ, ಯಾವುದು ಅಸತ್ಯ ಎಂಬ ಮಾಹಿತಿಯನ್ನು ನಮ್ಮದೇ ಸರ್ಕಾರದಿಂದ ಪಡೆದುಕೊಂಡಿಲ್ಲವೇ? ಏನು ಮಾಡುತ್ತಿದ್ದೀರಿ ಎಂದು ತೀವ್ರ ತರಾಟೆಗೆ ತೆಗೆದುಕೊಂಡಿದ್ದಾರೆ.

ಈ ಕೋಪ ಅಲ್ಲಿಗೆ ಶಮನಗೊಳ್ಳದೆ, ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಬಳಿಯೂ ಖಾರವಾಗಿ ಮಾತನಾಡಿದ್ದಾರೆ. ಇದರಿಂದ ಬೇಸತ್ತ ಯಡಿಯೂರಪ್ಪ ನನ್ನನ್ನು ಕೇವಲ ನೆಪ ಮಾತ್ರಕ್ಕೆ ಮುಂದಿಟ್ಟುಕೊಂಡು ಯಾತ್ರೆ ನಡೆಸುತ್ತಿದ್ದೀರಿ. ನೀವು ಲಾಭ ಪಡೆದು ನನ್ನನ್ನು ಆರೋಪದ ಸುಳಿಗೆ ಸಿಲುಕಿಸುವ ಹುನ್ನಾರ ನಡೆಸಿದ್ದೀರ ಎಂದೆಲ್ಲ ಕಿಡಿಕಾರಿದ್ದಾರೆ. ಬಿಜೆಪಿ ಎರಡನೇ ಹಂತದ ಯಾತ್ರೆಯಲ್ಲಿ ಕೋಪ ಬಿಟ್ಟು ಮುಖ್ಯಮಂತ್ರಿಯೊಂದಿಗೆ ಹೆಜ್ಜೆ ಹಾಕುತ್ತಾರೋ ಇಲ್ಲವೋ ಎಂಬುದನ್ನು ಕಾದುನೋಡಬೇಕು.

ಸಾಂಸ್ಕೃತಿಕ ನಗರ ಮೈಸೂರಲ್ಲಿ ಮದರ್‌ಹುಡ್ ಆಸ್ಪತ್ರೆ ಆರಂಭ

ಮೈಸೂರು, ಅ.25– ದೇಶದಲ್ಲಿ ಅತ್ಯಂತ ವೇಗವಾಗಿ ಬೆಳೆಯುತ್ತಿರುವ ಮಹಿಳೆಯರ ಮತ್ತು ಮಕ್ಕಳ ಆಸ್ಪತ್ರೆ ಸಮೂಹವಾಗಿರುವ ಮದರ್‌ಹುಡ್ ಹಾಸ್ಪಿಟಲ್ಸ್ ಮೈಸೂರು ನಗರದಲ್ಲಿ ತನ್ನ 19ನೇ ಆಸ್ಪತ್ರೆಯನ್ನು ಆರಂಭಿಸಿದೆ.

ಆಸ್ಪತ್ರೆಯನ್ನು ಮೈಸೂರು ರಾಜವಂಶಸ್ಥರಾದ ಯದುವೀರ್ ಕೃಷ್ಣದತ್ತ ಚಾಮರಾಜ ಒಡೆಯರ್ ಉದ್ಘಾಟಿಸಿದರು.

ಈ ಸಂದರ್ಭದಲ್ಲಿ ಮದರ್‌ಹುಡ್ ಹಾಸ್ಪಿಟಲ್ಸ್‌ನ ಸಿಇಓ ವಿಜಯರತ್ನ ವೆಂಕಟರಾಮನ್ ಮತ್ತು ವೈದ್ಯರ ತಂಡದ ಸದಸ್ಯರು ಉಪಸ್ಥಿತರಿದ್ದರು. ಬೆಂಗಳೂರಿನಿಂದ ಹೊರಗೆ ಆರಂಭವಾಗಿರುವ ಮೊದಲ ಮದರ್‌ಹುಡ್ ಆಸ್ಪತ್ರೆ ಇದಾಗಿದೆ. ಬೆಂಗಳೂರಿನಲ್ಲಿ 7 ಆಸ್ಪತ್ರೆಗಳನ್ನು ಹೊಂದಿದೆ.



ಮೈಸೂರು ಹೃದಯ ಭಾಗದಲ್ಲಿ ಆರಂಭವಾಗಿರುವ ಮದರ್‌ಹುಡ್ ಆಸ್ಪತ್ರೆಯು ಮಹಿಳೆಯರ ಆರೋಗ್ಯ ಆರೈಕೆ ಪ್ರೌಢಾವಸ್ಥೆಯಿಂದ ಋತುಬಂಧದವರೆಗೆ, ನವಜಾತ ಶಿಶುಗಳ ಆರೈಕೆ & ಮಕ್ಕಳ ಆರೈಕೆಗೆ ಸಮಗ್ರ ಸೌಲಭ್ಯವನ್ನು ಹೊಂದಿದೆ. ಇಲ್ಲಿ ನುರಿತ ಸ್ತ್ರೀರೋಗ ತಜ್ಞರು, ಮಕ್ಕಳ ತಜ್ಞರು, ನಿಯೋನ್ಯಾಟೋಲಾಜಿಸ್ಟ್‌ಗಳ ತಂಡವಿದ್ದು, ಅತ್ಯಾಧುನಿಕ ತಂತ್ರಜ್ಞಾನ ಮತ್ತು ಮೂಲಸೌಕರ್ಯವನ್ನು ಹೊಂದಿದೆ.

ಆಸ್ಪತ್ರೆ ಉದ್ಘಾಟನೆ ಮಾಡಿ ಮಾತನಾಡಿದ ರಾಜವಂಶಸ್ಥ ಯದುವೀರ್ ಕೃಷ್ಣದತ್ತ ಚಾಮರಾಜ ಒಡೆಯರ್, ಮೈಸೂರು ನಗರದಲ್ಲಿ ಮದರ್‌ಹುಡ್ ಹಾಸ್ಪಿಟಲ್ಸ್ ಆರಂಭಿಸುತ್ತಿರುವ ಈ ಸಂದರ್ಭದಲ್ಲಿ ನಾನು ಉಪಸ್ಥಿತನಿರುವುದು ಸಂತಸ ತಂದಿದೆ. ನಮ್ಮ ಸಮಾಜಕ್ಕೆ ನಿರ್ಣಾಯಕ ಸ್ಥಂಭಗಳಾಗಿದ್ದಾರೆ. ಇವರು ಪ್ರತಿ ಕುಟುಂಬದ ಆರೋಗ್ಯದ ಮೂಲಾಧಾರವಾಗಿದ್ದಾರೆ. ಅವರ ಒಳಗೊಳ್ಳುವಿಕೆ, ಕ್ರಿಯಾತ್ಮಕ ಮತ್ತು ನಿರ್ಣಯಿಸದ ಆರೋಗ್ಯ ಸೇವೆಗಳನ್ನು ಪಡೆದುಕೊಳ್ಳಬೇಕು. ಮಹಿಳೆಯರು ಮತ್ತು ಮಕ್ಕಳ ಆರೋಗ್ಯದಲ್ಲಿ ಅವರ ಪರಿಣಿತಿಯೊಂದಿಗೆ ನಮ್ಮ ನಗರದಲ್ಲಿ ಮದರ್‌ಹುಡ್ ಆಸ್ಪತ್ರೆಗಳನ್ನು ನಾವು ಸಂತೋಷದಿಂದ ಸ್ವಾಗತಿಸುತ್ತೇವೆ ಮತ್ತು ಆಸ್ಪತ್ರೆಯವರಿಗೆ ಶುಭ ಹಾರೈಸುತ್ತೇನೆ ಎಂದರು.

ಮದರ್‌ಹುಡ್ ಆಸ್ಪತ್ರೆಯ ಸಿಇಓ ವಿಜಯರತ್ನ ವೆಂಕಟರಾಮನ್ ಮಾತನಾಡಿ, ನಮ್ಮ ಮೈಸೂರು ಕೇಂದ್ರವನ್ನು ಆರಂಭಿಸುವುದರೊಂದಿಗೆ 1 ಮತ್ತು 2 ಶ್ರೇಣಿ ನಗರಗಳ ನಡುವೆ ಇರುವ ಆರೋಗ್ಯ ರಕ್ಷಣೆ ಸೇವೆಗಳ ಅಂತರವನ್ನು ಕಡಿಮೆ ಮಾಡಲಿದ್ದೇವೆ ಎಂಬ ವಿಶ್ವಾಸವಿದೆ. ನಾವು ಈ ಆಸ್ಪತ್ರೆಯನ್ನು ಕೇವಲ ಈ ನಗರದ ರೋಗಿಗಳನ್ನು ಗಮನದಲ್ಲಿಟ್ಟುಕೊಳ್ಳುವುದಿಲ್ಲ. ಇದರ ಜೊತೆಗೆ ನೆರೆಯ ಕೊಡಗು, ಚಾಮರಾಜನಗರ, ಚಿಕ್ಕಮಗಳೂರು, ಹಾಸನದಂತಹ ನಗರಗಳ ಜನರಿಗೂ ಇಲ್ಲಿ ಸೇವೆ ಒದಗಿಸುತ್ತೇವೆ ಎಂದರು.

ನಮ್ಮ ಮೈಸೂರು ಆಸ್ಪತ್ರೆಯಲ್ಲಿ ಆರಂಭಿಕ ರೋಗನಿರ್ಣಯ ಮತ್ತು ಚಿಕಿತ್ಸೆಗಾಗಿ ತಡೆಗಟ್ಟಬಹುದಾದ ಸ್ತ್ರೀರೋಗ ಆರೋಗ್ಯ ತಪಾಸಣೆಗಳ ಪ್ರಾಮುಖ್ಯತೆಯ ಕುರಿತು ಮಹಿಳೆಯರಲ್ಲಿ ಜಾಗೃತಿ ಮೂಡಿಸುವ ಗುರಿಯನ್ನು ಹೊಂದಿದ್ದೇವೆ ಎಂದು ಮದರ್ ಹುಡ್ ಹಾಸ್ಪಿಟಲ್ಸ್‌ನ ಸಿಇಓ ವಿಜಯರತ್ನ ವಿ. ತಿಳಿಸಿದರು.

ನ.1ರಂದು ಜೆಡಿಎಸ್‌ನಿಂದ 'ಬಾರಿಸು ಕನ್ನಡ ಡಿಂಡಿಮವ, ಹಾರಿಸು ಕನ್ನಡ ಬಾವುಟ'


ಬೆಂಗಳೂರು, ಅ.25– ಕನ್ನಡ ರಾಜ್ಯೋತ್ಸವ ಪ್ರಯುಕ್ತ ನವೆಂಬರ್ 1 ರಂದು ಜೆಡಿಎಸ್‌ನಿಂದ ಬಾರಿಸು ಕನ್ನಡ ಡಿಂಡಿಮವ ಹಾರಿಸು ಕನ್ನಡ ಬಾವುಟ' ಅಭಿಯಾನವನ್ನು ಆಯೋಜಿಸಲಾಗಿದೆ. ಅಂದು ಮನೆ ಮನೆಗಳ ಮೇಲೂ ಕನ್ನಡ ಬಾವುಟ ಹಾರಿಸುವುದರ ಮೂಲಕ ಈ ಅಭಿಯಾನಕ್ಕೆ ಸಹಕರಿಸಬೇಕಾಗಿ ಜಾತ್ಯತೀತ ಜನತಾದಳದ ರಾಜ್ಯಾಧ್ಯಕ್ಷ ಸಿ.ಎಂ. ಇಬ್ರಾಹಿಂ ನಾಡಿನ ಜನತೆಯಲ್ಲಿ ಮನವಿ ಮಾಡಿದ್ದಾರೆ.



ತಮಿಳು, ತೆಲುಗು, ಮಲಯಾಳಿಗಳಿಗೆ ತಮ್ಮ ಭಾಷೆಯ ಮೇಲಿರುವ ಅಭಿಮಾನದಂತೆ ಕನ್ನಡದ ಅಭಿಮಾನವನ್ನು ತೋರಿಸುವ ಕಾಲ ಬಂದಿದ್ದು, ನವೆಂಬರ್ 1 ರಂದು ನಾಡಿನ ಮನೆ ಮನೆಗಳ ಮೇಲೂ ಕನ್ನಡ ಬಾವುಟ ಹಾರಿಸುವ ಮೂಲಕ ಸೂಫಿ ಸಂತರ ನಾಡಿನ ಅಭಿಮಾನವನ್ನು ಪ್ರದರ್ಶಿಸಬೇಕಾಗಿದೆ ಎಂದು ಅವರು ಟ್ವೀಟರ್‌ನಲ್ಲಿ ಮನವಿ ಮಾಡಿದ್ದಾರೆ.

ಎಸ್‌ಸಿ/ಎಸ್‌ಟಿ ಮೀಸಲಾತಿ ಕಾಂಗ್ರೆಸ್ ಕೂಸು

ಬೆಂಗಳೂರು, ಅ.25– ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡ ಮೀಸಲಾತಿ ಕಾಂಗ್ರೆಸ್ ಪಕ್ಷದ ಕೂಸು. ನ್ಯಾ.ನಾಗಮೋಹನ್ ದಾಸ್ ಸಮಿತಿ ನಾವು ಮಾಡಿದ್ದಕ್ಕೆ ಯಶಸ್ಸು ಕಂಡಿದೆ ಎಂದು ಬಿಜೆಪಿಗೆ ಕೆಪಿಸಿಸಿ ಅಧ್ಯಕ್ಷ ಡಿ.ಕೆ.ಶಿವಕುಮಾರ್ ತಿರುಗೇಟು ನೀಡಿದ್ದಾರೆ.



ಕೆಪಿಸಿಸಿ ಕಚೇರಿಯಲ್ಲಿ ಈ ಸಂಬಂಧ ಸುದ್ದಿಗೋಷ್ಠಿ ನಡೆಸಿ ಮಾತನಾಡಿದ ಅವರು, ಕಾಂಗ್ರೆಸ್ ಪಕ್ಷದ ಬಯಕೆ ಜನಾಂಗಕ್ಕೆ ನ್ಯಾಯ ಒದಗಿಸಬೇಕು ಎನ್ನುವುದಾಗಿದೆ. ಎಸ್‌ಟಿ ಜನಾಂಗದ ಮೇಲೆ ಬಿಜೆಪಿಗೆ ನಂಬಿಕೆ ಇಲ್ಲ. ಅಧಿಕಾರ ಬಂದ 24 ಗಂಟೆಯಲ್ಲೇ ಬಿಜೆಪಿ ಇದನ್ನು ಮಾಡಬೇಕಿತ್ತು ಎಂದು ಹೇಳಿದ್ದಾರೆ. ಕಾಂಗ್ರೆಸ್‌ನಿಂದಾಗಿ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದವರಿಗೆ ಮೀಸಲಾತಿ ಆಧಾರದ ಮೇಲೆ ಉದ್ಯೋಗ ಸಿಗುತ್ತಿದೆ. ಈ ಮೀಸಲಾತಿ ನೀಡುವ ವಿಚಾರವಾಗಿ ನ್ಯಾಯಮೂರ್ತಿ ನಾಗಮೋಹನ್ ದಾಸ್ ನೇತೃತ್ವದಲ್ಲಿ ಸಮಿತಿ ರಚಿಸಿದ್ದೆವು. ಸಮಿತಿಯ ವರದಿ ಜಾರಿಗೆ ಕಾಂಗ್ರೆಸ್ ಕೂಡ ಒತ್ತಾಯಿಸಿತ್ತು. ಈ ಸಮುದಾಯಗಳಿಗೆ ನ್ಯಾಯ ಸಿಗಬೇಕು ಎಂಬುದು ನಮ್ಮ ಪಕ್ಷದ ನಂಬಿಕೆಯಾಗಿದೆ. ಸರ್ಕಾರದ ಈ ಮೀಸಲಾತಿಗೆ ನಾವು ನಮ್ಮ ಬೆಂಬಲವನ್ನು ವ್ಯಕ್ತಪಡಿಸಿದ್ದೇವೆ ಎಂದು ಹೇಳಿದ್ದಾರೆ.

ರಾಜ್ಯದಲ್ಲಿ ಈಗಲೂ ಡಬಲ್ ಇಂಜಿನ್ ಸರ್ಕಾರ ಇದೆ. ಬರೀ ಪೇಪರ್‌ನಲ್ಲಿ ಇಟ್ಟು ಚಾಕ್ಲೆಟ್ ಕೊಡೋಕೆ ಹೋಗಬೇಡಿ. ಬಿಜೆಪಿ ತೀರ್ಮಾನ ಕೇವಲ ಕಣ್ಣು ಒರೆಸುವುದಷ್ಟೇ, ಬೇರೇನೂ ಇಲ್ಲ. ಸಿಎಂ ದೆಹಲಿಯಲ್ಲಿ ಕೂತು ಪಾರ್ಲಿಮೆಂಟ್‌ನಲ್ಲಿ ಇಟ್ಟು 9ನೇ ಶೆಡ್ಯೂಲ್‌ನಲ್ಲಿ ಮಾಡಲಿ ಎಂದು ಡಿ.ಕೆ.ಶಿವಕುಮಾರ್ ಸವಾಲು ಹಾಕಿದ್ದಾರೆ.

ಅ.30ರಂದು ದಕ್ಷಿಣ ಕನ್ನಡ, ಕರಾವಳಿ ಜಿಲ್ಲಾ ಸಂಘಗಳ ಒಕ್ಕೂಟ ಉದ್ಘಾಟನೆ

ಮೈಸೂರು,ಅ.25(ಆರ್‌ಕೆಬಿ)–ದಕ್ಷಿಣ ಕನ್ನಡ ಮತ್ತು ಕರಾವಳಿ ಜಿಲ್ಲಾ ಸಂಘಗಳ ಒಕ್ಕೂಟದ ಉದ್ಘಾಟನಾ ಸಮಾರಂಭ ಅ.30ರಂದು ಬೆಳಗ್ಗೆ 10.30ಕ್ಕೆ ಮೈಸೂರಿನ ಕಲಾಮಂದಿರದಲ್ಲಿ ನಡೆಯಲಿದೆ. ಮೇಯರ್ ಶಿವಕುಮಾರ್ ಒಕ್ಕೂಟವನ್ನು ಉದ್ಘಾಟಿಸಲಿದ್ದು, ಸಂಗೀತ ನಿರ್ದೇಶಕ ಗುರುಕಿರಣ್, ಸುರೇಶ್ ಶೆಟ್ಟಿ ಗುರ್ಮೆ, ಡಾ.ಶಿವಶರಣ ಶೆಟ್ಟಿ ಅತಿಥಿಯಾಗಿ ಭಾಗವಹಿಸುವರು. ಉದ್ಘಾಟನೆ ನಂತರ ಮಂಗಳೂರಿನ ಬಲೆ ತೆಲಿಪಾಲೆ ಆವೃತ್ತಿ 10ರ ಮೊದಲ ಸುತ್ತಿನ ಸ್ಪರ್ಧೆ ನಡೆಯಲಿದೆ. ಒಕ್ಕೂಟದ ಗೌರವಾಧ್ಯಕ್ಷ ಸುಧಾಕರ ಶೆಟ್ಟಿ, ಅಧ್ಯಕ್ಷ ಗ್ರೇಶಿಯಸ್ ರೋಡ್ರಿಗ್ಸ್ ಇನ್ನಿತರರು ಭಾಗವಹಿಸುವರು.

ಅರ್ಜಿ ಆಹ್ವಾನ

ಮೈಸೂರು,ಅ.25–ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆ ವತಿಯಿಂದ ಕೆ.ಆರ್ ನಗರ ಹಾಗೂ ಸಾಲಿಗ್ರಾಮ ತಾಲೂಕಿನಲ್ಲಿ ಖಾಲಿ ಇರುವ ಸ್ಥಾನಗಳಿಗೆ ಹೊಸದಾಗಿ ಪ್ರವೇಶ ಕೋರುವ ಹಿಂದುಳಿದ ವರ್ಗಗಳಿಗೆ ಸೇರಿದ ವರ್ಗ– 1 2a, 2b,3a, 3b ಪರಿಶಿಷ್ಟ ಜಾತಿ ಹಾಗೂ ಪರಿಶಿಷ್ಟ ಪಂಗಡಗಳಿಗೆ ಸೇರಿದ ಅರ್ಹ ವಿದ್ಯಾರ್ಥಿಗಳಿಂದ ಆನ್‌ಲೈನ್ ಅರ್ಜಿಗಳನ್ನು ಆಹ್ವಾನಿಸಲಾಗಿದ್ದು, ನವೆಂಬರ್ 10ರೊಳಗಾಗಿ ಅರ್ಜಿ ಸಲ್ಲಿಸಲು ತಿಳಿಸಿದೆ. ಹೆಚ್ಚಿನ ಮಾಹಿತಿಗೆ ದೂ.ಸಂ: 08223–262230.

ಓಮಿಕ್ರಾನ್ ಬಿಎಫ್ 7 ಆತಂಕ: ಕೋವಿಡ್ ನಿಯಮ ಪಾಲಿಸುವಂತೆ ತಜ್ಞರ ಮನವಿ

ಬೆಂಗಳೂರು, ಅ.25– ಭಾರತದ ವಿವಿಧ ಭಾಗಗಳಲ್ಲಿ ಓಮಿಕ್ರಾನ್ ಬಿಎಫ್ 7 ಉಪ–ವೇರಿಯಂಟ್ ಪತ್ತೆಯಾದ ಹಿನ್ನೆಲೆಯಲ್ಲಿ, ಕರ್ನಾಟಕದಲ್ಲಿ ಕೋವಿಡ್–19 ಪ್ರೋಟೋಕಾಲ್‌ಗಳನ್ನು ಶ್ರದ್ಧೆಯಿಂದ ಅನುಸರಿಸಬೇಕು ಎಂದು ತಜ್ಞರು ಕರೆ ನೀಡಿದ್ದಾರೆ.

ಓಮಿಕ್ರಾನ್ ಸ್ಪಾನ್ ಎಂದು ಕರೆಯಲ್ಪಡುವ BF.7 ಉಪತಳಿ ಹೆಚ್ಚಿನ ಪ್ರಸರಣವನ್ನು ಹೊಂದಿದೆ ಮತ್ತು ಲಸಿಕೆ ಪ್ರತಿರಕ್ಷೆಯನ್ನು ಮೀರಿ ಹೋಗುವ ಸಾಧ್ಯತೆ ಇದೆ ಎಂದು ಕೇರ್ ಹಾಸ್ಪಿಟಲ್ಸ್ ಗ್ರೂಪ್‌ನ ಆಂತರಿಕ ವೈದ್ಯಕೀಯ ಸಲಹೆಗಾರ ನವೋದಯ ಗಿಲ್ಲಾ ಎಚ್ಚರಿಸಿದ್ದಾರೆ.

ಈ ಹೊಸ ರೂಪಾಂತರಿ ಹಿಂದಿನ ರೂಪಾಂತರದೊಂದಿಗೆ ನೈಸರ್ಗಿಕ ಸೋಂಕಿನ ಮೂಲಕ ಅಥವಾ ಲಸಿಕೆಗಳ ಸಂಪೂರ್ಣ ಕೋರ್ಸ್ ತೆಗೆದುಕೊಂಡರೂ ಸಹ ಸೋಂಕು ತಗುಲುವ ಸಾಧ್ಯತೆ ಇದೆ ಎಂದು ಹೇಳಿದ್ದಾರೆ. ಈ ಹೊಸ ಓಮಿಕ್ರಾನ್ ರೂಪಾಂತರವು ಮೊದಲು ಚೀನಾದಲ್ಲಿ ಪತ್ತೆಯಾಯಿತು. ಭಾರತದಲ್ಲಿ ಓಮಿಕ್ರಾನ್ ಉಪ ತಳಿಯ ಮೊದಲ ಪ್ರಕರಣವನ್ನು ಗುಜರಾತ್‌ನಲ್ಲಿ ಪತ್ತೆಹಚ್ಚಲಾಗಿದೆ. ಆರಂಭದಲ್ಲಿ ಈ ವೈರಸ್ ಹಲವಾರು ಬಾರಿ ರೂಪಾಂತರಗೊಂಡಿತು ಮತ್ತು WHO ಡೆಲ್ಟಾ ರೂಪಾಂತರ ಅತ್ಯಂತ ತೀವ್ರವಾದದ್ದು ಎಂದು ಘೋಷಿಸಿತು. ಹೊಸ BF.7 ಉಪ–ವೇರಿಯಂಟ್‌ನ ಲಕ್ಷಣಗಳು ಸಾಮಾನ್ಯ ಜ್ವರಕ್ಕೆ ಹೋಲುತ್ತವೆ ಮತ್ತು ಶೀತ, ಕೆಮ್ಮು, ಜ್ವರ, ದೇಹದ ನೋವು ಇತ್ಯಾದಿಗಳನ್ನು ಒಳಗೊಂಡಿರುತ್ತದೆ. ಇದು ಹೆಚ್ಚು ಹರಡುವ ಕಾರಣ ಕಡಿಮೆ ಅವಧಿಯೊಳಗೆ ದೊಡ್ಡ ಗುಂಪಿನ ಜನರಿಗೆ ಹರಡುತ್ತದೆ. ಹೀಗಾಗಿ ಜನ ಕೋವಿಡ್ ನಿಯಮಗಳನ್ನು ಪಾಲಿಸಬೇಕು ಎಂದು ನವೋದಯ ಗಿಲ್ಲಾ ಹೇಳಿದ್ದಾರೆ.

ಅ.28ರಂದು ಜೆಪಿ ಹುಟ್ಟುಹಬ್ಬ ಪ್ರಯುಕ್ತ ಉಚಿತ ವೈದ್ಯಕೀಯ ತಪಾಸಣಾ ಶಿಬಿರ

ಮೈಸೂರು, ಅ.25(ಆರ್‌ಕೆಬಿ)– ಬಿಜೆಪಿ ಮುಖಂಡ ಹಾಗೂ ಸಿಂಡಿಕೇಟ್ ಮಾಜಿ ಸದಸ್ಯ ಎಸ್.ಜಯಪ್ರಕಾಶ್ (ಜೆಪಿ) ಅವರ ಹುಟ್ಟುಹಬ್ಬ ಪ್ರಯುಕ್ತ ಅ.28ರಂದು ಬೆಳಗ್ಗೆ 10.15ಕ್ಕೆ ಜೆಎಲ್‌ಬಿ ರಸ್ತೆಯ ನಂಜರಾಜ ಬಹದ್ದೂರ್ ಸಭಾಂಗಣದಲ್ಲಿ ಉಚಿತ ವೈದ್ಯಕೀಯ ತಪಾಸಣಾ ಶಿಬಿರ ಹಮ್ಮಿಕೊಳ್ಳಲಾಗಿದೆ ಎಂದು ಜೆ.ಪಿ.ಅಭಿಮಾನಿಗಳ ಬಳಗದ ಪ್ರಧಾನ ಕಾರ್ಯದರ್ಶಿ ಡಿ.ಮಹೇಶ್‌ನಾಯಕ್ ತಿಳಿಸಿದರು.



ಮೈಸೂರು ಪತ್ರಕರ್ತರ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿ, ರಕ್ತದೊತ್ತಡ, ಇನ್ನಿತರ ಸಾಮಾನ್ಯ ಅನಾರೋಗ್ಯ ಸಮಸ್ಯೆಗಳ ತಪಾಸಣೆ ನಡೆಸಿ, ಅಗತ್ಯ ಔಷಧಿ ನೀಡಲಾಗುವುದು. ಹೀಗಾಗಿ ಸಾರ್ವಜನಿಕರು ಪ್ರಯೋಜನ ಪಡೆಯಬೇಕು ಎಂದು ಹೇಳಿದರು. ಪದಾಧಿಕಾರಿಗಳಾದ ಅಶೋಕ್ ಸುಬ್ಬಣ್ಣ, ಆರ್. ಮಂಜುಳಾ, ಕೆ. ಮಂಜುಳಾ, ನಾಗರಾಜು ಉಪಸ್ಥಿತರಿದ್ದರು.

ಶಹಾಪುರ ಹಗರಣ ತನಿಖೆಗೆ ಒತ್ತಾಯಿಸಿ ಸಿಎಂಗೆ ಮನವಿ

ಮೈಸೂರು, ಅ.25–ಮೈಸೂರಿನಲ್ಲಿ ಕೇಂದ್ರ ಕಚೇರಿ ಹೊಂದಿದ್ದ ವಯಸ್ಕರ ಶಿಕ್ಷಣ ಸಮಿತಿಯಲ್ಲಿ 40 ವರ್ಷಗಳ ಹಿಂದೆ ನಡೆದಿದ್ದ ಶಹಾಪುರ ಹಗರಣ ತನಿಖೆಗೆ ಒತ್ತಾಯಿಸಿ ಮೈಸೂರಿನ ಕರ್ನಾಟಕ ರಾಜ್ಯ ಹಿಂದುಳಿದ ವರ್ಗಗಳ, ಪರಿಶಿಷ್ಟ ಜಾತಿ/ಪರಿಶಿಷ್ಟ ಪಂಗಡಗಳ ಅಲ್ಪಸಂಖ್ಯಾತರ ಸಹಕಾರ ಸಂಘಗಳ ಮಹಾಮಂಡಳ ಅಧ್ಯಕ್ಷ ಟಿ.ನಾಗರಾಜು ಮೈಸೂರು ಜಿಲ್ಲಾಧಿಕಾರಿಗಳ ಮೂಲಕ ಮುಖ್ಯಮಂತ್ರಿಗಳಿಗೆ ಮನವಿ ಸಲ್ಲಿಸಿದ್ದಾರೆ.

ಈ ಬಗ್ಗೆ ಪ್ರತಿಕಾ ಪ್ರಕಟಣೆ ನೀಡಿರುವ ಅವರು, ಪ್ರಸ್ತುತ ವಯಸ್ಕರ ಶಿಕ್ಷಣ ಸಮಿತಿ ವಿಸರ್ಜನೆಯಾಗಿದೆ. ಆದರೆ, 981–82ರ ಸಾಲಿನಲ್ಲಿ ಯಾದಗಿರಿ ಜಿಲ್ಲೆಯ ಶಹಾಪುರ ತಾಲೂಕಿನಲ್ಲಿ ವಯಸ್ಕರ ಶಿಕ್ಷಣ ಯೋಜನೆಗೆ ಮೈಸೂರು ಕೇಂದ್ರದಿಂದ 1,35,376,92 ರೂ. ಬಿಡುಗಡೆಯಾಗಿತ್ತು. ಆದರೆ ಹಣ ದುರುಪಯೋಗವಾಗಿರುವ ಬಗ್ಗೆ ಆ ಸಾಲಿನಲ್ಲಿ ನಡೆದ ಲೆಕ್ಕ ಪರಿಶೋಧನೆಯಲ್ಲಿ ಕಂಡು ಬಂದಿದ್ದು, 87,118,38 ರೂ.ಗೆ ಸಂಬಂಧಪಟ್ಟ ಅಧಿಕಾರಿಗಳು ಲೆಕ್ಕ ನೀಡಿಲ್ಲ. ಇದರ ಹೊಣೆ ಯಾರೂ ಹೊರಬೇಕು? ಇದರಿಂದ ಕನ್ನಡಿಗರ ತೆರಿಗೆ ಹಣ ದುರುಪಯಪಯೋಗವಾಗಿರುವುದು ಕಂಡುಬರುತ್ತಿದೆ. 40 ವರ್ಷದ ಈ ಹಗರಣಕ್ಕೆ ಮುಕ್ತಿ ಕಾಣಿಸಲು ಕೂಡಲೇ ಸಂಬಂಧಪಟ್ಟ ಜಿಲ್ಲಾಧಿಕಾರಿಗಳಿಗೆ ತನಿಖೆಗೆ ಸೂಚನೆ ನೀಡಬೇಕು ಎಂದು ಟಿ.ನಾಗರಾಜು ಮನವಿಯಲ್ಲಿ ಒತ್ತಾಯಿಸಿದ್ದಾರೆ.


ಅ.28ರಿಂದ ನ.17ರವರೆಗೆ ಉಚಿತ ಮದ್ಯವರ್ಜನ ಶಿಬಿರ

ಮೈಸೂರು,ಅ.25(ಪಿಎಂ)– ಹೆಬ್ಬಾಳು ರಿಂಗ್ ರಸ್ತೆಯಲ್ಲಿರುವ ಬಸವ ಮಾರ್ಗ ಫೌಂಡೇಷನ್ ವತಿಯಿಂದ ಅ.28ರಿಂದ ನ17ರವರೆಗೆ 21 ದಿನಗಳು 20ನೇ ಉಚಿತ ಮದ್ಯವರ್ಜನ ಶಿಬಿರ ಆಯೋಜಿಸಲಾಗಿದೆ ಎಂದು ಫೌಂಡೇಷನ್ ವ್ಯವಸ್ಥಾಪಕ ಮಹೇಶ್ ತಿಳಿಸಿದರು.



ಜಿಲ್ಲಾ ಪತ್ರಕರ್ತರ ಭವನದಲ್ಲಿ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಅವರು, ಈವರೆಗೆ ನಮ್ಮ ಫೌಂಡೇಷನ್ ವತಿಯಿಂದ 19 ಉಚಿತ ಮದ್ಯವರ್ಜನ ಶಿಬಿರಗಳನ್ನು ಆಯೋಜಿಸಿ ಸಾವಿರಾರು ಮಂದಿ ಮದ್ಯ ವ್ಯಸನದಿಂದ ಮುಕ್ತರಾಗುವಂತೆ ಮಾಡಲಾಗಿದೆ. ಇದೀಗ ಫೌಂಡೇಷನ್‌ನಲ್ಲಿ 20ನೇ ಉಚಿತ ಶಿಬಿರ ಆಯೋಜಿಸಿದ್ದು, ಅ.30ರಂದು ಬೆಳಗ್ಗೆ 11ಕ್ಕೆ ಶಿಬಿರದ ಉದ್ಘಾಟನಾ ಸಮಾರಂಭ ನಡೆಯಲಿದೆ. ಶಿಬಿರದ ವಿವರಗಳಿಗೆ ಮೊ.ಸಂ. 88033 44999 ಅನ್ನು ಸಂಪರ್ಕಿಸಬಹುದು ಎಂದು ಹೇಳಿದರು. ಫೌಂಡೇಷನ್‌ನ ಆಪ್ತ ಸಮಾಲೋಚಕ ಜಯರಾಮ್, ಸಿಬ್ಬಂದಿ ಮಧು ಸುದ್ದಿಗೋಷ್ಠಿಯಲ್ಲಿದ್ದರು.

ಮೈಸೂರು ಹಾಗೂ ಸುತ್ತಮುತ್ತ ಇಂದು...



ಇಂದಿನ ಪಂಚಾಂಗ

26.10.2022 ಬುಧವಾರ, ಮಳೆ ನಕ್ಷತ್ರ: ಸ್ವಾತಿ, 24.10.2022 ರಿಂದ 07.11.2022
ಶ್ರೀ ಶುಭಕೃತು ನಾಮ ಸಂವತ್ಸರ, ದಕ್ಷಿಣಾಯನ, ಶರದ್ ಋತು, ಕಾರ್ತಿಕ ಮಾಸ, ಶುಕ್ಲ ಪಕ್ಷ,
ತಿಥಿ: ಪ್ರತಿಪತ್, ನಕ್ಷತ್ರ : ಸ್ವಾತಿ, ರಾಹುಕಾಲ: ಮಧ್ಯಾಹ್ನ 12 ರಿಂದ 1.30ರವರೆಗೆ

■ **ಗ್ರೇಟ್ ಬಾಂಬೆ ಸರ್ಕಸ್ :** ಮೂರು ಪ್ರದರ್ಶನಗಳು, ಸ್ಥಳ: ಮೈಸೂರು ಮೃಗಾಲಯ ಹಿಂಭಾಗ, ಕಾರಂಜಿ ಕೆರೆ ಹತ್ತಿರ, ಮಧ್ಯಾಹ್ನ 1, 4 ಮತ್ತು 7 ಗಂಟೆಗೆ

■ **ಪಂಚಮುಖಿ ಆಂಜನೇಯಸ್ವಾಮಿ ದೇವಸ್ಥಾನ :** ಲೋಕಕಲ್ಯಾಣಾರ್ಥವಾಗಿ ಬೆಳಗ್ಗೆ 8.30 ರಿಂದ 9.30ಕ್ಕೆ ಹೋಮ, ಪೂರ್ಣಾಹುತಿ, ಮಹಾಮಂಗಳಾರತಿ, ತೀರ್ಥಪ್ರಸಾದ ವಿನಿಯೋಗ, ಸ್ಥಳ:ಪಂಚಮುಖಿ ಆಂಜನೇಯಸ್ವಾಮಿ ದೇವಸ್ಥಾನ, ಇರ್ವಿನ್ ರಸ್ತೆ.

■ **ಕುಂಬಾರಕೊಪ್ಪಲು ಶ್ರೀ ಮಹದೇಶ್ವರಸ್ವಾಮಿ ಜಾತ್ರಾ ಸಮಿತಿ :** ದೀಪಾವಳಿ ಹಬ್ಬದ ಪ್ರಯುಕ್ತ ಶ್ರೀ ಮಹದೇಶ್ವರ ಜಾತ್ರಾ ಮಹೋತ್ಸವ, ಹಾಲರವಿ, ರಾತ್ರಿ 8ಕ್ಕೆ ಸಿದ್ದಪ್ಪಾಜಿ ಕೊಳದಿಂದ ಬಾಯಿ ಬೀಗ ಧಾರ್ಮಿಕ ಕಾರ್ಯಕ್ರಮ, ಪ್ರಮುಖ ಬೀದಿಗಳಲ್ಲಿ ಪೂಜಾ ಕುಣಿತ, ಡೊಳ್ಳು ಕುಣಿತ, ನಾದಸ್ವರ, ಸ್ಥಳ: ದೇವಸ್ಥಾನ, ಕುಂಬಾರಕೊಪ್ಪಲು.

ಮೈಸೂರು ಆಕಾಶವಾಣಿ




ಬೆಳಗ್ಗೆ: 6.05 ಚಿಂತನ–ಮಾ ವೆಂಕಟರಾಂ, 6.20 ಗೀತಾರಾಧನ, 6.35 ನಖ ಶಿಖಾಂತ–ಆರೋಗ್ಯ ಸೌಂದರ್ಯಗಳ ವೈಜ್ಞಾನಿಕ ಮಾಹಿತಿ –ಡಾ. ಕೇಶವ ಕೊರಸೆ, 6.40 ಅರಿವಿನ ಶಿಖರ– ಸಿ. ವಿಶ್ವನಾಥ್, ವ್ಯಾಖ್ಯಾನ– ಡಾ ಪ್ರದೀಪ್ ಕುಮಾರ್ ಹೆಬ್ರಿ, 10.00 ಆರ್.ರಂಗಸ್ವಾಮಿ –ನಾಗಸ್ವರವಾದನ, 11.00 ನಿಮ್ಮೊಂದಿಗೆ ಮೈಸೂರು ಆಕಾಶವಾಣಿ

ಮಧ್ಯಾಹ್ನ: 12.30 ದೇವರನಾಮ–ವೃಂದಗಾನ, 12.45 ಕನ್ನಡಿಯಲ್ಲಿ ಕಂಡಂತೆ ಮಾಲಿಕೆಯಲ್ಲಿ ಪ್ರಹಸನ "ಕೊರಿಯರ್", ರಚನೆ– ಯಮುನಾ ಮೂರ್ತಿ, ನಿರ್ಮಾಣ–ಪ್ರಭುಸ್ವಾಮಿ ಮಳಿಮಠ್, 1.20 ಭಾವಗೀತೆ – ಎನ್.ಆರ್.ವಿನಯ್ ಕುಮಾರ್, ಸುನೀತಾ ಚಂದ್ರಕುಮಾರ್, 4.00 ಮಹಿಳಾರಂಗ–ಸ್ತ್ರೀ ಚೇತನ, ಭಾಗವಹಿಸುವುಅವರು ಎಂ.ಜಿ. ಚೇತನಾ, 4.45 ಹಿಂದಿ ಪಾಠ– ಡಾ. ಅನುರಾಧಾಮೂರ್ತಿ, 6.50 ಕೃಷಿರಂಗ –ಕಿಸಾನ್ ವಾಣಿ–ಸಿರಿದಾನ್ಯಗಳ ಕೃಷಿ ಮೌಲ್ಯವರ್ಧನೆ ಹಾಗೂ ಮಾರಾಟದಲ್ಲಿನ ಅನುಭವ ಕುರಿತು ಬಿ. ಮಹೇಶ್ ಕುಮಾರ್ ಹಾಗೂ ಸೌಮ್ಯ ಅವರೊಂದಿಗೆ ಸಂದರ್ಶನ ಭಾಗ–1, 10.00 "ಬಲೀಂದ ಮೋಕ್ಷ"–ನಾಗನಹಳ್ಳೀ ಕಾಳಯ್ಯ ಅವರಿಂದ ಕಥಾಕಾಲಕ್ಷೇಪ, 10.30 ಸವಿನೆನಪು

ಶ್ರೀ ಸುತ್ತೂರು ಕ್ಷೇತ್ರ, ನಂಜನಗೂಡು ತಾ.

■ **ಜಗದ್ಗುರು ಶ್ರೀ ವೀರಸಿಂಹಾಸನ ಮಹಾಸಂಸ್ಥಾನ ಮಠ :** ಆದಿಜಗದ್ಗುರು ಶ್ರೀ ಶಿವರಾತ್ರೀಶ್ವರ ಶಿವಯೋಗಿಗಳವರ ಕರ್ತೃಗದ್ದುಗೆ ಶ್ರೀ ವೀರಭದ್ರೇಶ್ವರ ಮತ್ತು ಶ್ರೀ ಸೋಮೇಶ್ವರ ದೇವಸ್ಥಾನಗಳ ಕಾರ್ತಿಕ ಮಾಸದ ವಿಶೇಷ ಪೂಜಾ ಕಾರ್ಯಕ್ರಮಗಳು.

ಮೈಸೂರು ಹಾಗೂ ಸುತ್ತಮುತ್ತ ನಾಳೆ...




ನಾಳಿನ ಪಂಚಾಂಗ

27.10.2022 ಗುರುವಾರ, ಮಳೆ ನಕ್ಷತ್ರ: ಸ್ವಾತಿ, 24.10.2022 ರಿಂದ 07.11.2022
ಶ್ರೀ ಶುಭಕೃತು ನಾಮ ಸಂವತ್ಸರ, ದಕ್ಷಿಣಾಯನ, ಶರದ್ ಋತು, ಕಾರ್ತಿಕ ಮಾಸ, ಶುಕ್ಲ ಪಕ್ಷ,
ತಿಥಿ: ದ್ವಿತೀಯ, ನಕ್ಷತ್ರ : ವಿಶಾಖ, ರಾಹುಕಾಲ: ಮಧ್ಯಾಹ್ನ 1.30ರಿಂದ 3ರವರೆಗೆ

■ **ಗ್ರೇಟ್ ಬಾಂಬೆ ಸರ್ಕಸ್ :** ಮೂರು ಪ್ರದರ್ಶನಗಳು, ಸ್ಥಳ: ಮೈಸೂರು ಮೃಗಾಲಯ ಹಿಂಭಾಗ, ಕಾರಂಜಿ ಕೆರೆ ಹತ್ತಿರ, ಮಧ್ಯಾಹ್ನ 1, 4 ಮತ್ತು 7 ಗಂಟೆಗೆ

■ **ಕುಂಬಾರಕೊಪ್ಪಲು ಶ್ರೀ ಮಹದೇಶ್ವರಸ್ವಾಮಿ ಜಾತ್ರಾ ಸಮಿತಿ :** ದೀಪಾವಳಿ ಹಬ್ಬದ ಪ್ರಯುಕ್ತ ಶ್ರೀ ಮಹದೇಶ್ವರ ಜಾತ್ರಾ ಮಹೋತ್ಸವ, ಬೆಳಗಿನ ಜಾವ 3 ಗಂಟೆಗೆ ಶ್ರೀ ಮಹದೇಶ್ವರಸ್ವಾಮಿ ಹುಲಿ ವಾಹನೋತ್ಸವ ಮೆರವಣಿಗೆ ಊರಿನ ಪ್ರಮುಖ ಬೀದಿಗಳಲ್ಲಿ, ಮಧ್ಯಾಹ್ನ 12ಕ್ಕೆ ಶ್ರೀ ಮಹದೇಶ್ವರ ಸಮುದಾಯ ಭವನದಲ್ಲಿ ಅನ್ನ ಸಂತರ್ಪಣೆ, ಕೊಂಡೋತ್ಸವದ ಬಳಿಕ ಶ್ರೀ ಕೆಂಪೇಗೌಡ ಕ್ರೀಡಾಂಗಣದಲ್ಲಿ ಬಯಲು ಕುಸ್ತಿ ಪಂದ್ಯಾವಳಿ, ಸ್ಥಳ: ದೇವಸ್ಥಾನ, ಕುಂಬಾರಕೊಪ್ಪಲು.

ಮೈಸೂರು ಆಕಾಶವಾಣಿ



ಬೆಳಗ್ಗೆ: 6.05 ಚಿಂತನ, 6.20 ಗೀತಾರಾಧನ, 6.35 ಹಾಗೂ ಸಂಜೆ 5.00ಕ್ಕೆ 'ಒಂದೇ ಕಥೆ' ವಿವಿಧ ಮುಖ– ಬಾನುಲಿ ಸರಣೀ, ಪ್ರಸ್ತುತಿ– ಪ್ರಭುಸ್ವಾಮಿ ಮಳಿಮಠ, 6.40 ಅರಿವಿನ ಶಿಖರ, ಗಾಯನ– ಎಂ.ಡಿ. ಸುಮತಿ ಮುರಾರಿ, ಪಿ.ಸುರಭೀ, ವ್ಯಾಖ್ಯಾನ– ಡಾ. ಹೆಚ್.ಎಂ. ಕಲಾಶ್ರೀ, 10.00 ಎಸ್. ಮಹದೇವಪ್ಪ–ವಯೋಲಿನ್ ವಾದನ, 11.00ನಿಮ್ಮೊಂದಿಗೆ ಮೈಸೂರು ಆಕಾಶವಾಣಿ

ಮಧ್ಯಾಹ್ನ: 12.00ಟಿ–20 ವಿಶ್ವ ಕಪ್ ಕ್ರಿಕೆಟ್ ಪಂದ್ಯದ ವೀಕ್ಷಕ ವಿವರಣೆ, 4.30 ಕನ್ನಡ ಭಾರತಿ–ಭಾಸ್ಕರ್ ಕೊತ್ತತ್ತಿ ಅವರಿಂದ ಸಣ್ಣಕಥೆ ಮಹದೇವಪ್ಪನ ಮೌನ ಮೆರವಣಿಗೆ, ಕಾವ್ಯಧಾರೆ–ಮಹದೇವ ಸಂಕನಪುರ ಅವರಿಂದ ಸ್ವರಚಿತ ಕವನಗಳ ವಾಚನ, 6.50 ಕೃಷಿರಂಗ–ಕಿಸಾನ್‌ವಾಣಿ, ಸಿರಿದಾನ್ಯಗಳ ಕೃಷಿ ಮೌಲ್ಯವರ್ಧನೆ ಹಾಗೂ ಮಾರಾಟದಲ್ಲಿನ ಅನುಭವ ಕುರಿತು ಬಿ. ಮಹೇಶ್ ಕುಮಾರ್ ಹಾಗೂ ಸೌಮ್ಯ ಅವರೊಂದಿಗೆ ಸಂದರ್ಶನ ಭಾಗ–2, 9.00 ಯುವವಾಣಿ–ಆಪಥಾನ್ 2022, ಅಂತಾರಾಷ್ಟ್ರೀಯ ಆಪ್ ಡೆವಲಪ್ ಮೆಂಟ್ ಸ್ಪರ್ಧೆ ಕುರಿತು ಮಾತುಕತೆ. ಭಾಗವಹಿಸುವವರು ವೇದಂತ್ ಎಸ್., ವರುಣ್ ಎಂ.ಎನ್., ರಾಹುಲಿ ಟಿ., ಅನಿರುದ್ಧ ಸಿ.ಎ., ಪ್ರಚಲ್ ವಿಲಾಸ್, ಬೇದ್ರೆ ಎಂ. ಸಮರ್ಥ್ ಮತ್ತು ಲೋಕೇಶ್ ಸಿ., 10.00 ನಾಟಕ, 10.30 ಸವಿನೆನಪು

ಶ್ರೀ ಸುತ್ತೂರು ಕ್ಷೇತ್ರ, ನಂಜನಗೂಡು ತಾ.

■ **ಜಗದ್ಗುರು ಶ್ರೀ ವೀರಸಿಂಹಾಸನ ಮಹಾಸಂಸ್ಥಾನ ಮಠ :** ಆದಿಜಗದ್ಗುರು ಶ್ರೀ ಶಿವರಾತ್ರೀಶ್ವರ ಶಿವಯೋಗಿಗಳವರ ಕರ್ತೃಗದ್ದುಗೆ ಶ್ರೀ ವೀರಭದ್ರೇಶ್ವರ ಮತ್ತು ಶ್ರೀ ಸೋಮೇಶ್ವರ ದೇವಸ್ಥಾನಗಳ ಕಾರ್ತಿಕ ಮಾಸದ ವಿಶೇಷ ಪೂಜಾ ಕಾರ್ಯಕ್ರಮಗಳು.



ಮೈಸೂರು ಮಿತ್ರ

ಮೈಸೂರು–ಮಂಡ್ಯ–ಚಾಮರಾಜನಗರ–ಕೊಡಗು–ಹಾಸನ

ಬೆಳಗಿನ ಪ್ರಾದೇಶಿಕ ದಿನಪತ್ರಿಕೆ


ಅಕ್ಟೋಬರ್ 26 ಬುಧವಾರ 2022

ಸಂಪುಟ: 43 | ಸಂಚಿಕೆ: 190 | ಪುಟಗಳು: 10

ದೂರವಾಣಿ: 2496520, 2496521, 2496526, 2496527, 2496528,
ಜಾಹೀರಾತು: 2496522, 2496523, ನಗರ ಕಚೇರಿಗಳು: ಕೆ.ಆರ್. ಸರ್ಕಲ್,
ವಿಶ್ವೇಶ್ವರಯ್ಯ ಕಟ್ಟಡ Ph: 2431774, ಡಿ.ದೇವರಾಜ ಅರಸು ರಸ್ತೆ, Ph: 2428695

ಸುದ್ದಿ, ಫೋಟೋಗೆ: news@mysurumithra.com
ಜಾಹೀರಾತು: ad@mysurumithra.com
website: www.mysurumithra.com

₹4



ರಾಜ್ಯದ ಹಲವೆಡೆ ಸೂರ್ಯಗ್ರಹಣ

ಮೈಸೂರಲ್ಲಿ ಶೇ.9ರಷ್ಟು ಗ್ರಹಣ ಗೋಚರ

ಜನ, ವಾಹನ ಸಂಚಾರ ವಿರಳ









ಮೈಸೂರು, ಅ.25(ಎಸ್‌ಬಿಡಿ)– ಮೈಸೂರು ಸೇರಿದಂತೆ ರಾಜ್ಯದ ಹಲವೆಡೆ ಪಾರ್ಶ್ವ ಸೂರ್ಯಗ್ರಹಣ ಗೋಚರಿಸಿದ್ದು, ವೈಜ್ಞಾನಿಕ ಸುರಕ್ಷತಾ ಕ್ರಮಗಳ ಮೂಲಕ ಅನೇಕ ಮಂದಿ ಖಗೋಳ ವಿಸ್ಮಯವನ್ನು ಕಣ್ತುಂಬಿಕೊಂಡರು.

ದೀಪಾವಳಿಯಲ್ಲಿ 27 ವರ್ಷಗಳ ಬಳಿಕ ಸಂಭವಿಸಿದ ಸೂರ್ಯಗ್ರಹಣ ಮೈಸೂರು, ಹಾಸನ, ಮಂಡ್ಯ, ಬೆಂಗಳೂರು, ಮಂಗಳೂರು, ಉಡುಪಿ, ಶಿವಮೊಗ್ಗ, ಬೀದರ್, ಹುಬ್ಬಳ್ಳಿ, ಕೊಪ್ಪಳ, ಧಾರವಾಡ, ಬೆಳಗಾವಿ, ರಾಯಚೂರು, ಕಲಬುರುಗಿ, ಕೋಲಾರ, ಬಳ್ಳಾರಿ, ವಿಜಯಪುರ, ಬಾಗಲಕೋಟೆ ಸೇರಿದಂತೆ ವಿವಿಧೆಡೆ ಗೋಚರಿಸಿದೆ. ಗ್ರಹಣದ ಹಿನ್ನೆಲೆ ಜನಸಂಚಾರ ಕಡಿಮೆಯಾಗಿತ್ತು. ವ್ಯಾಪಾರ ವಹಿವಾಟಿನ ಮೇಲೂ ಪರಿಣಾಮ ಬೀರಿತ್ತು. ಪ್ರಮುಖ ನಗರಗಳಲ್ಲಿ ಒಂದು ರೀತಿಯಲ್ಲಿ ಸ್ತಬ್ಧ ವಾತಾವರಣ ನಿರ್ಮಾಣವಾಗಿತ್ತು.

ಮೈಸೂರಿನ ಚಿತ್ರಣ: ಪಾರ್ಶ್ವ ಸೂರ್ಯಗ್ರಹಣದ ಹಿನ್ನೆಲೆಯಲ್ಲಿ ಇಂದು ಬೆಳಗ್ಗೆಯಿಂದಲೇ ಮೈಸೂರು ಮಂಕಾಗಿತ್ತು. ರಜೆ ಇಲ್ಲದ ಕಾರಣ ಉದ್ಯೋಗಿಗಳ ಸಂಚಾರ ಕಂಡು ಬಂದಿತು. ರಸ್ತೆಯಲ್ಲಿ ವಾಹನ, ಜನಸಂಚಾರ ವಿರಳವಾಗಿತ್ತು. ವ್ಯಾಪಾರ ವಹಿವಾಟು ಕಡಿಮೆಯಿತ್ತು. ಹೋಟೆಲ್, ಪಾನೀಯ, ತಿಂಡಿತಿನಿಸು ಅಂಗಡಿಗಳಲ್ಲೂ ಹೆಚ್ಚು ಗ್ರಾಹಕರು ಕಾಣಿಸಲಿಲ್ಲ. ಸಾರಿಗೆ ಬಸ್ ನಿಲ್ದಾಣಗಳೂ ಭಣಗುಡುತ್ತಿದ್ದವು. ಮಧ್ಯಾಹ್ನದ ನಂತರವಂತೂ ವಾಹನ ಹಾಗೂ ಜನಸಂಚಾರ ಮತ್ತಷ್ಟು ಕಡಿಮೆಯಾಯಿತು. ಮಕ್ಕಳು ಹೊರ ಬಾರದಂತೆ ಪೋಷಕರು ನಿಗಾ ವಹಿಸಿದ್ದರು. ಶ್ರದ್ಧಾವಂತರು ಮನೆಯಲ್ಲೇ ದೇವರ ನಾಮಸ್ಮರಣೆ ಮಾಡಿದರು. ಹಲವು ದೇವಾಲಯಗಳನ್ನು ಬೆಳಗ್ಗೆಯಿಂದಲೇ ಬಂದ್ ಮಾಡಲಾಗಿತ್ತು. ಚಾಮುಂಡೇಶ್ವರಿ ದೇವಾಲಯ ಸೇರಿದಂತೆ ಕೆಲ

▶ 8ನೇ ಪುಟಕ್ಕೆ

ಶುದ್ಧಬಿಂಬ ಕಂಡಾಗಲೇ ಗ್ರಹಣ ಮೋಕ್ಷ

"ಮೈಸೂರಿನಲ್ಲಿ ಸಂಜೆ 6 ಗಂಟೆವರೆಗೆ ಪಾರ್ಶ್ವ ಸೂರ್ಯಗ್ರಹಣ ಗೋಚರಿಸಿತು. ಸಂಜೆ 6.27ಕ್ಕೆ ಗ್ರಹಣದ ಮೋಕ್ಷ ಕಾಲವಿತ್ತಾದರೂ ಅದಕ್ಕೂ ಮುನ್ನ ಸೂರ್ಯಾಸ್ತವಾಗಿರುವುದರಿಂದ ಇದನ್ನು ಗ್ರಸ್ತಾಸ್ತ ಎನ್ನಲಾಗುತ್ತದೆ. ಅಂದರೆ ಗ್ರಹಣ ಹಿಡಿದಿರುವಾಗಲೇ ಸೂರ್ಯ ಮುಳುಗಿದ್ದಾನೆ. ಹಾಗಾಗಿ ಮರುದಿನ ಬೆಳಗ್ಗೆ ಸೂರ್ಯನ ಶುದ್ಧಬಿಂಬವನ್ನು ಕಂಡಾಗಲೇ ಗ್ರಹಣ ಮೋಕ್ಷ ಎಂಬುದು ಶ್ರದ್ಧಾವಂತರ ನಂಬಿಕೆ. ಸೂರ್ಯಾಸ್ತದ ನಂತರ ಗ್ರಹಣ ಮೋಕ್ಷವಾಯಿತು ಎಂದು ಬಹುತೇಕರು ಗ್ರಹಣೋತ್ತರ ಕೈಂಕರ್ಯಗಳನ್ನು ಮಾಡಿದ್ದಾರೆ. ಆದರೆ ಹಿಂದಿನ ಆಚರಣೆಗಳನ್ನು ಅನುಸರಿಸುವ ಶ್ರದ್ಧಾವಂತರು ಶುದ್ಧಬಿಂಬವನ್ನು ನೋಡಿಯೇ ಆಹಾರ ಸೇವಿಸಿ, ದೀಪಾವಳಿ ಆಚರಿಸುತ್ತಾರೆ. ಅಂತಹವರು ಇಂದು ಲಕ್ಷ್ಮೀಪೂಜೆ ಇನ್ನಿತರ ಕೈಂಕರ್ಯಗಳನ್ನೂ ಮಾಡುವುದಿಲ್ಲ.

–ಡಾ.ಶೆಲ್ವ ಪಿಳ್ಳೈ ಅಯ್ಯಂಗಾರ್, ಧಾರ್ಮಿಕ ಚಿಂತಕ


2027ಕ್ಕೆ ಮತ್ತೆ ಪಾರ್ಶ್ವ ಸೂರ್ಯಗ್ರಹಣ

ಮೈಸೂರಿನಲ್ಲಿ ಸಂಜೆ 5.15ರಿಂದ 5.54ರವರೆಗೆ ಶೇ.9ರಷ್ಟು ಪಾರ್ಶ್ವ ಸೂರ್ಯಗ್ರಹಣ ಗೋಚರಿಸಿತು. ವೀಕ್ಷಣೆಗೆ ವಾತಾವರಣ ಅನುವು ಮಾಡಿಕೊಟ್ಟಿತ್ತು. ಉತ್ತರ ಭಾರತದ ಕೆಲವೆಡೆ ಶೇ.30–50ರಷ್ಟು ಗೋಚರಿಸಿದೆ. ಭಾರತದಲ್ಲಿ ಸಂಜೆ 5.50ರಿಂದ 6.05ರೊಳಗೆ ಸೂರ್ಯಾಸ್ತವಾಗಿದ್ದರಿಂದ ಗ್ರಹಣದ ಕಡೆಯ ಭಾಗ ಕಾಣಿಸಲಿಲ್ಲ. ಭಾರತದಲ್ಲಿ ಗರಿಷ್ಠ ಶೇ.52 ಹಾಗೂ ಕನಿಷ್ಠ ಶೇ.2ರಷ್ಟು ಮಾತ್ರ ಗ್ರಹಣ ಗೋಚರವಾಗಿದೆ. ಹೀಗೆ ಪಾರ್ಶ್ವ ಸೂರ್ಯಗ್ರಹಣ 2027ರ ಆ.2ಕ್ಕೆ ಭಾರತದಲ್ಲಿ ಗೋಚರಿಸಲಿದೆ.

–ಡಾ.ಎಸ್.ಎ.ಮೋಹನ್ ಕೃಷ್ಣ, ಹವ್ಯಾಸಿ ಖಗೋಳಶಾಸ್ತ್ರಜ್ಞ

ಕೆಬಿಜೆಯವರ
ಛೂಮಂತ್ರ... ಛೂಮಂತ್ರ...

ಎಂ.ಮಲ್ಲಿಕಾರ್ಜುನ ಖರ್ಗೆ



ಅಖಿಲ ಭಾರತ ಕಾಂಗ್ರೆಸ್ ಸಮಿತಿ (ಎಐಸಿಸಿ) ಅಧ್ಯಕ್ಷರು

■ ಪುಟ–4


2024ರ ಜನವರಿಯಲ್ಲಿ ಅಯೋಧ್ಯೆ ರಾಮ ಮಂದಿರ ಭಕ್ತರ ದರ್ಶನಕ್ಕೆ ಮುಕ್ತ



ಅಯೋಧ್ಯೆ ಅ.25– ಅಯೋಧ್ಯೆಯಲ್ಲಿ ರಾಮ ಮಂದಿರ ನಿರ್ಮಾಣ ಕಾರ್ಯ ಭರದಿಂದ ಸಾಗುತ್ತಿದ್ದು, ರಾಮಲಲ್ಲಾನ ವಿಗ್ರಹಗಳನ್ನು ಪ್ರತಿಷ್ಠಾಪಿಸಿದ ನಂತರ 2024 ರ ಜನವರಿಯಲ್ಲಿ ಮಂದಿರವನ್ನು ಭಕ್ತರ ದರ್ಶನಕ್ಕೆ ಮುಕ್ತಗೊಳಿಸಲಾಗುವುದು ಎಂದು ದೇಗುಲ ನಿರ್ಮಾಣದ ಮೇಲ್ವಿಚಾರಣೆಗಾಗಿ ಸ್ಥಾಪಿಸಲಾದ ಟ್ರಸ್ಟ್‌ನ ಸದಸ್ಯರು ತಿಳಿಸಿದ್ದಾರೆ. ಶೇ.50ರಷ್ಟು ದೇವಾಲಯದ ನಿರ್ಮಾಣ ಕಾರ್ಯ ಪೂರ್ಣಗೊಂಡಿದೆ ಮತ್ತು ಒಟ್ಟಾರೆ ಪ್ರಗತಿ ತೃಪ್ತಿಕರವಾಗಿದೆ ಎಂದು ರಾಮ ಜನ್ಮಭೂಮಿ ತೀರ್ಥ ಕ್ಷೇತ್ರ ಮಂಗಳವಾರ ತಿಳಿಸಿದೆ. 2024ರ ಜನವರಿಯಲ್ಲಿ ಮಕರ ಸಂಕ್ರಾಂತಿಯಂದು ದೇಗುಲದ ಗರ್ಭಗುಡಿಯಲ್ಲಿ ರಾಮಲಲ್ಲಾನ ವಿಗ್ರಹಗಳನ್ನು ಪ್ರತಿಷ್ಠಾಪಿಸಿದ ನಂತರ ದೇವಾಲಯವನ್ನು ಭಕ್ತರಿಗೆ ಮುಕ್ತಗೊಳಿಸಲಾಗುವುದು ಎಂದು ಟ್ರಸ್ಟ್ ಪ್ರಧಾನ ಕಾರ್ಯದರ್ಶಿ ಚಂಪತ್ ರೈ ತಿಳಿಸಿದ್ದಾರೆ.ಮುಂದಿನ ವರ್ಷ ಡಿಸೆಂಬರ್ ವೇಳೆಗೆ ದೇಗುಲದ ನೆಲ ಮಹಡಿ ಸಿದ್ಧಗೊಳ್ಳಲಿದ್ದು, 2024ರ ಜನವರಿ 14ರ ಸುಮಾರಿಗೆ ರಾಮನ ವಿಗ್ರಹಗಳನ್ನು ಪ್ರತಿಷ್ಠಾಪಿಸಲಾಗುವುದು ಎಂದರು. ರಾಮ ಮಂದಿರ ನಿರ್ಮಾಣಕ್ಕೆ ಅಂದಾಜು 1,800 ಕೋಟಿ ರೂಪಾಯಿ ವೆಚ್ಚ ಮಾಡಲಾಗುವುದು ಎಂದು ರೈ ಹೇಳಿದ್ದಾರೆ.

ಮೈಸೂರಿನ ವಿಜಯನಗರ 4ನೇ ಹಂತ, ದಟ್ಟಗಳ್ಳಿಯಲ್ಲಿ

ಮುಡಾದಿಂದ 952 ಮನೆ ನಿರ್ಮಿಸುವ ಗುಂಪು ವಸತಿ ಯೋಜನೆ



ಎಸ್.ಟಿ.ರವಿಕುಮಾರ್

ಮೈಸೂರು, ಅ.25–ರಸ್ತೆ, ರೈಲು ಹಾಗೂ ವಿಮಾನ ಸಂಪರ್ಕ ವ್ಯವಸ್ಥೆ, ಕೈಗಾರಿಕೆ, ಐಟಿ–ಬಿಟಿ ಕ್ಷೇತ್ರದ ಅಭಿವೃದ್ಧಿ, ರಿಂಗ್ ರಸ್ತೆ, ಪ್ರವಾಸೋದ್ಯಮದ ತೀವ್ರಗತಿ ಬೆಳವಣಿಗೆ ಹಾಗೂ ತಂತ್ರಜ್ಞಾನ ಕ್ಷೇತ್ರ ವೇಗವಾಗಿ ಬೆಳೆಯುತ್ತಿದ್ದಂತೆಯೇ ಸಾಂಸ್ಕೃತಿಕ ನಗರಿ ಮೈಸೂರು ಸುತ್ತಮುತ್ತ ಭೂಮಿ ಬೆಲೆ ಗಗನಕ್ಕೇರುತ್ತಿರುವುದರಿಂದ ದುಬಾರಿ ಸೈಟ್ ಖರೀದಿಸಿ, ಕನಸಿನ ಮನೆ ಕಟ್ಟುವುದು ಸಾಮಾನ್ಯರಿಗೆ ಮರೀಚಿಕೆಯಾಗುತ್ತಿದೆ.

ರಾಜ್ಯ ರಾಜಧಾನಿ ಬೆಂಗಳೂರು ಹೊರತುಪಡಿಸಿದಲ್ಲಿ ಅತೀ ವೇಗವಾಗಿ ಬೆಳೆಯುತ್ತಿರುವ ಎರಡನೇ ನಗರವಾಗಿರುವ ಮೈಸೂರಿನ ಜನಸಂಖ್ಯೆಗನುಗುಣವಾಗಿ ಬಡಾವಣೆ ರಚಿಸಿ ನಿವೇಶನ ಹಂಚಿಕೆ ಮಾಡಲು ಅಗತ್ಯ ಭೂಮಿ ಲಭ್ಯವಾಗದ ಕಾರಣ ವಸತಿ ಬೇಡಿಕೆ ಪೂರೈಸಲು ಇರುವ ಒಂದು ಮಾರ್ಗೋಪಾಯ 'ಗುಂಪು ವಸತಿ ಯೋಜನೆ' ಎಂಬುದನ್ನು ಅರಿತಿರುವ ಮೈಸೂರು ನಗರಾಭಿವೃದ್ಧಿ ಪ್ರಾಧಿಕಾರ (MUDA)ವು ಮೈಸೂರು

▶ 6ನೇ ಪುಟಕ್ಕೆ

ಸರ್ಕಾರದ ಅನುಮೋದನೆಗೆ ಡಿಪಿಆರ್ ಸಮೇತ ಪ್ರಸ್ತಾವನೆ ಸಲ್ಲಿಕೆ



"ಮೈಸೂರಿನ ಎರಡು ಕಡೆ ಪ್ರತಿಷ್ಠಿತ ಬಡಾವಣೆಗಳಲ್ಲಿ ಬಹುಮಹಡಿ ಕಟ್ಟಡಗಳನ್ನು ನಿರ್ಮಿಸಿ ಜನರಿಗೆ ಕೈಗೆಟಕುವ ದರದಲ್ಲಿ 1, 2 ಮತ್ತು 3 ಕೊಠಡಿಗಳುಳ್ಳ ಗುಂಪು ಮನೆಗಳನ್ನು ಹಂಚಿಕೆ ಮಾಡಲು ಯೋಜನೆ ತಯಾರಿಸಲಾಗಿದೆ. ಅತೀ ದುಬಾರಿ ಬೆಲೆಯ ಭೂಮಿ ಖರೀದಿಸಿ ಬಡಾವಣೆ ನಿರ್ಮಿಸಿ ನಿವೇಶನ ಹಂಚಿಕೆ ಮಾಡಲು ಸಾಧ್ಯವಾಗದ ಕಾರಣ ನಮ್ಮದೇ ಪ್ರಾಧಿಕಾರದ ಜಾಗದಲ್ಲಿ 'ಜಿ+14 ಮಹಡಿ' ನಿರ್ಮಿಸಿ ಮನೆ ಒದಗಿಸುವುದೊಂದೇ ಬೇಡಿಕೆ ಪೂರೈಸಲು ಇರುವ ಮಾರ್ಗ. ಡಿಪಿಆರ್‌ಗೆ ಸರ್ಕಾರ ಹಸಿರು ನಿಶಾನೆ ತೋರಿದರೆ 18 ತಿಂಗಳೊಳಗಾಗಿ ಯೋಜನೆ ಅನುಷ್ಠಾನಗೊಳಿಸಲಾಗುವುದು.



–ಜಿ.ಟಿ.ದಿನೇಶ್ ಕುಮಾರ್, ಮುಡಾ ಆಯುಕ್ತ

ಬಿಡುವು

ದೀಪಾವಳಿ ಹಬ್ಬದ ಪ್ರಯುಕ್ತ ಇಂದು ನಮ್ಮ ಕಾರ್ಯಾಲಯಕ್ಕೆ ರಜೆ ಇರುವುದರಿಂದ 27.10.2022ರ ಗುರುವಾರದ 'ಮೈಸೂರು ಮಿತ್ರ' ಸಂಚಿಕೆ ಪ್ರಕಟವಾಗುವುದಿಲ್ಲ.

–ವ್ಯವಸ್ಥಾಪಕರು

ಇಂದು ಎಐಸಿಸಿ ಅಧ್ಯಕ್ಷರಾಗಿ ಖರ್ಗೆ ಅಧಿಕಾರ ಸ್ವೀಕಾರ

ಬೆಂಗಳೂರು, ಅ.25(ಕೆಎಂಶಿ)–ಹಿರಿಯ ನಾಯಕ ಎಂ. ಮಲ್ಲಿಕಾರ್ಜುನ ಖರ್ಗೆ ಅವರು ಕಾಂಗ್ರೆಸ್ ಪಕ್ಷದ ರಾಷ್ಟ್ರೀಯ ಅಧ್ಯಕ್ಷರಾಗಿ ನಾಳೆ (ಅ.26) ಅಧಿಕಾರ ಸ್ವೀಕರಿಸಲಿದ್ದಾರೆ.

ದೆಹಲಿಯ ಕಾಂಗ್ರೆಸ್ ಭವನದಲ್ಲಿ ನಡೆಯುವ ಸಮಾರಂಭದಲ್ಲಿ ಹಂಗಾಮಿ ಅಧ್ಯಕ್ಷೆ ಸೋನಿಯಾ ಗಾಂಧಿ ಅವರಿಂದ ಬಾವುಟ ಸ್ವೀಕರಿಸುವ ಮೂಲಕ ಶತಮಾನದ ಇತಿಹಾಸವುಳ್ಳ ಪಕ್ಷದ ರಾಷ್ಟ್ರೀಯ ಅಧ್ಯಕ್ಷರಾಗಿ ಅಧಿಕಾರದ ಚುಕ್ಕಾಣಿ ಹಿಡಿಯಲಿದ್ದಾರೆ. ಈ ಸಮಾರಂಭದಲ್ಲಿ ಭಾಗವಹಿಸಲೆಂದೇ ಪಕ್ಷದ ಅಧಿನಾಯಕ ರಾಹುಲ್‌ಗಾಂಧಿ, ವೇಣುಗೋಪಾಲ್, ಸುರ್ಜೆವಾಲ ಸೇರಿದಂತೆ ಹಲವು ನಾಯಕರು ಭಾರತ್ ಜೋಡೋ ಯಾತ್ರೆಗೆ ಎರಡು ದಿನಗಳ ವಿಶ್ರಾಂತಿ ನೀಡಿ ದೆಹಲಿಗೆ ತೆರಳಿದ್ದಾರೆ.



ಯಾತ್ರೆ ಕಳೆದ ಮೂರು ದಿನಗಳ ಹಿಂದಷ್ಟೇ ಕರ್ನಾಟಕ ಪೂರ್ಣಗೊಳಿಸಿ ತೆಲಂಗಾಣ ಪ್ರವೇಶ ಮಾಡಿತ್ತು. ಅಲ್ಲಿ ಯಾತ್ರೆ ಸ್ಥಗಿತಗೊಳಿಸಿ ದೆಹಲಿಗೆ ತೆರಳಿದ್ದಾರೆ.

ದಿ.ನಿಜಲಿಂಗಪ್ಪ ಅವರ ನಂತರ ರಾಷ್ಟ್ರೀಯ ಕಾಂಗ್ರೆಸ್‌ನ ಅಧ್ಯಕ್ಷರಾದವರಲ್ಲಿ ಖರ್ಗೆ ಎರಡನೆಯವರು. ಇದೊಂದು ಐತಿಹಾಸಿಕ ಸಮಾರಂಭವಾಗಿದ್ದು, ಈ ಸಮಾರಂಭದಲ್ಲಿ ಪಾಲ್ಗೊಳ್ಳಲು ವಿಧಾನಸಭೆ ವಿರೋಧ ಪಕ್ಷದ ನಾಯಕ ಸಿದ್ದರಾಮಯ್ಯ, ಕೆಪಿಸಿಸಿ ಅಧ್ಯಕ್ಷ ಡಿ.ಕೆ.ಶಿವಕುಮಾರ್, ಡಾ.ಜಿ.ಪರಮೇಶ್ವರ್, ಎಂ.ಬಿ.ಪಾಟೀಲ್ ಸೇರಿದಂತೆ ರಾಜ್ಯದ ಬಹುತೇಕ ನಾಯಕರು ದೆಹಲಿಗೆ ತೆರಳಿದ್ದಾರೆ. ಅಧ್ಯಕ್ಷ ಸ್ಥಾನಕ್ಕಾಗಿ ಅಕ್ಟೋಬರ್ 17ರ ಸೋಮವಾರ ನಡೆದ ಚುನಾವಣೆಯಲ್ಲಿ ಮಲ್ಲಿಕಾರ್ಜುನ ಖರ್ಗೆ ಅವರಿಗೆ 7897 ಮತಗಳು ಬಂದಿದ್ದರೆ, ಅವರ ಪ್ರತಿಸ್ಪರ್ಧಿ ಶಶಿತರೂರ್ ಅವರಿಗೆ 1072 ಮತಗಳಷ್ಟೇ ಬಿದ್ದಿದ್ದವು.

2019ರ ಲೋಕಸಭಾ ಚುನಾವಣೆಯಲ್ಲಿ ಮಲ್ಲಿಕಾರ್ಜುನ ಖರ್ಗೆ ಅವರು ಸೋಲನುಭವಿಸಿದರೂ,ಅವರು ಕರ್ನಾಟಕದಿಂದ ಲೋಕಸಭೆಗೆ ಆಯ್ಕೆಯಾಗುವಂತೆ ಸೋನಿಯಾಗಾಂಧಿ ನೋಡಿಕೊಂಡರು.

▶ 6ನೇ ಪುಟಕ್ಕೆ

ಇಂಗ್ಲೆಂಡ್ ಪ್ರಧಾನಿಯಾಗಿ ರಿಷಿ ಸುನಕ್ ಅಧಿಕಾರ ಸ್ವೀಕಾರ



ಲಂಡನ್, ಅ.25–ರಿಷಿ ಸುನಕ್ ಅವರು ಬಕಿಂಗ್ಹ್ಯಾಮ್ ಅರಮನೆಯಲ್ಲಿ ಕಿಂಗ್ ಚಾರ್ಲ್ಸ್ ಅವರನ್ನು ಇಂದು ಭೇಟಿಯಾದರು. ಬಳಿಕ ಬ್ರಿಟನ್ ಪ್ರಧಾನಿಯಾಗಿ ಔಪಚಾರಿಕವಾಗಿ ಪ್ರಮಾಣವಚನ ಸ್ವೀಕರಿಸಿದರು. ರಿಷಿ ಸುನಕ್ ಬ್ರಿಟನ್ ಮೊದಲ ಭಾರತೀಯ ಮೂಲದ ಪ್ರಧಾನಿಯಾಗಿದ್ದಾರೆ. ಬ್ರಿಟನ್‌ನ ಪ್ರಧಾನಿಯಾಗಿ ನೇಮಕಗೊಂಡ ನಂತರ ತಮ್ಮ ಮೊದಲ ಭಾಷಣದಲ್ಲಿ ರಿಷಿ ಸುನಕ್, ದೇಶವು ಗಂಭೀರ ಆರ್ಥಿಕ ಬಿಕ್ಕಟ್ಟನ್ನು ಎದುರಿಸುತ್ತಿದೆ. ಕಠಿಣ ನಿರ್ಧಾರಗಳನ್ನು ತೆಗೆದುಕೊಳ್ಳಲಾಗುವುದು. ಈ ಕ್ಷಣದಿಂದಲೇ ಪ್ರಧಾನಿಯಾಗಿ ಕಾರ್ಯನಿರ್ವಹಿಸುತ್ತೇನೆ ಎಂದು ಹೇಳಿದರು. ಪ್ರಸ್ತುತ ನಮ್ಮ ದೇಶವು ಆಳವಾದ ಆರ್ಥಿಕ ಬಿಕ್ಕಟ್ಟನ್ನು ಎದುರಿಸುತ್ತಿದೆ. ಉಕ್ರೇನ್‌ನಲ್ಲಿನ ಪುಟಿನ್ ಯುದ್ಧವು ಪ್ರಪಂಚದಾದ್ಯಂತದ ಮಾರುಕಟ್ಟೆಗಳನ್ನು ಅಸ್ಥಿರಗೊಳಿಸಿದೆ. ಮಾಜಿ ಪ್ರಧಾನಿ ಲಿಜ್ ಟ್ರಸ್ ಆರ್ಥಿಕ ಬಿಕ್ಕಟ್ಟನ್ನು ನಿವಾರಿಸುವ

▶ 8ನೇ ಪುಟಕ್ಕೆ

ಮೈಸೂರಲ್ಲಿ ಅಂತಾರಾಷ್ಟ್ರೀಯ ಕ್ರಿಕೆಟ್ ಸ್ಟೇಡಿಯಂಗೆ ಸಚಿವ ಸಂಪುಟದ ಸಮ್ಮತಿಯಷ್ಟೇ ಬಾಕಿ

ಮೈಸೂರು, ಹುಬ್ಬಳ್ಳಿ–ಧಾರವಾಡ ಮತ್ತು ಬೆಳಗಾವಿಯಂತಹ ಸಣ್ಣ ನಗರಗಳಲ್ಲಿ ಐಪಿಎಲ್ ಪಂದ್ಯಾವಳಿಗೆ ಬಿಸಿಸಿಐ ಅಧ್ಯಕ್ಷ ರೋಜರ್ ಬಿನ್ನಿ ಅಭಿಲಾಷೆ

ಮೈಸೂರು, ಅ. 25 (ಆರ್‌ಕೆ)–ಮೈಸೂರಲ್ಲಿ ಅಂತಾರಾಷ್ಟ್ರೀಯ ಕ್ರಿಕೆಟ್ ಸ್ಟೇಡಿಯಂ ನಿರ್ಮಿಸಲು ಕರ್ನಾಟಕ ರಾಜ್ಯ ಕ್ರಿಕೆಟ್ ಸಂಘ (ಕೆಎಸ್‌ಸಿಎ)ವು ಮುಂದಾಗಿದೆ.

ಸಾಂಸ್ಕೃತಿಕ ನಗರಿಯಲ್ಲಿ ಅಂತಾರಾಷ್ಟ್ರೀಯ ಕ್ರಿಕೆಟ್ ಸ್ಟೇಡಿಯಂ ನಿರ್ಮಿಸಲು ಅಗತ್ಯ ಭೂಮಿ ಕೊಡಿಸುವಂತೆ ಸಂಸದ ಪ್ರತಾಪ್ ಸಿಂಹ ಅವರು ಇತ್ತೀಚೆಗೆ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಅವರಿಗೆ ಮನವಿ ಮಾಡಿರುವ ಹಿನ್ನೆಲೆಯಲ್ಲಿ ಈ ವಿಷಯವನ್ನು ಸಚಿವ ಸಂಪುಟ ಸಭೆಯಲ್ಲಿ ಚರ್ಚೆಗೆ ಮಂಡಿಸಲು ಅಧಿಕಾರಿಗಳು ಸಜ್ಜಾಗಿದ್ದಾರೆ.

ಈ ಸಂಬಂಧ ಬೆಂಗಳೂರಿನಲ್ಲಿ ಪತ್ರಿಕಾಗೋಷ್ಠಿ ನಡೆಸಿ ಮಾಹಿತಿ ನೀಡಿರುವ ಬಿಸಿಸಿಐ ಅಧ್ಯಕ್ಷ ರೋಜರ್ ಬಿನ್ನಿ ಅವರು, ಬೆಂಗಳೂರಿಗೆ ಮಾತ್ರ ಸೀಮಿತವಾಗಿದ್ದ, ಐಪಿಎಲ್ ಪಂದ್ಯಾವಳಿಯನ್ನು ಮೈಸೂರು, ಹುಬ್ಬಳ್ಳಿ–ಧಾರವಾಡ ಮತ್ತು ಬೆಳಗಾವಿಯಂತಹ ಸಣ್ಣ ನಗರಗಳಲ್ಲೂ ಆಯೋಜಿಸಲಾಗುವುದು ಎಂದು ತಿಳಿಸಿದ್ದಾರೆ. ಮೈಸೂರು ನಗರಾಭಿವೃದ್ಧಿ ಪ್ರಾಧಿಕಾರ (ಮುಡಾ)ವು ಮೈಸೂರಿನ ಹಂಚ್ಯಾ–ಸಾತಗಳ್ಳಿ ಬಡಾವಣೆಯ ಬಿ ವಲಯದ ವಿಟಿಯು ರಿಂಗ್ ರಸ್ತೆ ಬಳಿ 19.30 ಎಕರೆ ಭೂಮಿಯನ್ನು ಅಂತಾರಾಷ್ಟ್ರೀಯ ಕ್ರಿಕೆಟ್ ಕ್ರೀಡಾಂಗಣಕ್ಕೆ ಗುರುತಿಸಿದೆ. ಅದಕ್ಕಾಗಿ ಭೂಮಿ ಮಂಜೂರು ಮಾಡಿಕೊಡುವಂತೆ ಕೆಎಸ್‌ಸಿಎ ಕಳೆದ 8 ವರ್ಷಗಳ ಹಿಂದೆ ಮುಡಾಗೆ ಅರ್ಜಿ ಸಲ್ಲಿಸಿ ಮನವಿ ಮಾಡಿತ್ತು. ಈ ಪ್ರಸ್ತಾವನೆಯು ನಗರಾಭಿವೃದ್ಧಿ ಇಲಾಖೆಯಲ್ಲಿ ಬಾಕಿ ಉಳಿದಿದೆ.





ಈ ಸಂಬಂಧ 'ಮೈಸೂರು ಮಿತ್ರ'ನಿಗೆ ಪ್ರತಿಕ್ರಿಯಿಸಿರುವ ಕೆಎಸ್‌ಎ ಮೈಸೂರು ವಲಯದ ಸಂಚಾಲಕ ಎಸ್. ಸುಧಾಕರ್ ರೈ ಅವರು, ಕೆಎಸ್‌ಸಿಎಯು ಮೈಸೂರಲ್ಲಿ ಅಂತಾರಾಷ್ಟ್ರೀಯ ಮಟ್ಟದ ಕ್ರೀಡಾಂಗಣವನ್ನು ನಿರ್ಮಿಸಲು ಉದ್ದೇಶಿಸಿದೆ. ಅದಕ್ಕಾಗಿ ರಾಜ್ಯ ಸರ್ಕಾರ ಮತ್ತು

▶ 6ನೇ ಪುಟಕ್ಕೆ

ಸಣ್ಣ ನಗರಗಳಲ್ಲಿ ಐಪಿಎಲ್ ಉತ್ತಮ ಬೆಳವಣಿಗೆ

ಮೈಸೂರು, ಅ.25(ಆರ್‌ಕೆ)–ಮೈಸೂರು–ಹುಬ್ಬಳ್ಳಿ–ಧಾರವಾಡ ಮತ್ತು ಬೆಳಗಾವಿಯಂತಹ ಸಣ್ಣ ನಗರಗಳಲ್ಲಿ ಐಪಿಎಲ್ ಪಂದ್ಯಾವಳಿ ಆಯೋಜಿಸಲಾಗುವುದು ಎಂದು ಬಿಸಿಸಿಐ ಅಧ್ಯಕ್ಷ ರೋಜರ್ ಬಿನ್ನಿ ಅವರು ಹೇಳಿರುವುದು ಉತ್ತಮ ಬೆಳವಣಿಗೆ ಎಂದು ಕ್ರಿಕೆಟ್ ಆಸಕ್ತರು ಅಭಿಪ್ರಾಯಪಟ್ಟಿದ್ದಾರೆ. ಮೈಸೂರಿನಂತಹ ರಾಜ್ಯದ ಸಣ್ಣ ನಗರಗಳಲ್ಲೂ ಐಪಿಎಲ್ ಕ್ರಿಕೆಟ್ ಮ್ಯಾಚ್‌ಗಳು ನಡೆಯುವಂತಾದರೆ ಅದಕ್ಕಿಂತ ಮಹತ್ವದ್ದು ಬೇರೇನೂ ಇರುವುದಿಲ್ಲ ಎಂದು ಮೈಸೂರು ವಾರಿಯರ್ಸ್ ಟೀಂ ಪ್ರಾಯೋಜಕರಾದ ಎನ್.ಆರ್.ಗ್ರೂಪ್ ವ್ಯವಸ್ಥಾಪಕ ನಿರ್ದೇಶಕ ಅರ್ಜುನ್ ರಂಗ



ಸುಧಾಕರ್ ರೈ



ಅರ್ಜುನ್ ರಂಗ

▶ 6ನೇ ಪುಟಕ್ಕೆ

ನಕ್ಕರೆ ಅದೇ ಸ್ವರ್ಗ

ಡಾಕ್ಟರ್ : ದಿನಾ ವ್ಯಾಯಾಮ ಮಾಡಬೇಕು
ಸರ್ದಾರ್ : ನಾನು ದಿನಾ ಫುಟ್‌ಬಾಲ್, ಟೆನ್ನಿಸ್, ಕ್ರಿಕೆಟ್ ಆಡ್ತಿನಿ ಸಾರ್.
ಡಾಕ್ಟರ್ : ಗುಡ್, ಎಲ್ಲಿ ಆಡ್ತೀರಾ?
ಸರ್ದಾರ್ : ಮೊಬೈಲ್‌ನಲ್ಲಿ ಸಾರ್?!

ಮೈಸೂರು ಮಿತ್ರ

ಬುಧವಾರ, 26 ಅಕ್ಟೋಬರ್ 2022

ಸತ್ಯೇನೋತ್ತಭಿತಾ ಭೂಮಿಃ!! ನಹಿ ಸತ್ಯಾತ್ಪರೋ ಧರ್ಮಃ!
(ಭೂಮಿಯು ಸತ್ಯದ ಮೇಲೆ ನಿಂತಿದೆ, ಸತ್ಯಕ್ಕಿಂತ ಮಿಗಿಲಾದ ಧರ್ಮವಿಲ್ಲ)

ಸಂಪಾದಕ: ಎಂ.ಗೋವಿಂದೇಗೌಡ *M.A.*

ಅಮೃತವಾಹಿನಿ..........

ಮನುಷ್ಯನಿಗೆ ಒಮ್ಮೆ ಸಂಶಯ ಪಿಶಾಚಿ ಹಿಡಿಯಿತೆಂದರೆ ತೀರಿತು, ಸರಿ ತಪ್ಪುಗಳ ವಿಚಾರವಾಗಿ ಯೋಚಿಸುವ ತಾಳ್ಮೆ ಇರುವುದಿಲ್ಲ. –ನುಡಿಮುತ್ತು

ವೇದ ಸುಳ್ಳಾದರೂ
ಗಾದೆ ಸುಳ್ಳಾಗದು { ಹಣೆಯಲ್ಲಿ ಬರೆದದ್ದು
ಅಣುವಿನಷ್ಟು ತಪ್ಪದು

ನಿಮ್ಮ ಪತ್ರಗಳು

ಸ್ವಾತಂತ್ರ್ಯಪೂರ್ವದ ಮಹಾರಾಣಿ ಮಹಿಳಾ ವಿಜ್ಞಾನ ಕಾಲೇಜನ್ನು ಸಂರಕ್ಷಿಸಿ

ಮಾನ್ಯರೇ,



ಮೈಸೂರಿನ ಮಹಾರಾಣಿ ವಿಜ್ಞಾನ ಕಾಲೇಜಿನ ಕಟ್ಟಡವು ಸತತವಾಗಿ ಸುರಿದ ಮಳೆಯ ಕಾರಣದಿಂದಾಗಿ ಕುಸಿದಿರುವುದು ತೀವ್ರ ಆತಂಕವನ್ನು ಉಂಟು ಮಾಡಿದೆ. ಮಹಾರಾಣಿ ಮಹಿಳಾ ವಿಜ್ಞಾನ ಕಾಲೇಜನ್ನು ಹೆಣ್ಣುಮಕ್ಕಳ ಶಿಕ್ಷಣಕ್ಕೆ ಪ್ರೋತ್ಸಾಹ ನೀಡಲು 1917ರಲ್ಲಿ ಮಹಾರಾಣಿ ಕೆಂಪರಾಜಮ್ಮಣಿ ಅವರು ಸ್ಥಾಪಿಸಿದ್ದು, ಸಾವಿರಾರು ಹೆಣ್ಣು ಮಕ್ಕಳು ಜ್ಞಾನಾರ್ಜನೆ ಮಾಡಿರುವಂತ ಪಾರಂಪರಿಕ ಕಟ್ಟಡವಾಗಿದೆ. ಈ ವಿದ್ಯಾ ಸಂಸ್ಥೆಯಿಂದ ಪದವೀಧರರಾಗಿ ಹೊರಬಂದ ನೂರಾರು ಹೆಣ್ಣು ಮಕ್ಕಳು ಹಲವಾರು ಪ್ರತಿಷ್ಠಿತ ಸ್ಥಾನಗಳನ್ನು ಅಲಂಕರಿಸಿ ಸಮಾಜಕ್ಕೆ ಕೊಡುಗೆ ನೀಡಿದ್ದಾರೆ. ದೇಶದಲ್ಲೇ ಅತಿ ದೊಡ್ಡ ಕ್ಯಾಂಪಸ್ ಇರುವ ಈ ಕಾಲೇಜಿನಲ್ಲಿ 3500 –4000 ವಿದ್ಯಾರ್ಥಿನಿಯರು ವಿದ್ಯಾಭ್ಯಾಸ ಮಾಡುತ್ತಿದ್ದಾರೆ. ಈ ಕಾಲೇಜಿಗೀಗ 105 ವರ್ಷಗಳಾಗಿದ್ದು ಕಟ್ಟಡವನ್ನು ಸರಿಯಾಗಿ ನಿರ್ವಹಣೆ ಮಾಡದೆ ಶಿಥಿಲಗೊಂಡಿದೆ. ಈ ಪರಿಸ್ಥಿತಿಯು ತಿಳಿದಿದ್ದರೂ ರಾಜ್ಯ ಸರ್ಕಾರದ ಉನ್ನತ ಶಿಕ್ಷಣ ಇಲಾಖೆ ಹಾಗೂ ಕಾಲೇಜಿನ ಅಭಿವೃದ್ಧಿ ಮಂಡಳಿಯು, ಯಾವುದೇ ಕ್ರಮಗಳನ್ನು ಕೈಗೊಳ್ಳದೆ, ಇದೇ ಕಟ್ಟಡದಲ್ಲಿ ತರಗತಿಗಳನ್ನು ಮುಂದುವರಿಸಿಕೊಂಡು ಹೋಗಲು ಬಿಟ್ಟಿದ್ದು ಬೇಜವಾಬ್ದಾರಿತನವಾಗಿದೆ. ಈ ಕೂಡಲೇ ಅತ್ಯಂತ ತುರ್ತಾಗಿ ಸೂಕ್ತ ಕ್ರಮಗಳನ್ನು ಕೈಗೊಂಡು ರಾಜ್ಯ ಸರ್ಕಾರದ ಉನ್ನತ ಶಿಕ್ಷಣ ಇಲಾಖೆ ಹಾಗೂ ಕಾಲೇಜಿನ ಅಭಿವೃದ್ಧಿ ಮಂಡಳಿಯು, ನೂರಾರು ವರ್ಷದ ಇತಿಹಾಸವಿರುವ ಈ ಕಾಲೇಜಿನ ಕಟ್ಟಡವನ್ನು ಮರು ನಿರ್ಮಾಣ ಮಾಡುವ ಕ್ರಮಗಳನ್ನು ಕೈಗೊಳ್ಳಬೇಕೆಂದು ಮನವಿ.

–ಸೀಮಾ ಜಿ.ಎಸ್., ಕಾರ್ಯದರ್ಶಿ, ಎಐಎಂಎಸ್‌ಎಸ್, ಮೈಸೂರು

'ಕೋಟಿ ಕಂಠ ಗಾಯನ' ಅರ್ಥಪೂರ್ಣ ಕಾರ್ಯಕ್ರಮ


ಮಾನ್ಯರೆ,

ಈ ಬಾರಿಯ 67ನೇ ಕನ್ನಡ ರಾಜ್ಯೋತ್ಸವವನ್ನು ಅತ್ಯಂತ ವಿಶಿಷ್ಟ ಮತ್ತು ವಿನೂತನವಾಗಿ ಆಚರಿಸಲು ಕನ್ನಡ ಮತ್ತು ಸಂಸ್ಕೃತಿ ಇಲಾಖೆಯು"ಕೋಟಿ ಕಂಠ ಗಾಯನ"ಆಯೋಜಿಸಲಾಗಿದ್ದು, ಈ ಕಾರ್ಯಕ್ರಮದಲ್ಲಿ ಆಯ್ದ ನಾಡು–ನುಡಿ–ಸಂಸ್ಕೃತಿ ಮತ್ತು ಪರಂಪರೆ, ಅಭಿಮಾನ ಹೆಮ್ಮೆ ಮೂಡಿಸುವಂತಹ ಕನ್ನಡ ಕವಿಗಳು ರಚಿಸಿರುವ ಜನಪ್ರಿಯ 5 ಕನ್ನಡ ಗೀತೆಗಳಾದ 'ಭಾರತ ಜನನಿಯ ತನುಜಾತೆ, ಬಾರಿಸು ಕನ್ನಡ ಡಿಂಡಿಮವ, 'ಹಚ್ಚೇವು ಕನ್ನಡದ ದೀಪ, ಹುಟ್ಟಿದರೆ ಕನ್ನಡ ನಾಡಿನಲ್ಲಿ ಹುಟ್ಟಬೇಕು, 'ವಿಶ್ವ ವಿನೂತನ ವಿದ್ಯಾ ಚೇತನ' ಈ ಗೀತೆಗಳನ್ನು ನಾಡಿನಾದ್ಯಂತ ಹಾಡಲು ಎಲ್ಲಾ ರೀತಿಯ ಸಿದ್ಧತೆಗಳನ್ನು ಮಾಡಿಕೊಂಡಿದೆ. ಈ ಕಾರ್ಯಕ್ರಮವು ಅಕ್ಟೋಬರ್ 28 ರಂದು ಬೆಳಿಗ್ಗೆ 11 ಗಂಟೆಗೆ ರಾಜ್ಯದಾದ್ಯಂತ ಸರ್ಕಾರಿ ಕಚೇರಿಗಳು, ಶಾಲಾ ಕಾಲೇಜುಗಳು, ವಿಶ್ವವಿದ್ಯಾನಿಲಯಗಳು, ಕನ್ನಡ ಸಂಘ, ವಿಧಾನಸೌಧ ಮೆಟ್ಟಿಲು, ತಾಲೂಕು, ಜಿಲ್ಲಾ ಕೇಂದ್ರಗಳು, ಹೊರನಾಡು ಕನ್ನಡಿಗರು, ಗಡಿನಾಡು ಕನ್ನಡಿಗರು, ಆಸ್ಪತ್ರೆ, ಐಟಿ ಕಂಪನಿಗಳು, ಕಡಲ ತೀರ ಇನ್ನೂ ಅನೇಕ ಸಾರ್ವಜನಿಕ ಮತ್ತು ಖಾಸಗಿ ಸ್ಥಳಗಳಲ್ಲಿ ಒಂದು ಕೋಟಿಗೂ ಹೆಚ್ಚು ಜನ ಏಕಕಾಲದಲ್ಲಿ ಕೋಟಿ ಕಂಠಗಳಲ್ಲಿ ಹಾಡಿ ಐತಿಹಾಸಿಕ ದಾಖಲೆ ಬರೆಯುವುದರ ಮೂಲಕ ಕನ್ನಡ ಗಾಯನ ಮೊಳಗಲು ಸಂಕಲ್ಪವನ್ನು ಮಾಡಿರುವುದು ನಿಜಕ್ಕೂ ಶ್ಲಾಘನೀಯ ಕಾರ್ಯವಾಗಿದೆ. ಒಟ್ಟಿನಲ್ಲಿ ಪ್ರಪಂಚದಾದ್ಯಂತ ಕನ್ನಡದ ಕಂಪನ್ನು ಪಸರಿಸಿ ಮತ್ತು ಅಸ್ಮಿತೆಯನ್ನು ಅನಾವರಣಗೊಳಿಸುವ ಈ ಮಹತ್ಕಾರ್ಯಕ್ಕೆ ನಾವೆಲ್ಲರೂ ಕೈಜೋಡಿಸಿ ಯಶಸ್ವಿಗೊಳಿಸಲು ಮನವಿ.

–ಪರಶಿವಮೂರ್ತಿ ಎನ್.ಪಿ, ನಂಜೀಪುರ, ಸರಗೂರು ತಾ.

ರಾಜಕಾರಣದ ವರ್ಣರಂಜಿತ ವ್ಯಕ್ತಿ ಎಎಚ್‌ವಿ

ಮಾನ್ಯರೆ,



ರಾಜಕಾರಣದ ಅತ್ಯಂತ ವರ್ಣರಂಜಿತ ವ್ಯಕ್ತಿ ಎಂದರೆ ಹಾಲಿ ವಿಧಾನಪರಿಷತ್ತಿನ ಬಿಜೆಪಿ ಸದಸ್ಯ ಎ.ಹೆಚ್. ವಿಶ್ವನಾಥ್. ಅವರ ಇತ್ತೀಚಿನ ಹೇಳಿಕೆಗಳು ನಡಾವಳಿಗಳನ್ನು ಗಮನಿಸಿದರೆ "ಹಳೆ ಗಂಡನ ಪಾದವೇ ಗತಿ" ಎಂಬಂತೆ ಕಾಂಗ್ರೆಸ್ ಸೇರುವ ಹಾದಿಯಲ್ಲಿದ್ದಾರೆ ಎನಿಸುತ್ತಿದೆ.

ಇದಕ್ಕೆ ಮುಖ್ಯ ಕಾರಣ ಹಾಲಿ ಬಿಜೆಪಿಯಲ್ಲಿ ಇವರು ನಿರೀಕ್ಷೆ ಮಾಡಿದಂತೆ ಸ್ಥಾನಮಾನ ಸಿಗದೇ ಇರುವುದು. ಕುರುಬ ಸಮಾಜದ ಹಿರಿಯ ನಾಯಕ ಕೆ.ಎಸ್. ಈಶ್ವರಪ್ಪ ಪ್ರಮುಖ ನಾಯಕರಾಗಿ ಇರುವುದು. ಪಕ್ಷ ಇವರನ್ನು ನಿರ್ಲಕ್ಷಿಸುತ್ತಿರುವುದು. ಮತ್ತೊಂದು ತನ್ನ ರಾಜಕೀಯ ಗುರು ಲೋಕಸಭಾ ಸದಸ್ಯ ವಿ.ಶ್ರೀನಿವಾಸ ಪ್ರಸಾದ್ ಈಗಾಗಲೇ ರಾಜಕೀಯ ನಿವೃತ್ತಿ ಘೋಷಿಸಿರುವುದು. ಮುಂದೆ ರಾಜಕೀಯದಲ್ಲಿ ಗಾಡ್ ಫಾದರ್ ಇಲ್ಲದಂತಾಗಬಹುದು. ಎಲ್ಲಕ್ಕಿಂತ ಮುಖ್ಯವಾಗಿ ತನ್ನ ರಾಜಕೀಯ ಹಿತಾಸಕ್ತಿ ಕಾಪಾಡುವ ತನ್ನ ಹಿತೈಷಿ, ಮಲ್ಲಿಕಾರ್ಜುನ ಖರ್ಗೆ ಎಐಸಿಸಿ ಅಧ್ಯಕ್ಷರಾಗಿರುವುದು.

ಈ ಎಲ್ಲಾ ಕಾರಣಗಳಿಂದ ಒಂದು ಕಾಲನ್ನು ಹೊರಗೆ ಇಟ್ಟಿದ್ದಾರೆ. ತನ್ನ ವೈಯಕ್ತಿಕ ಕಾರಣಗಳಿಗಾಗಿ ಪದೇ ಪದೆ ಪಕ್ಷ ಬದಲಾಯಿಸುವ ಇವರನ್ನು ಯಾವ ಪಕ್ಷವೂ ನಂಬುವ ಸ್ಥಿತಿಯಲ್ಲಿಲ್ಲ. ಇಂದು ಜಾತ್ಯತೀತ ಜನದಳದಲ್ಲೇ ಉಳಿದುಕೊಂಡಿದ್ದರೇ, ಹಿಂದುಳಿದ ವರ್ಗದ ಬಹು ದೊಡ್ಡ ನಾಯಕನಾಗಿ ಗುರುತಿಸಿಕೊಳ್ಳಬಹುದಿತ್ತು.


– ಬೂಕನಕೆರೆ ವಿಜೇಂದ್ರ, ಮೈಸೂರು.

ಸ್ವಾಗತಾರ್ಹ ಬೆಳವಣಿಗೆ

ಮಾನ್ಯರೇ,

ಆಮೆಗಳು, ಸರೀಸೃಪಗಳು ಮತ್ತು ಇತರ ಪ್ರಾಣಿಗಳನ್ನು ಉಳಿಸುವ ಸಲುವಾಗಿ ಪಶ್ಚಿಮಘಟ್ಟಗಳ ವನ್ಯಜೀವಿ ಕಾರಿಡಾರ್‌ಗಳ ಮೂಲಕ ಹಾದುಹೋಗುವ, ಸದ್ಯ ಅಸ್ತಿತ್ವದಲ್ಲಿರುವ ರೈಲು ಹಳಿಗಳ ಅಡಿಯಲ್ಲಿ ಯು–ಆಕಾರದ ಕಂದಕಗಳನ್ನು ಸ್ಥಾಪಿಸುವ ಪ್ರಸ್ತಾವನೆ ಬಗ್ಗೆ ಪರಿಸರ, ಅರಣ್ಯ ಮತ್ತು ಹವಾಮಾನ ಬದಲಾವಣೆ ಸಚಿವಾಲಯ ಕೆಲಸ ಮಾಡುತ್ತಿರುವುದು ಸ್ವಾಗತಾರ್ಹ. ಪಶ್ಚಿಮಘಟ್ಟದಲ್ಲಿ ರೈಲು ಹಳಿ ದಾಟುವಾಗ ಅನೇಕ ಜೀವಿಗಳು ಗಾಯಗೊಂಡು ಇಲ್ಲವೇ ಸಾಯುತ್ತಿರುವ ಬಗ್ಗೆ ಅನೇಕ ವರದಿಗಳಾಗಿವೆ. ಯು–ಆಕಾರದ ಕಾಂಕ್ರೀಟ್ ಕಂದಕಗಳು ಜಪಾನ್‌ನಲ್ಲಿ ಯಶಸ್ವಿಯಾಗಿವೆ. ವನ್ಯಜೀವಿಗಳ ರಕ್ಷಣೆಗೆ (ಜಪಾನ್ ಮಾದರಿಯಲ್ಲಿ) ನೈಋತ್ಯ ರೈಲ್ವೆಯ ಅಡಿಯಲ್ಲಿ ಬರುವ ಕರ್ನಾಟಕದ 150ಕಿಮೀ ನಡುವಿನಲ್ಲಿ ಯು ಆಕಾರದ ಕಾಂಕ್ರೀಟ್ ಕಂದಕವನ್ನು ನಿರ್ಮಿಸಲು ಆದಷ್ಟು ಬೇಗ ಇದರ ಬಗ್ಗೆ ನಿರ್ಧಾರ ತೆಗೆದುಕೊಂಡು ಕಾರ್ಯರೂಪಕ್ಕೆ ತರುವುದು ಒಳ್ಳೆಯದು.

– ವಿಜಯಕುಮಾರ್ ಎಚ್.ಕೆ., ರಾಯಚೂರು



ಕೆಬಿಜಿಯವರ

ಛೂಮಂತ್ರ... ಛೂಮಂತ್ರ... ಛೂಮಂತ್ರ...

ಎಂ.ಮಲ್ಲಿಕಾರ್ಜುನ ಖರ್ಗೆ

ಅಖಿಲ ಭಾರತ ಕಾಂಗ್ರೆಸ್ ಸಮಿತಿ (ಎಐಸಿಸಿ) ಅಧ್ಯಕ್ಷರು


ಸೋನಿಯಾಗಾಂಧಿ


ಮಲ್ಲಿಕಾರ್ಜುನ ಖರ್ಗೆ


ಶಶಿ ತರೂರ್


ರಾಹುಲ್ ಗಾಂಧಿ

> ಕಾಂಗ್ರೆಸ್ ಪಕ್ಷವು ಮತ್ತೆ ಜನರ ಬಳಿಗೆ ಬಂದಿದೆ ಎಂಬುದಾಗಿ ಜನರು (ಮತದಾರರು) ಸಂತೋಷಗೊಂಡಿದ್ದಾರೆ. ಆದರೆ, ಆಗ ನಾವು ನಿಜವಾಗಿ ಆ ಪಕ್ಷ, ಹಿರಿಯ ಪತ್ರಕರ್ತ ಎಂ.ವಿ.ಕಾಮತ್‌ರವರು ಹೇಳುವ ಹಾಗೆ, "ಕುಟುಂಬದ ಆಸ್ತಿ" ಎಂಬ ಅಪವಾದದಿಂದ ಹೊರಬಂದಿದೆಯೇ ಎಂಬುದನ್ನು ನೋಡಬೇಕು. ಆದಾಗ್ಯೂ, ರಾಹುಲ್ ಗಾಂಧಿಯವರು ಓರ್ವ ಮಹಾನ್ ನಾಯಕನಂತೆ ದೇಶಾದ್ಯಂತ 3570 ಕಿ.ಮೀ ಉದ್ದದ ತಮ್ಮ ಪಾದಯಾತ್ರೆ "ಭಾರತ್ ಜೋಡೋ"ದಲ್ಲಿ ನಿರತರಾಗಿದ್ದಾರೆ. ಅವರ ತಂದೆ ರಾಜೀವ್ ಗಾಂಧಿಯವರು "ಮೇರಾ ಭಾರತ್ ಮಹಾನ್" ಎಂದು ಹೇಳುತ್ತಿದ್ದರು. ಅದೇನೇ ಇರಲಿ, ನನಗನಿಸುತ್ತದೆ, ಈ ಗಾಂಧಿ ಕುಟುಂಬದ ಪರಿಮಳ ಕಾಂಗ್ರೆಸ್ ಪಕ್ಷದಲ್ಲಿರದಿದ್ದರೆ ಮತದಾರರಿಗೆ ಈ ಪಕ್ಷ ಬೇಕು ಎನಿಸಬಹುದೆ? ಕಾಲವೇ ಹೇಳಬೇಕು.

ನಮ್ಮ ಕನ್ನಡಿಗರು ಹಾಗೂ ಹಿರಿಯ ಕಾಂಗ್ರೆಸ್ ನಾಯಕರಾದ ಮಲ್ಲಿಕಾರ್ಜುನ ಖರ್ಗೆಯವರು ಅಖಿಲ ಭಾರತ ಕಾಂಗ್ರೆಸ್ ಸಮಿತಿ (ಎಐಸಿಸಿ) ಅರ್ಥಾತ್ ಭಾರತೀಯ ರಾಷ್ಟ್ರೀಯ ಕಾಂಗ್ರೆಸ್ (ಐಎನ್‌ಸಿ) 98ನೇ ಅಧ್ಯಕ್ಷರಾಗಿ ಇತ್ತೀಚೆಗೆ (19.10.2022) ಆಯ್ಕೆಯಾದರು. ಅವರಿಗೆ ಅಭಿನಂದನೆಗಳು. ಅಂದ ಹಾಗೆ, ಭಾರತ ರಾಷ್ಟ್ರೀಯ ಕಾಂಗ್ರೆಸ್ ಅನ್ನು ಇಂಗ್ಲಿಷಿನವರಾದ ಅಲ್ಲನ್ ವೊಕ್ಟೋವಿಯನ್ ಹ್ಯೂಮ್ (ಎ.ಒ.ಹ್ಯೂಮ್) ಎಂಬುವರು ಸ್ಥಾಪಿಸಿದರು ಹಾಗೂ ಭಾರತೀಯ ರಾಷ್ಟ್ರೀಯ ಕಾಂಗ್ರೆಸ್‌ನ ಪ್ರಥಮ ಅಧ್ಯಕ್ಷರಾಗಿ (1885–86) ವೊಮೇಶ್ ಚಂದ್ರ ಬ್ಯಾನರ್ಜಿ ಆಯ್ಕೆಗೊಂಡಿದ್ದರು. ಈಗ ಈ ಪಕ್ಷ 137 ವರ್ಷದಷ್ಟು ಹಳೆಯದು.

ಕುತೂಹಲಕರ ರೀತಿಯಲ್ಲಿ ವಿದೇಶಿ ಮೂಲದ ಸೋನಿಯಾ ಗಾಂಧಿಯವರು ಭಾರತ ರಾಷ್ಟ್ರೀಯ ಕಾಂಗ್ರೆಸ್‌ನ ಅಧ್ಯಕ್ಷರಾದಾಗ ಹೆಚ್ಚಿನ ರೀತಿಯ ಗೊಂದಲ ಉಂಟಾಗಿತ್ತು. ಆದಾಗ್ಯೂ ದೇಶ ಸ್ವಾತಂತ್ರ್ಯ ಪಡೆಯುವುದಕ್ಕಿಂತ ಮುಂಚಿತವಾಗಿಯೂ, ವಿದೇಶಿಯರು ಅಖಿಲ ಭಾರತ ಕಾಂಗ್ರೆಸ್ ಅಧ್ಯಕ್ಷರಾಗಿದ್ದರು ಎಂಬುದನ್ನು ನಾವು ಅವಶ್ಯಕವಾಗಿ ಜ್ಞಾಪಿಸಿಕೊಳ್ಳಬೇಕು.

ನನಗೆ ಗೊತ್ತಿರುವ ಹಾಗೆ, ಎಸ್.ನಿಜಲಿಂಗಪ್ಪನವರ ನಂತರ, ಖರ್ಗೆಯವರು ಕರ್ನಾಟಕದಿಂದ ಅಖಿಲ ಭಾರತ ಕಾಂಗ್ರೆಸ್ ಸಮಿತಿ ಅಧ್ಯಕ್ಷರಾಗಿ ಆಯ್ಕೆಗೊಳ್ಳುತ್ತಿರುವ ಎರಡನೇಯವರಾಗಿದ್ದಾರೆ. ಎಸ್.ನಿಜಲಿಂಗಪ್ಪನವರು ರಾಜ್ಯದ ಮುಖ್ಯಮಂತ್ರಿಗಳಾಗಿಯೂ ಸೇವೆ ಸಲ್ಲಿಸಿದ್ದಾರೆ. ಮೃದು ಸ್ವಭಾವದ ಸಭ್ಯಸ್ಥ ಹಾಗೂ ಗಂಭೀರವಾದ ಮುಖಭಾವದ ಮಲ್ಲಿಕಾರ್ಜುನ ಖರ್ಗೆಯವರು ಮುಂದೆ, ಜನರ ಶ್ರೀರಕ್ಷೆ ಹಾಗೂ ಅದೃಷ್ಟ ಇದ್ದರೆ, ರಾಜ್ಯದ ಮುಖ್ಯಮಂತ್ರಿಯಾಗಲಿ, ಅವಕಾಶ ಸಿಕ್ಕರೆ ದೇಶದ ಪ್ರಧಾನ ಮಂತ್ರಿಗಳೂ ಆಗಲಿ ಎಂದು ಆಶಿಸೋಣ.

ಖಂಡಿತವಾಗಿಯೂ, ಭಾರತ ರಾಷ್ಟ್ರೀಯ ಕಾಂಗ್ರೆಸ್ ಅಧ್ಯಕ್ಷರು, ಸಹಜವಾಗಿ ಪ್ರಧಾನಮಂತ್ರಿ ಹುದ್ದೆಯ ನಿರೀಕ್ಷಿತ ಅಭ್ಯರ್ಥಿಗಳಾಗುತ್ತಾರೆ. ಮುಂದಾಗುವುದನ್ನು ಯಾರು ಬಲ್ಲರು?

2004 ಹಾಗೂ 2009ರ ಲೋಕಸಭಾ ಚುನಾವಣೆಗಳಲ್ಲಿ ಯುಪಿಎ ಅಧಿಕಾರಕ್ಕೆ ಬಂದಂತೆ, 2024ರ ಲೋಕಸಭಾ ಚುನಾವಣೆಯಲ್ಲಿ ಕೂಡ ಫಲಿತಾಂಶ ಪುನರಾವರ್ತನೆಗೊಳ್ಳಬಹುದು. ಆಗ ಕಾಂಗ್ರೆಸ್ ನೇತೃತ್ವದ ಯುಪಿಎ ಅಧಿಕಾರಕ್ಕೆ ಬರಬಹುದಲ್ಲವೆ?

ಅಂದು ಕಾಂಗ್ರೆಸ್ ಪಕ್ಷದ ಅಧ್ಯಕ್ಷರಾಗಿದ್ದ ಸೋನಿಯಾಗಾಂಧಿಯವರು ಬಹುತೇಕ ಪ್ರಧಾನಮಂತ್ರಿ ಹುದ್ದೆಗೇರುವ ಹೊಸ್ತಿಲಲ್ಲಿದ್ದರು. ಆದರೆ ಆಗ ಡಾ.ಮನ ಮೋಹನ್ ಸಿಂಗ್‌ರವರ ಪರವಾಗಿ ಸೋನಿಯಾ ಗಾಂಧಿ ಒಲವು ತೋರಿಸಿ ಅವರು ಪ್ರಧಾನಮಂತ್ರಿಯಾದರು. ಆದರೂ ಅದು ಸೋನಿಯಾ ಗಾಂಧಿಯವರ ಆಯ್ಕೆಯಾಗಿತ್ತು. ಅವರು ಪ್ರಧಾನ ಮಂತ್ರಿ ಹುದ್ದೆಯನ್ನು ಏಕೆ ನಿರಾಕರಿಸಬೇಕಾಯಿತು ಎಂಬುದು ನಮಗೆ ಗೊತ್ತಿಲ್ಲದ ವಿಚಾರ. ಅದು ಅವರೇ ಹೇಳಿಕೊಂಡಿರುವ ಹಾಗೆ ಅವರ "ಆಂತರಿಕ ಧ್ವನಿ"ಯಾಗಿರಬಹುದು ಅಥವಾ ಸಂಭವನೀಯ ಕಾನೂನು ಸಮಸ್ಯೆ ಆಗಿರಬಹುದು. ಅದು ಹಾಗಿರಲಿ.

ನಮಗೆ ಗೊತ್ತಿರುವ ಹಾಗೆ ಬಹಳ ಹಿಂದಿನಿಂದಲೂ ಕಾಂಗ್ರೆಸ್ ಪಕ್ಷವು ಗಾಂಧಿ (ಮಹಾತ್ಮ ಗಾಂಧಿ ಅಲ್ಲ) ಅಂದರೆ ನೆಹರೂ ಇಂದಿರಾ ಕುಟುಂಬದ ತೆಕ್ಕೆಯಲ್ಲೇ ಇದೆ. ವಾಸ್ತವವಾಗಿ, ಸೋನಿಯಾ ಗಾಂಧಿಯವರೇ 22 ವರ್ಷಗಳ ಕಾಲ (1998–2017, 2019–22) ಆ ಪಕ್ಷದ ಅಧ್ಯಕ್ಷರಾಗಿದ್ದರು. ರಾಹುಲ್ ಗಾಂಧಿಯವರು ತುಂಬಾ ಕಡಿಮೆ ಅವಧಿವರೆಗೆ (2017 –19) ಪಕ್ಷದ ಅಧ್ಯಕ್ಷರಾಗಿದ್ದರು.

'ದಿ ಟೈಮ್ಸ್ ಆಫ್ ಇಂಡಿಯಾ' ಹಾಗೂ 'ದಿ ಇಲ್ಲಸ್ಟ್ರೇಟೆಡ್ ವೀಕ್ಲಿ ಆಫ್ ಇಂಡಿಯಾ' ಪತ್ರಿಕೆಗಳ ಹಿರಿಯ ಪತ್ರಕರ್ತರಾಗಿದ್ದ ಎಂ.ವಿ.ಕಾಮತ್‌ರವರು ಈ ಹಿಂದೆ ಕಾಂಗ್ರೆಸ್ ಪಕ್ಷದ ಬಗ್ಗೆ ಬರೆದಿದ್ದು ಬಹಳ ಚೆನ್ನಾಗಿ ನೆನಪಿದೆ. 1970ರ ದಶಕದ ನನ್ನ ಟಿಪ್ಪಣಿ ಪುಸ್ತಕದಿಂದ ಹೆಕ್ಕಿ ತೆಗೆದಿದ್ದೇನೆ. "ಹಳೆಯ ಕಾಂಗ್ರೆಸ್ ಪಕ್ಷವು, ಕಾಂಗ್ರೆಸ್ (ಆರ್) ಮತ್ತು ಕಾಂಗ್ರೆಸ್ (ಓ, ಸಂಸ್ಥಾ) ಆಗಿ ವಿಭಜನೆಗೊಂಡ ದಿನದಿಂದ ಆ ಪಕ್ಷವು ನೆಹರೂ ಅವರ ಕುಟುಂಬದ ಆಸ್ತಿಯಾಗಿ ಉಳಿದು ಬಿಟ್ಟಿದೆ. –ಒಂದು ಹಗರಣದ ಪರಿಸ್ಥಿತಿ. ಪಕ್ಷವು ಮತ್ತೆ ಜನರತ್ತ ತೆರಳಬೇಕು. (ಪಕ್ಷ ನಿಜವಾಗಿ ಅವರಿಗೆ ಸೇರಿದ್ದು)".

ಜನರು (ಮತದಾರರು) ಈಗ ಕಾಂಗ್ರೆಸ್ ಪಕ್ಷವು ಜನರತ್ತ ಮತ್ತೆ ಹೋಗಿರುವುದಕ್ಕೆ ಸಂತೋಷಪಡುತ್ತಾರೆ. ಆದರೆ ಆ ಪಕ್ಷವು, ಎಂ.ವಿ ಕಾಮತ್ ಅವರು ಅಭಿಪ್ರಾಯಪಟ್ಟಿರುವಂತೆ, 'ಕಾಂಗ್ರೆಸ್ ನೆಹರೂ–ಗಾಂಧಿ ಕುಟುಂಬದ ಆಸ್ತಿ' ಎಂಬ ಹಣೆಪಟ್ಟಿಯಿಂದ ಹೊರಬರುವುದೇ ಎಂಬುದನ್ನು ನಾವು ಕಾದು ನೋಡಬೇಕಾಗಿದೆ.

ಏನಾದರೂ, ಯುವ ನಾಯಕ ರಾಹುಲ್ ಗಾಂಧಿ ಕನ್ಯಾಕುಮಾರಿಯಿಂದ ಕಾಶ್ಮೀರದವರೆಗೆ ದೇಶಾದ್ಯಂತ 3570 ಕಿ.ಮೀ. ಉದ್ದದ ತಮ್ಮ "ಭಾರತ್ ಜೋಡೋ" ಸುದೀರ್ಘ ಪಾದಯಾತ್ರೆಯಲ್ಲಿ ತಲ್ಲೀನರಾಗಿದ್ದಾರೆ. ಅವರ ತಂದೆ ರಾಜೀವ್ ಗಾಂಧಿಯವರು "ಮೇರಾ ಭಾರತ್ ಮಹಾನ್" ಎಂದು ಹೇಳುತ್ತಿದ್ದರು. ಅದೇನೇ ಇರಲಿ, ನನಗನಿಸುತ್ತದೆ, ಈ ಗಾಂಧಿ ಕುಟುಂಬದ ಪರಿಮಳ ಕಾಂಗ್ರೆಸ್ ಪಕ್ಷದಲ್ಲಿರದಿದ್ದರೆ ಮತದಾರರಿಗೆ ಈ ಪಕ್ಷ ಬೇಕು ಎನಿಸಬಹುದೆ? ಕಾಲವೇ ಹೇಳಬೇಕು.

ಆದಾಗ್ಯೂ, ಪ್ರಸ್ತುತ ಪರಿಸ್ಥಿತಿಯಲ್ಲಿ, ರಾಹುಲ್ ಗಾಂಧಿಯವರು ಪಕ್ಷದ ಅತ್ಯಂತ ಕ್ರಿಯಾಶೀಲ ನಾಯಕರಾಗಿ ಬಿಂಬಿತರಾಗಿ, 2024ರ ಲೋಕಸಭಾ ಚುನಾವಣೆಗೆ ಪಕ್ಷವನ್ನು ಸನ್ನದ್ಧಗೊಳಿಸುವವರ ಹಾಗೆ ಕಾಣುತ್ತಾರೆ. ಆದ್ದರಿಂದ ಹೊಸದಾಗಿ ಕಾಂಗ್ರೆಸ್ ಪಕ್ಷದ ಅಧ್ಯಕ್ಷರಾಗಿ ಆಯ್ಕೆಗೊಂಡಿರುವ ಮಲ್ಲಿಕಾರ್ಜುನ ಖರ್ಗೆಯವರು ಗಾಂಧಿ ಕುಟುಂಬದ "ರಬ್ಬರ್ ಸ್ಟಾಂಪ್" ಅಥವಾ "ಕೈಗೊಂಬೆ" ಅಧ್ಯಕ್ಷರಾಗುವ ಅಪಾಯ ಇದೆಯೇ ಎಂಬುದು ಬಹಳ ಮುಖ್ಯವಾದ ಪ್ರಶ್ನೆ. "ಹೆಂಗಸಿನ ಗುಣವನ್ನು ಮತ್ತು ಪುರುಷನ ಹಣೇಬರಹವನ್ನು ಮೊದಲೇ ಹೇಳಲಾಗುವುದಿಲ್ಲ" (ಭವಿಷ್ಯ ನುಡಿಯಲಾಗದು) ಎಂಬ ರೋಮನ್ ಗಾದೆಯೊಂದಿದೆ. ಅದು ನಿಜವಾದರೆ, ರಾಹುಲ್ ಗಾಂಧಿಯವರು 2024ರಲ್ಲಿ ಪ್ರಧಾನ ಮಂತ್ರಿಯಾದರೆ, ಯಾರೊಬ್ಬನೂ ಆಶ್ಚರ್ಯಪಡುವ ಅಗತ್ಯವಿಲ್ಲ. ಆದರೆ, ಅಲ್ಲೊಂದು ದೊಡ್ಡ 'ಆದರೆ' ಇದೆ. ಇದು ಸಾಧ್ಯವಾಗುವುದು ನರೇಂದ್ರ ಮೋದಿಯವರ ನೇತೃತ್ವದಲ್ಲಿ ಭಾರತೀಯ ಜನತಾ ಪಕ್ಷವು, **ನಂಬಲನರ್ಹ ಎನ್‌ಡಿಎ ಮೈತ್ರಿಕೂಟದ ಪಕ್ಷಗಳ** ಹೊರತಾಗಿ, ತನ್ನ ಸ್ವಂತ ಬಲದ ಮೇಲೆ ಸ್ಥಾನಗಳನ್ನು ಗಳಿಸಲು ವಿಫಲವಾದರೆ ಮಾತ್ರ.

ಅದು ಹಾಗೆ ಇರಲಿ. ಕಾಂಗ್ರೆಸ್ ಪಕ್ಷವು ಅನೇಕ ವರ್ಷಗಳಿಂದ ಕುಸಿಯುತ್ತಿರುವ ಅಥವಾ ಚೈತನ್ಯ ರಹಿತವಾಗಿರುವ ತನ್ನ **ಕಾಂಗ್ರೆಸ್ ಸೇವಾದಳ (ಸಿಎಸ್‌ಡಿ)** ವನ್ನು ಬೇರು ಮಟ್ಟದಲ್ಲಿ ಪಕ್ಷಕ್ಕಾಗಿ ಪೂರ್ಣ ಪ್ರಮಾಣದಲ್ಲಿ ಪುನರುಜ್ಜೀವನಗೊಳಿಸಿದರೆ, ಕಾಂಗ್ರೆಸ್ ಪಕ್ಷಕ್ಕೆ ಲಾಭ ಉಂಟಾಗಬಹುದೆಂಬ ಭಾವನೆ ನನಗಿದೆ. ಅದೇ ವೇಳೆ, ಯಾರೊಬ್ಬರಾದರೂ ಕಾಂಗ್ರೆಸ್ ಸೇವಾ ದಳದ ಈಗಿನ ಮುಖ್ಯಸ್ಥರು ಯಾರು ಎಂಬುದನ್ನು ನನಗೆ ತಿಳಿಸುವರೇ? ಇದು ಚುನಾವಣೆಯಲ್ಲಿ ಸ್ಪರ್ಧಿಸಲು ಪಕ್ಷಕ್ಕೆ ಬೇಕಾದ ವ್ಯತ್ಯಾಸಗಳನ್ನು ಉಂಟು ಮಾಡುತ್ತದೆ.

ಏನಾದರಾಗಲಿ, ಕಾಂಗ್ರೆಸ್ ಪಕ್ಷದ ಅಧ್ಯಕ್ಷ ಚುನಾವಣೆಯ ಬಗ್ಗೆ ಮಾತನಾಡಿ, ಮಲ್ಲಿಕಾರ್ಜುನ ಖರ್ಗೆಯವರಿಗೆ ಅಭಿನಂದನೆ ಸಲ್ಲಿಸಿದಾಗ ನಾನು ಸಂಕುಚಿತ ಮನೋಭಾವನೆಯನ್ನು ಹೊಂದಿರುವ ಹಾಗೆ ಕಾಣಬಹುದು. ಆದರೆ, ಕಾಂಗ್ರೆಸ್ ಪಕ್ಷದ ಅತ್ಯಂತ ಮೇಧಾವಿ (ಬುದ್ಧಿಜೀವಿ) ಶಶಿ ತರೂರ್ ಅವರನ್ನು ಯಕಶ್ಚಿತ್ ಆಗಿ ಪರಿಭಾವಿಸಿದ್ದೇನೆ ಎಂಬರ್ಥವಲ್ಲ.

ಬಾಲಂಗೋಚಿ: ಅಮೇರಿಕದ ಪತ್ರಕರ್ತ ಡೇವಿಡ್ ಸೆಲ್ ಬೋರ್ನೇಯವರು ನಮ್ಮ ದೇಶದ ಆಯ್ಕೆಗೊಂಡ ಜನಪ್ರತಿನಿಧಿಗಳ ಬಗ್ಗೆ ಸ್ವಯಂ ವೇದ್ಯವಾಗುವ ಹಾಗೆ ಮಾತನಾಡಿದ್ದಾರೆ.

"ಭಾರತೀಯರು ಮತವನ್ನು ಹೊಂದಿರಬಹುದು. ಆದರೆ ಅವರು ಪ್ರತಿನಿಧಿಸಲ್ಪಟ್ಟಿಲ್ಲ." ಅವರು ಹೇಳಿದ್ದು ಅರ್ಥವಾಯಿತಾ ಸ್ವಾಮಿ?

Email:
kbg@starofmysore.com

ನಾಳೆಯಿಂದ ಎರಡು ದಿನ ಹರ್ಯಾಣದಲ್ಲಿ ಗೃಹ ಸಚಿವರ ಸಮ್ಮೇಳನ

ಅಪರಾಧ ಪ್ರಕರಣಗಳಲ್ಲಿ ಶಿಕ್ಷೆ ಹೆಚ್ಚಳ: ಗಂಭೀರ ಚರ್ಚೆ

ಬೆಂಗಳೂರು, ಅ.25– ಹರಿಯಾಣದ ಸೂರಜ್‌ಕುಂಡ್‌ನಲ್ಲಿ ಅ.27–28ರಂದು ಅಖಿಲ ಭಾರತ ಗೃಹ ಸಚಿವರ ಸಮ್ಮೇಳನ ನಡೆಯಲಿದ್ದು, ಅಪರಾಧ ಪ್ರಕರಣಗಳಲ್ಲಿ ಶಿಕ್ಷೆ ಪ್ರಮಾಣ ಹೆಚ್ಚಿಸುವ ಕುರಿತಂತೆ ಗಂಭೀರ ಚರ್ಚೆ ನಡೆಯಲಿದೆ ಎಂದು ಗೃಹ ಸಚಿವ ಆರಗ ಜ್ಞಾನೇಂದ್ರ ತಿಳಿಸಿದ್ದಾರೆ.



ಕೇಂದ್ರ ಗೃಹ ಸಚಿವ ಅಮಿತ್ ಶಾ ಅಧ್ಯಕ್ಷತೆಯಲ್ಲಿ ನಡೆಯಲಿರುವ ಸಮ್ಮೇಳನದಲ್ಲಿ ಆಂತರಿಕ ಭದ್ರತೆ, ಸೈಬರ್ ಅಪರಾಧಗಳು ಮತ್ತು ನಿಯಂತ್ರಣ, ಅಪರಾಧಿಗಳಿಗೆ ಶಿಕ್ಷೆ ಪ್ರಮಾಣ ಹಾಗೂ ಇನ್ನಿತರ ವಿಷಯಗಳ ಬಗ್ಗೆ ವಿಶೇಷ ಚರ್ಚೆ ನಡೆಯಲಿದ್ದು, ರಾಜ್ಯದಲ್ಲಿ ಅಪರಾಧಗಳನ್ನು ಪತ್ತೆ ಹಚ್ಚಲು ಕೈಗೊಂಡಿರುವ ವೈಜ್ಞಾನಿಕ ಕ್ರಮಗಳು, ತನಿಖೆ ಕಾರ್ಯದಲ್ಲಿ ಆಧುನಿಕ ತಂತ್ರಜ್ಞಾನ ಅಳವಡಿಕೆ ಬಗ್ಗೆ ಸಮ್ಮೇಳನದಲ್ಲಿ ರಾಜ್ಯದಿಂದ ವಿಷಯ ಮಂಡನೆ ಮಾಡಲಾಗುವುದು ಎಂದು ಮಾಹಿತಿ ನೀಡಿದ್ದಾರೆ.

ಅಪರ ಮುಖ್ಯ ಕಾರ್ಯದರ್ಶಿ ರಜನೀಶ್ ಗೋಯಲ್ ಅವರೂ ಸಮ್ಮೇಳನದಲ್ಲಿ ಪಾಲ್ಗೊಳ್ಳುತ್ತಿದ್ದು, ರಾಜ್ಯ ಪೊಲೀಸ್ ಮುಖ್ಯಸ್ಥ ಪ್ರವೀಣ್ ಸೂದ್, ರಾಜ್ಯದಲ್ಲಿ ಶಾಂತಿ ಸುವ್ಯವಸ್ಥೆ, ಅಪರಾಧ ಚಟುವಟಿಕೆಗಳ ನಿಯಂತ್ರಣ, ಅಪರಾಧ ಪತ್ತೆ, ಸೈಬರ್ ಕ್ರೈಂ ಮುಂತಾದ ವಿಷಯಗಳ ಬಗ್ಗೆ ತೆಗೆದುಕೊಂಡ ಕ್ರಮಗಳನ್ನು, ಸಭೆಯಲ್ಲಿ ಪ್ರಾತ್ಯಕ್ಷಿಕೆ ನೀಡಲಿದ್ದಾರೆ. ಆಧುನಿಕ ತಂತ್ರಜ್ಞಾನವನ್ನು ಬಳಸಿಕೊಂಡು ಅಪರಾಧಿಗಳು ಕಾನೂನಿನ ಕುಣಿಕೆಯಿಂದ ನುಣುಚಿಕೊಳ್ಳದಂತೆ ಕ್ರಮ ಕೈಗೊಳ್ಳುವುದೂ ಸೇರಿದಂತೆ ರಾಜ್ಯ ಸರ್ಕಾರ ಕೈಗೊಂಡಿರುವ ವಿಶೇಷ ಕ್ರಮಗಳ ಬಗ್ಗೆ ಮಾಹಿತಿ ನೀಡಲಿದ್ದಾರೆ ಎಂದು ತಿಳಿಸಿದ್ದಾರೆ. ದೇಶದಲ್ಲಿಯೇ ಪ್ರಥಮ ಬಾರಿಗೆ, ಕರ್ನಾಟಕ ಸರಕಾರ ಅಪರಾಧ ಸ್ಥಳ ಪರಿವೀಕ್ಷಣಾ ಅಧಿಕಾರಿಗಳನ್ನು ನೇಮಕ ಮಾಡಿಕೊಂಡಿದ್ದು, ವೈಜ್ಞಾನಿಕವಾಗಿ ಸಾಕ್ಷ್ಯ ಸಂಗ್ರಹ, ಸಾಕ್ಷ್ಯ ಸಂರಕ್ಷಣೆ ಹಾಗೂ ನ್ಯಾಯಾಲಯಕ್ಕೆ ಸಲ್ಲಿಕೆ ಪ್ರಕ್ರಿಯೆಗಳನ್ನು ನಡೆಸಲು, ವಿಶೇಷ ತರಬೇತಿ ನೀಡಲಾಗಿದೆ. ಮಾದಕ ವಸ್ತುಗಳ ವಿರುದ್ಧ ರಾಜ್ಯದಲ್ಲಿ ಅಭಿಯಾನದ ರೂಪದಲ್ಲಿ ಕಠಿಣ ಕ್ರಮ ಕೈಗೊಂಡಿದ್ದು, ಯುವ ಪೀಳಿಗೆ, ಮಾದಕ ವಸ್ತುಗಳ ಜಾಲಕ್ಕೆ ಬೀಳದಂತೆ ತೆಗೆದುಕೊಂಡ ಕ್ರಮಗಳ ಬಗ್ಗೆಯೂ ಮಾಹಿತಿ ನೀಡಲಾಗುವುದು ಎಂದು ಅರಗ ಜ್ಞಾನೇಂದ್ರ ವಿವರಿಸಿದ್ದಾರೆ.

ಗಣೇಶ ಅಮೀನಗಡ ಕೃತಿಗೆ ತೋಂಟದ ಸಿದ್ಧಲಿಂಗ ಶ್ರೀ ಪ್ರಶಸ್ತಿ

ಮೈಸೂರು, ಅ.25–ಲೇಖಕ, ಪ್ರಕಾಶಕ ಗಣೇಶ ಅಮೀನಗಡ ಅವರ ರಂಗಭೂಮಿ ಕುರಿತ ಲೇಖನಗಳ ಸಂಕಲನ 'ಮಾತು ಹಾಡಾಗಲಿ ಹಾಡು ಮಾತಾಗಲಿ' ಕೃತಿ ವಿಜಯಪುರದ ಕನ್ನಡ ಪುಸ್ತಕ ಪರಿಷತ್ತು ನೀಡುವ 2021ನೇ ಸಾಲಿನ 'ಡಾ. ತೋಂಟದ ಸಿದ್ಧಲಿಂಗ ಶ್ರೀ' ಪುಸ್ತಕ ಪ್ರಶಸ್ತಿಗೆ ಆಯ್ಕೆಯಾಗಿದೆ.


ಗಣೇಶ ಅಮೀನಗಡ

'ಡಾ. ತೋಂಟದ ಸಿದ್ಧಲಿಂಗ ಶ್ರೀ' ಪುಸ್ತಕ ಪ್ರಶಸ್ತಿಯು 5 ಸಾವಿರ ರೂ. ನಗದು ಪುರಸ್ಕಾರ, ಸ್ಮರಣಿಕೆ ಹಾಗೂ ಪ್ರಮಾಣಪತ್ರ ಒಳಗೊಂಡಿರುತ್ತದೆ. ಪ್ರಶಸ್ತಿ ಪ್ರದಾನ ಅ.29ರಂದು ಬೆಳಗ್ಗೆ 11 ಗಂಟೆಗೆ ವಿಜಯಪುರ ಜಿಲ್ಲೆಯ ಆಲಮೇಲ ತಾಲೂಕಿನ ಕಡಣಿಯಲ್ಲಿ ಆಯೋಜಿಸಲಾಗಿದೆ. ಅಂದು ಕಡಣಿಯ ಬೆರಗು ಪ್ರಕಾಶನದ ಪುಸ್ತಕೋತ್ಸವವೂ ಏರ್ಪಡಿಸಲಾಗಿದ್ದು, ಪ್ರಕಾಶನದ 32 ಪುಸ್ತಕಗಳು ಬಿಡುಗಡೆಗೊಳ್ಳಲಿವೆ ಎಂದು ಕನ್ನಡ ಪುಸ್ತಕ ಪರಿಷತ್ತಿನ ಸಂಚಾಲಕ ಶಂಕರ ಬೈಚಬಾಳ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಪ್ರವೇಶಾತಿ ಶುಲ್ಕ ವಸೂಲಿ: ಮೈಸೂರು ವಿವಿ ಮಧ್ಯ ಪ್ರವೇಶಕ್ಕೆ ಆಗ್ರಹಿಸಿ ಮಹಾರಾಣಿ ಕಾಲೇಜು ವಿದ್ಯಾರ್ಥಿನಿಯರ ಆಗ್ರಹ

ಮೈಸೂರು,ಅ.25(ಎಸ್‌ಪಿಎನ್)–ಎಸ್ಸಿ–ಎಸ್ಟಿ ವಿದ್ಯಾರ್ಥಿನಿಯರಿಗೆ ದುಪ್ಪಟ್ಟು ಪ್ರವೇಶಾತಿ ಶುಲ್ಕ ಕಟ್ಟುವಂತೆ ಮಹಾರಾಣಿ ವಾಣಿಜ್ಯ ಕಾಲೇಜಿನ ಪ್ರಾಂಶುಪಾಲರು ಒತ್ತಾಯಿಸಿದ್ದು, ಇದರ ಬಗ್ಗೆ ಮೈಸೂರು ವಿವಿ ತಕ್ಷಣವೇ ಮಧ್ಯ ಪ್ರವೇಶಿಸಿ ಕಾಲೇಜು ಪ್ರಾಂಶುಪಾಲರಿಗೆ ಶುಲ್ಕ ಕಟ್ಟಲು ಒತ್ತಡ ಹಾಕದಂತೆ ನಿರ್ದೇಶಿಸಬೇಕು ಎಂದು ಒತ್ತಾಯಿಸಿ ಮಹಾರಾಣಿ ಕಾಲೇಜಿನ ವಿದ್ಯಾರ್ಥಿನಿಯರು ಮೈಸೂರು ವಿವಿ ಮುಂಭಾಗ ಪ್ರತಿಭಟನೆ ನಡೆಸಿದರು.



ಈ ವೇಳೆ ವಿದ್ಯಾರ್ಥಿನಿಯರ ಬೇಡಿಕೆಗೆ ಸ್ಪಂದಿಸದ ಮೈಸೂರು ವಿವಿ ಕುಲಪತಿ, ಕುಲ ಸಚಿವರ ವಿರುದ್ಧವೂ ಘೋಷಣೆಗಳನ್ನು ಕೂಗಿ, ತಮ್ಮ ಆಕ್ರೋಶ ಹೊರಹಾಕಿದರು. ನಂತರ ಮಾಧ್ಯಮಗಳೊಂದಿಗೆ ಮಾತನಾಡಿದ ವಿದ್ಯಾರ್ಥಿನಿಯರು, 2020ನೇ ಸಾಲಿನ ವಿದ್ಯಾರ್ಥಿವೇತನ ಈ ವರ್ಷ ನಮ್ಮ ಬ್ಯಾಂಕ್ ಖಾತೆಗೆ ಜಮೆಯಾಗಿದೆ. ಆ ಹಣ ಪ್ರವೇಶಾತಿ ಶುಲ್ಕ ಭರಿಸಲು ಸಾಕಾಗುವುದಿಲ್ಲ. ಇದರ ಜೊತೆಗೆ ದ್ವಿತೀಯ ಹಾಗೂ ಅಂತಿಮ ವರ್ಷದ ಪ್ರವೇಶಾತಿ ಶುಲ್ಕವನ್ನೂ ಈಗಲೇ ಭರಿಸುವಂತೆ ಕಾಲೇಜು ಆಡಳಿತ ಮಂಡಳಿ ಒತ್ತಾಯಿಸುತ್ತಿದೆ. ಅವರು ಹೇಳಿದಷ್ಟು ಭರಿಸಲು ನಮ್ಮಿಂದ ಸಾಧ್ಯವಿಲ್ಲ ಎಂದು ಆರೋಪಿಸಿದರು.


ಅಲ್ಲದೆ, ನಮ್ಮ ಪೋಷಕರಿಗೆ ದುಪ್ಪಟ್ಟು ಹಣ ಭರಿಸಲು ಸಾಧ್ಯವಾಗಿದ್ದರೆ, ನಾವು ಖಾಸಗಿ ಕಾಲೇಜಿನಲ್ಲೇ ವ್ಯಾಸಂಗ ಮಾಡುತ್ತಿದ್ದೆವು. ನಾವೇಕೆ ಸರ್ಕಾರಿ ಕಾಲೇಜಿಗೆ ಪ್ರವೇಶಾತಿ ಪಡೆಯುತ್ತಿದ್ದೆವು ಎಂದು ಕುಲಸಚಿವರನ್ನು ಪ್ರಶ್ನಿಸಿದ ವಿದ್ಯಾರ್ಥಿನಿಯರು, ಹಾಗಾಗಿ ಕೂಡಲೇ ವಿವಿ ಆಡಳಿತ ಮಂಡಳಿ ಮಧ್ಯ ಪ್ರವೇಶಿಸಿ, ಪ್ರವೇಶಾತಿ ಶುಲ್ಕ ಭರಿಸುವಂತೆ ಒತ್ತಡ ಹಾಕದಂತೆ ಮಹಾರಾಣಿ ಕಾಲೇಜು ಪ್ರಾಂಶುಪಾಲರಿಗೆ ನಿರ್ದೇಶನ ನೀಡಬೇಕು ಎಂದು ಆಗ್ರಹಿಸಿದರು. ನಮಗೆ ಸರ್ಕಾರ ನೀಡುತ್ತಿರುವ ಶಿಷ್ಯವೇತನವನ್ನಷ್ಟೇ ಶುಲ್ಕ ಕಟಾವಣೆ ಮಾಡಿಕೊಳ್ಳುವಂತೆ ನಿರ್ದೇಶಿಸಬೇಕು ಎಂದು ಸ್ಥಳಕ್ಕೆ ಮನವಿ ಸ್ವೀಕರಿಸಲು ಆಗಮಿಸಿದ್ದ ಕುಲಸಚಿವ ಪ್ರೊ.ಶಿವಪ್ಪ ಅವರಿಗೆ ಪ್ರತಿಭಟನಾ ನಿರತ ವಿದ್ಯಾರ್ಥಿನಿಯರು ಒತ್ತಾಯಿಸಿ, ಮನವಿ ಸಲ್ಲಿಸಿದರು. ಈ ವೇಳೆ ವಿದ್ಯಾರ್ಥಿನಿಯರ ಪ್ರತಿಭಟನೆಗೆ ರಾಜ್ಯ ಸಂಶೋಧಕರ ಸಂಘ ಅಧ್ಯಕ್ಷ ಎಸ್.ಮರಿದೇವಯ್ಯ, ಗೌತಮ್, ಕೈಲಾಸಮೂರ್ತಿ, ದಿಲೀಪ್, ಹಾಗೂ ಇತರೆ ವಿದ್ಯಾರ್ಥಿ ಸಂಘಟನೆಯ ಪದಾಧಿಕಾರಿಗಳು ಸಾಥ್ ನೀಡಿದರು. ಪ್ರತಿಭಟನೆಯಲ್ಲಿ ವಿದ್ಯಾರ್ಥಿನಿಯರಾದ ರಂಜಿತಾ, ಶಿಲ್ಪಾ, ಪುಷ್ಪಾ, ಸುನೀತಾ, ಪವಿತ್ರ ಇದ್ದರು.

Printed by T.S. Gopinath, Published by M. Govinde Gowda on behalf of Academy Newspapers Private Limited, 15-C Industrial 'A' Layout, Bannimantap, Mysore-570 015 and Printed at Academy Newspapers Private Limited, 15-C Industrial 'A' Layout, Bannimantap, Mysore-570 015 and Published at 15-C Industrial 'A' Layout, Bannimantap, Mysore-570 015, Editor: M. Govinde Gowda Ph: 2496520 / 2496521 / 2496526 / 2496527 / 2496528. Fax: 0821-2496525. CITY OFFICES: Visveswaraya Building, III Floor, K.R. CIRCLE, MYSORE-570 001, Ph: 2431774 and No. 114, D. DEVARAJ URS ROAD (Opposite Big Bus), MYSORE-570 001. Ph: 2428695. RNI Reg. No. 36581 / 1980 E-mail address: news@mysurumithra.com For advertisements: ad@mysurumithra.com, website: www.mysurumithra.com

ಹಿರಿಯ ನಾಗರಿಕರು, ವಿಶೇಷಚೇತನರಿಗೆ ತಿಮ್ಮಪ್ಪನ ಉಚಿತ ದರ್ಶನ

ಆನ್‌ಲೈನ್‌ನಲ್ಲಿ ಟಿಕೆಟ್ ಬಿಡುಗಡೆ

ತಿರುಪತಿ,ಅ.25–ತಿರುಮಲ ತಿರುಪತಿ ದೇವಸ್ಥಾನಂ ಹಿರಿಯ ನಾಗರಿಕರು ಮತ್ತು ವಿಶೇಷಚೇತನರಿಗೆ ಸಿಹಿಸುದ್ದಿ ನೀಡಿದೆ. ಅವರ ಕೋಟಾದ ಅಡಿಯಲ್ಲಿ, ನವೆಂಬರ್ ತಿಂಗಳ ಆನ್‌ಲೈನ್ ದರ್ಶನ ಟಿಕೆಟ್‌ಗಳನ್ನು ಅಕ್ಟೋಬರ್ 26ರಂದು ಮಧ್ಯಾಹ್ನ 3 ಗಂಟೆಗೆ ಬಿಡುಗಡೆ ಮಾಡಲಾಗುತ್ತದೆ. ಶ್ರೀ ವೆಂಕಟೇಶ್ವರನ ಭಕ್ತರು ಈ ಅವಕಾಶವನ್ನು ಸದುಪಯೋಗಪಡಿಸಿಕೊಳ್ಳಬೇಕು ಎಂದು ಟಿಟಿಡಿ ತಿಳಿಸಿದೆ. ಮತ್ತೊಂದೆಡೆ ಆಡಳಿತಾತ್ಮಕ ಕಾರಣಗಳಿಂದ ವಿಶೇಷ ದರ್ಶನ ಟಿಕೆಟ್ (ರೂ. 300), ತಿರುಮಲ ವಸತಿ ಡಿಸೆಂಬರ್ ಕೋಟಾವನ್ನು ಈ ತಿಂಗಳ 26ರಂದು ಬೆಳಿಗ್ಗೆ 10 ಗಂಟೆಗೆ ಬಿಡುಗಡೆ ಮಾಡಲಾಗುತ್ತದೆ. ಮೂಲತಃ ಈ ಟಿಕೆಟ್‌ಗಳನ್ನು ಅ.27ರಂದು ಬಿಡುಗಡೆ ಮಾಡಬೇಕಿತ್ತು. ಆದರೆ ಭಕ್ತರ ಅನುಕೂಲಕ್ಕಾಗಿ ಒಂದು ದಿನ ಮುಂಚಿತವಾಗಿ ಬಿಡುಗಡೆ ಮಾಡಲಾಗುತ್ತಿದೆ.



ತಿಮ್ಮಪ್ಪನ ದರ್ಶನಕ್ಕೆ ಬುಕ್ ಮಾಡುವುದು ಹೇಗೆ..?

● ಟಿಕೆಟ್ ಅನ್ನು ಆನ್‌ಲೈನ್‌ನಲ್ಲಿ ಬುಕ್ ಮಾಡಬೇಕು. ● ವಯೋಮಿತಿ 65 ವರ್ಷಕ್ಕಿಂತ ಹೆಚ್ಚಿಗೆ ಇರಬೇಕು. ● ಗುರುತಿನ ಪುರಾವೆಗಾಗಿ ಆಧಾರ್ ಕಾರ್ಡ್ ಕಾಪಿ ಒದಗಿಸಬೇಕು. ● ಹಿರಿಯ ನಾಗರಿಕರ ಜೊತೆಗಿರಲು ಒಬ್ಬ ವ್ಯಕ್ತಿಗೆ ಅನುಮತಿಯಿದೆ. ● ಜೊತೆಗಾರರಾಗಿ ಸಂಗಾತಿಗೆ ಮಾತ್ರವೇ ಅನುಮತಿ ಇದೆ ● 80 ವರ್ಷ ಮೇಲ್ಪಟ್ಟವರ ಸಹಾಯಕರಿಗೂ (ಜೊತೆಗಾರ) ಅನುಮತಿ ನೀಡಲಾಗುತ್ತದೆ

ಸಿಎಂ ಜೊತೆ ಚರ್ಚೆ ಬಳಿಕ ಸಂಪುಟ ವಿಸ್ತರಣೆ

ಹುಬ್ಬಳ್ಳಿ, ಅ.25– ರಾಜ್ಯ ಸಚಿವ ಸಂಪುಟ ವಿಸ್ತರಣೆ ಬಗ್ಗೆ ಸ್ವತಃ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಅವರೇ ಹೇಳಿರುವಾಗ ಅನಗತ್ಯ ಗೊಂದಲ ಬೇಡ ಎಂದು ಕೇಂದ್ರ ಸಚಿವ ಪ್ರಹ್ಲಾದ್ ಜೋಶಿ ಹೇಳಿದ್ದಾರೆ. ಹುಬ್ಬಳ್ಳಿಯಲ್ಲಿ ಮಂಗಳವಾರ ಮಾಧ್ಯಮದವರ ಪ್ರಶ್ನೆಗೆ ಪ್ರತಿಕ್ರಿಯಿಸಿದ ಸಚಿವರು, ಸಮಯ ಬಂದಾಗ ಸಂಪುಟ ವಿಸ್ತರಣೆ ಆಗುತ್ತದೆ ಎಂದರು.



ಸಿಎಂ ಬೊಮ್ಮಾಯಿ ಅವರು ಈಗಾಗಲೇ ಸಂಪುಟ ವಿಸ್ತರಣೆ ಕುರಿತಂತೆ ಚರ್ಚಿಸಲು ದೆಹಲಿ ಪ್ರವಾಸ ಮಾಡಲಿದ್ದಾರೆ. ಸ್ವತಃ ಸಿಎಂ ಬೊಮ್ಮಾಯಿ ಅವರೇ ಸಂಪುಟ ವಿಸ್ತರಣೆ ಕುರಿತಂತೆ ಚರ್ಚಿಸಲು ದೆಹಲಿಗೆ ಹೋಗುತ್ತಿರುವುದಾಗಿ ಹೇಳಿದ್ದಾರೆ. ಸಿಎಂ ಬಸವರಾಜ್ ಬೊಮ್ಮಾಯಿ ಅವರು ದೆಹಲಿಗೆ ಬಂದಾಗ ನಾವೆಲ್ಲ ನಾಯಕರು ಸಂಪುಟ ವಿಸ್ತರಣೆ ಬಗ್ಗೆ ಚರ್ಚಿಸಿ ನಿರ್ಧಾರ ಕೈಗೊಳ್ಳುತ್ತೇವೆ ಎಂದು ಸ್ಪಷ್ಟಪಡಿಸಿದರು.

ದೀಪಾವಳಿ ಬಳಿಕ ದೆಹಲಿಗೆ ಬರುವುದಾಗಿ ಸಿಎಂ ನನಗೆ ತಿಳಿಸಿದ್ದಾರೆ. ಹೀಗಿರುವಾಗ ಸಂಪುಟ ವಿಸ್ತರಣೆ ಬಗ್ಗೆ ಯಾರೂ ಗೊಂದಲಪಡುವ ಅಗತ್ಯವಿಲ್ಲ. ಸಮಯ ಬಂದಾಗ ಸಂಪುಟ ವಿಸ್ತರಣೆ ಆಗಲಿದೆ ಎಂದು ಜೋಶಿ ಸೂಚ್ಯವಾಗಿ ಹೇಳಿದರು.

ರೋಟರಿ ಕ್ಲಬ್ ಆಫ್ ಮೈಸೂರ್ ವೆಸ್ಟ್–ಕಾಮಾಕ್ಷಿ ಆಸ್ಪತ್ರೆಗಳ

'ಜೀವ ರಕ್ಷಿಸಿ' ಯೋಜನೆಗೆ ಚಾಲನೆ

ಮೈಸೂರು, ಅ.25(ಆರ್‌ಕೆ)–ಬಡವರು, ದೀನ–ದಲಿತರು ಹಾಗೂ ಸಮಾಜದ ತಳಹದಿಯಲ್ಲಿರುವವರಿಗೆ ಸೇವೆ ಸಲ್ಲಿಸುವ ವಿಷಯದಲ್ಲಿ, ಅದರಲ್ಲೂ ವಿನೂತನ ಯೋಜನೆಗಳನ್ನು ಅಗತ್ಯವಿರುವ ಜನರಿಗೆ ತಲುಪಿಸುವಲ್ಲಿ ರೋಟರಿ ಕ್ಲಬ್ ಆಫ್ ಮೈಸೂರ್ ವೆಸ್ಟ್ ಸಂಸ್ಥೆಯು ಮುಂಚೂಣಿಯಲ್ಲಿರುತ್ತದೆ.

ಮೈಸೂರು ಸ್ಪೋರ್ಟ್ಸ್ ಕ್ಲಬ್‌ನಲ್ಲಿ ಅಕ್ಟೋಬರ್ 18ರಂದು ಸರಸ್ವತಿಪುರಂನ ಕಾಮಾಕ್ಷಿ ಆಸ್ಪತ್ರೆ ಸಹಯೋಗದೊಂದಿಗೆ ನಡೆದ ರೋಟರಿ ಮೈಸೂರು ವೆಸ್ಟ್ ಗೋಲ್ಡನ್ ಜುಬಿಲಿ ಸಮಾರಂಭದಲ್ಲಿ 'ಜೀವ ರಕ್ಷಿಸಿ (Save a Life) ಎಂಬ ವಿನೂತನ ಯೋಜನೆಗೆ ಚಾಲನೆ ನೀಡಲಾಯಿತು. 'ಮೈಸೂರು ಮಿತ್ರ' ಸಂಸ್ಥಾಪಕ ಸಂಪಾದಕರಾದ ರೊಟೇರಿಯನ್ ಕೆ.ಬಿ.ಗಣಪತಿ ಅವರು ಮುಖ್ಯ ಅತಿಥಿಯಾಗಿ ಪಾಲ್ಗೊಂಡಿದ್ದ ಸಮಾರಂಭದಲ್ಲಿ ಕಾಮಾಕ್ಷಿ ಆಸ್ಪತ್ರೆಗಳ ವ್ಯವಸ್ಥಾಪಕ ಟ್ರಸ್ಟಿ ರೊ. ಡಾ.ಎಂ.ಮಹೇಶ್ ಶೆಣೈ ಅವರು ಗೌರವ ಅತಿಥಿಗಳಾಗಿ ಭಾಗವಹಿಸಿದ್ದರು.



ಇತ್ತೀಚೆಗೆ ಮೈಸೂರು ಸ್ಪೋರ್ಟ್ಸ್ ಕ್ಲಬ್‌ನಲ್ಲಿ ರೋಟರಿ ಕ್ಲಬ್ ಆಫ್ ಮೈಸೂರ್ ವೆಸ್ಟ್ ವತಿಯಿಂದ ಆಯೋಜಿಸಿದ್ದ ಸೇವ್ ಎ ಲೈಫ್ ಯೋಜನೆಗೆ ಚಾಲನೆ ನೀಡುವ ಕಾರ್ಯಕ್ರಮವನ್ನುದ್ದೇಶಿಸಿ 'ಮೈಸೂರು ಮಿತ್ರ' ಪತ್ರಿಕೆ ಸಂಸ್ಥಾಪಕ ಸಂಪಾದಕರಾದ ರೊ. ಕೆ.ಬಿ. ಗಣಪತಿ ಅವರು ಮಾತನಾಡಿದರು. (ಎಡದಿಂದ) ವಲಯ 8ರ ಅಸಿಸ್ಟೆಂಟ್ ಗೌವರ್ನರ್ ರೊ. ಮಂಜುನಾಥ್, ಕಾಮಾಕ್ಷಿ ಆಸ್ಪತ್ರೆಗಳ ಮ್ಯಾನೇಜಿಂಗ್ ಟ್ರಸ್ಟಿ ರೊ. ಡಾ.ಮಹೇಶ್ ಶೆಣೈ, ರೋಟರಿ ಮೈಸೂರು ವೆಸ್ಟ್ ಅಧ್ಯಕ್ಷ ರೊ. ಉಲ್ಲಾಸ್ ಪಂಡಿತ್, ಗೌರವ ಕಾರ್ಯದರ್ಶಿ ರೊ. ಬಿ.ಎಸ್.ಶ್ರೀನಾಥ್, ಸೇವ್ ಎ ಚೈಲ್ಡ್ ಯೋಜನೆ ಅಧ್ಯಕ್ಷ ರೊ. ಸ್ಯಾಮ್ ಚೆರಿಯನ್, ರೋಟರಿ ವೆಸ್ಟ್ ಅಸೋಸಿಯೇಷನ್ ಅಧ್ಯಕ್ಷ ರೊ. ಸಿ.ಎಸ್.ರವಿಶಂಕರ್ ಅವರನ್ನು ಚಿತ್ರದಲ್ಲಿ ಕಾಣಬಹುದು.

ಈ ಸಂದರ್ಭ ಮಾತನಾಡಿದ ಕೆ.ಬಿ. ಗಣಪತಿ ಅವರು, ಬಡವರು, ಸೌಲಭ್ಯಗಳಿಂದ ವಂಚಿತರಾದ ಹಾಗೂ ತುರ್ತಾಗಿ ಅಗತ್ಯವಿರುವವರಿಗೆ ನೆರವು ನೀಡುವುದು ಅತ್ಯವಶ್ಯವಾಗಿದ್ದು, ಮಗುವಿಗೆ ಕಾಕ್ಲಿಯರ್ ಇನ್‌ಪ್ಲಾಂಟ್ ಡಿವೈಸ್ ಸಾಧನ ಅಳವಡಿಸಲು ಬೇಕಾದ ದುಬಾರಿ ವೆಚ್ಚ ಭರಿಸುವ ಕುರಿತಂತೆ ಕೈಗೊಂಡ ಒಂದು ನಿರ್ಧಾರದಿಂದ ಮಗುವಿನ ಮೇಲಾದ ಆರೋಗ್ಯದ ಪರಿಣಾಮವನ್ನು ವಿವರಿಸಿದರು.

ಇಂತಹ ಸಂದರ್ಭಗಳಲ್ಲಿ 'ಸೇವ್ ಎ ಲೈಫ್' ಯೋಜನೆಯು ವರದಾನವಾಗಲಿದೆ. ಸೇವಾನಿರತ ಸಂಸ್ಥೆ, ಕ್ಲಬ್‌ಗಳು ಇಂತಹ ಜನೋಪಯೋಗಿ ಯೋಜನೆಗಳ ಮೂಲಕ ನಿರ್ಗತಿಕರು, ಬಡವರಿಗೆ ದೊಡ್ಡ ಪ್ರಮಾಣದಲ್ಲಿ ಸೇವೆ ಒದಗಿಸಬೇಕೆಂದು ಇದೇ ವೇಳೆ ಕೆಬಿಜಿ ಅವರು ನುಡಿದರು.

ಕಾಮಾಕ್ಷಿ ಆಸ್ಪತ್ರೆಗಳ ಮ್ಯಾನೇಜಿಂಗ್ ಟ್ರಸ್ಟಿ ಡಾ.ಮಹೇಶ್ ಶೆಣೈ ಮಾತನಾಡಿ, ತಮ್ಮ ಅಜ್ಜನ ಕಾಲದಿಂದಲೂ ಆಸ್ಪತ್ರೆಯು ದತ್ತಿ ಸೇವೆ ನಡೆಸುತ್ತಾ ಬಂದಿದೆ. 'ಸೇವ್ ಎ ಚೈಲ್ಡ್' ಮತ್ತು 'ಸೇವ್ ಎ ಲೈಫ್' ಯೋಜನೆಗಳಿಗೆ ರೋಟರಿ ಮೈಸೂರ್ ವೆಸ್ಟ್ ಕ್ಲಬ್‌ನೊಂದಿಗೆ ಸಂಬಂಧ ಹೊಂದಿರುವುದಕ್ಕೆ ತುಂಬಾ ಸಂತೋಷವಾಗಿದೆ ಎಂದರು.

ಇದೇ ಸಮಯದಲ್ಲಿ 'ಸೇವ್ ಎ ಲೈಫ್' ಯೋಜನೆಗೆ ಸಂಬಂಧಿಸಿದಂತೆ ರೋಟರಿ ಮೈಸೂರ್ ವೆಸ್ಟ್ ಮತ್ತು ಕಾಮಾಕ್ಷಿ ಆಸ್ಪತ್ರೆಗಳ ನಡುವೆ ಪರಸ್ಪರ ಒಪ್ಪಂದಕ್ಕೆ ಸಹಿ ಹಾಕಲಾಯಿತು. 'ಸೇವ್ ಎ ಲೈಫ್' ಯೋಜನೆ ಯಾವುದೇ ಕುಟುಂಬದ ಆಧಾರ ಸ್ತಂಭವಾಗಿರುವ ವ್ಯಕ್ತಿ ಅಥವಾ ಜವಾಬ್ದಾರಿ ಹೊತ್ತಿರುವ ತಾಯಿಗೆ ತುಂಬಾ ಅನುಕೂಲಕರವಾಗಿದೆ. 'ಸೇವ್ ಎ ಲೈಫ್' ಯೋಜನೆಯು ಕುಟುಂಬದ ಪ್ರಮುಖ ವ್ಯಕ್ತಿಗಳನ್ನು ಗುರಿಯಾಗಿಸಿಕೊಂಡು ಇಡೀ ಕುಟುಂಬದ ಸುರಕ್ಷತೆಯನ್ನು ಕಾಪಾಡುತ್ತದೆ. ಈ ಯೋಜನೆಗೆ ರೋಟರಿ ಮೈಸೂರ್ ವೆಸ್ಟ್ ಶೇ.60ರಷ್ಟು ಕೊಡುಗೆ ನೀಡಲಿದ್ದು, ಶೇ.20ರಷ್ಟನ್ನು ಕಾಮಾಕ್ಷಿ ಆಸ್ಪತ್ರೆ ನೀಡಲಿದೆ. ಚಿಕಿತ್ಸೆ ಒಟ್ಟು ವೆಚ್ಚದಲ್ಲಿ ಶೇ.20ರಷ್ಟನ್ನು ರೋಗಿ ಭರಿಸಬೇಕಾಗುತ್ತದೆ.

ರೋಟರಿ ಮೈಸೂರ್ ವೆಸ್ಟ್ ಸಂಸ್ಥೆಯು ಕಾಮಾಕ್ಷಿ ಆಸ್ಪತ್ರೆಗಳ ಸಹಯೋಗದೊಂದಿಗೆ ಸೇವ್ ಎ ಲೈಫ್ ಯೋಜನೆಯನ್ನು ಸುಮಾರು 12 ವರ್ಷಗಳಿಂದ ನಡೆಸಿಕೊಂಡು ಬಂದಿದ್ದು, ಈ ಯೋಜನೆಯಿಂದ ಸುಮಾರು 650 ಮಕ್ಕಳು ಶಸ್ತ್ರಚಿಕಿತ್ಸೆಯನ್ನು ಪಡೆಯುವ ಮೂಲಕ ಪ್ರಯೋಜನ ಪಡೆದಿದ್ದಾರೆ.

ಈ ಯೋಜನೆಯ ಇಬ್ಬರು ಪ್ರಮುಖ ಕೊಡುಗೆದಾರರಾದ ರೊ. ಸ್ಯಾಮ್ ಚೆರಿಯನ್ ಮತ್ತು ರೊ. ಡಾ.ರಾಘವೇಂದ್ರಪ್ರಸಾದ್ ಯೋಜನೆ ಅನುಕೂಲಕ್ಕೆ ಪ್ರತಿವರ್ಷ ಇಂತಿಷ್ಟು ನಿಗದಿತ ಮೊತ್ತವನ್ನು ಇಡುವುದಾಗಿ ಭರವಸೆ ನೀಡಿದ್ದಾರೆ. ರೊ. ಜೆ.ಪಿ.ಅಯ್ಯಣ್ಣ ನಿರೂಪಿಸಿದರು. ಅಗತ್ಯವಿರುವವರು ವಿವರಗಳೊಂದಿಗೆ ಕಾಮಾಕ್ಷಿ ಆಸ್ಪತ್ರೆಗೆ ಸಂಪರ್ಕಿಸಬಹುದು.

ಮೈಸೂರಲ್ಲಿ ದೀಪಾವಳಿ ಸಂಭ್ರಮದೊಂದಿಗೆ ಸೂರ್ಯಗ್ರಹಣದ ಧಾರ್ಮಿಕ ಆಚರಣೆ





ಮೈಸೂರು,ಅ.25(ಎಂಟಿವೈ)– ದೀಪಾವಳಿ ಸಂಭ್ರಮದೊಂದಿಗೆ ಮಂಗಳವಾರ ಜರುಗಿದ ವರ್ಷದ ಸೂರ್ಯಗ್ರಹಣದ ಹಿನ್ನೆಲೆಯಲ್ಲಿ ಜನತೆ ವಿವಿಧ ಧಾರ್ಮಿಕ ಆಚರಣೆಯಲ್ಲಿ ನಿರತರಾಗಿದ್ದರು. ಗ್ರಹಣದ ಹಿನ್ನೆಲೆಯಲ್ಲಿ ಮದ್ಯಾಹ್ನದ ನಂತರ ಮೈಸೂರಲ್ಲಿ ಜನ ಸಂಚಾರ ವಿರಳವಾಗಿತ್ತು.

ದೀಪಾವಳಿ ಮೊದಲ ದಿನವಾದ ಸೋಮವಾರ ಜನತೆ ಮನೆಗಳಲ್ಲಿ ಲಕ್ಷ್ಮಿ ಪೂಜೆ ನೆರವೇರಿಸಿ ಸಂಭ್ರಮಿಸಿದ್ದರು. ಹಬ್ಬದ 2ನೇ ಮಂಗಳವಾರ ಅಮಾವಾಸ್ಯೆಯೊಂದಿಗೆ ಸೂರ್ಯಗ್ರಹಣವೂ ಆಗಿದ್ದರಿಂದ, ಜನರು ಗ್ರಹಣ ದೋಷದ ಭಯದಿಂದ ಹಲವರು ಮನೆಯಿಂದ ಹೊರ ಬರಲು ಹಿಂದೇಟು ಹಾಕಿದರು. ಹಬ್ಬದೊಂದಿಗೆ ಗ್ರಹಣದ ಹಿನ್ನೆಲೆಯಲ್ಲಿ ಬೆಳಗ್ಗಿನಿಂದಲೇ ಕೆಲವು ಧಾರ್ಮಿಕ ಕಾರ್ಯದಲ್ಲಿ ನಿರತರಾಗಿದ್ದ ಜನ, ಸಂಜೆ 6 ಗಂಟೆವರೆಗೂ ನಿಶ್ಚಲರಾದಂತೆ ಕಂಡುಬಂದಿತು. ಗ್ರಹಣ ಬಿಟ್ಟಿರುವುದನ್ನು ಖಚಿತಪಡಿಸಿಕೊಂಡ ನಂತರವಷ್ಟೇ ಶುದ್ಧೀಕರಣದ ಕಾರ್ಯ ಕೈಗೊಂಡು, ಸಂಜೆ ವೇಳೆ ಪಟಾಕಿ ಸಿಡಿಸಿ ಸಂಭ್ರಮಿಸಿದರು.

ಪಟಾಕಿ ಖರೀದಿ ಜೋರು: ಅಮಾವಾಸ್ಯೆಯ ನಡುವೆಯೂ ಇಂದು ಬೆಳಗ್ಗಿನಿಂದಲೇ ಪಟಾಕಿ ಖರೀದಿಸುವ ಜೋಶ್ ಜನರಲ್ಲಿದ್ದದ್ದು ಕಂಡು ಬಂದಿತು. ಹೆಬ್ಬಾಳು ಕೈಗಾರಿಕಾ ಪ್ರದೇಶ, ಜೆ.ಕೆ.ಮೈದಾನ, ಬಲ್ಲಾಳ್ ವೃತ್ತ, ವಿವೇಕಾನಂದನಗರ, ಕುವೆಂಪುನಗರ ಸೇರಿದಂತೆ ಹಲವೆಡೆ ಜನರು ಕುಟುಂಬದೊಂದಿಗೆ ತೆರಳಿ ಪಟಾಕಿ ಖರೀದಿಸುವ ದೃಶ್ಯ ಸಾಮಾನ್ಯವಾಗಿತ್ತು. ಸಂಜೆಯಾಗುತ್ತಿದ್ದಂತೆ ಸೂರ್ಯಗ್ರಹಣದ ನಂತರ ಜನತೆ ಮನೆಯಲ್ಲಿ ಪೂಜೆ ಮಾಡಿದ ಬಳಿಕ ಕುಟುಂಬದೊಂದಿಗೆ ಪಟಾಕಿ ಸಿಡಿಸಿ, ಸಂಭ್ರಮಿಸಿದರು. ಮನ್ನಾರ್ಸ್ ಮಾರುಕಟ್ಟೆ ಬಳಿ ದೀಪ ಹಾಗೂ ಆಕಾಶ್ ಬುಟ್ಟಿ ಖರೀದಿ ಜೋರಾಗಿತ್ತು.

ಪೂಜಾ ಸಾಮಗ್ರಿ ಖರೀದಿ ಡಲ್: ದೀಪಾವಳಿ ಹಬ್ಬಕ್ಕಾಗಿ ಪೂಜಾ ಸಾಮಗ್ರಿ ಖರೀದಿ ಮಂಗಳವಾರ ಡಲ್ ಆಗಿತ್ತು. ಕಳೆದ 2–3 ದಿನದಿಂದ ಪೂಜಾ ಸಾಮಗ್ರಿಗಳ ಖರೀದಿಯಲ್ಲಿ ಜನ ತೊಡಗಿಸಿಕೊಂಡಿದ್ದರಿಂದ ಹಾಗೂ ಇಂದು ಅಮಾವಾಸ್ಯೆ ಮತ್ತು ಸೂರ್ಯಗ್ರಹಣದ ಪರಿಣಾಮವಾಗಿ ಮೈಸೂರಿನ ಬಹುತೇಕ ಮಾರುಕಟ್ಟೆಗಳು ಗ್ರಾಹಕರಿಲ್ಲದೆ ಭಣಗುಟ್ಟಿದವು. ಹೂವು, ಹಣ್ಣು, ತರಕಾರಿ ವ್ಯಾಪಾರಿಗಳು ಗ್ರಾಹಕರನ್ನು ಎದುರು ನೋಡುವಂತಾಗಿತ್ತು. ಕಳೆದ ಎರಡು ದಿನಕ್ಕೆ ಹೋಲಿಸಿದರೆ, ಇಂದು ಹೂವಿನ ದರ ಕಡಿಮೆಯಾಗಿತ್ತು. ಆದರೂ ಗ್ರಾಹಕರಿಲ್ಲದೆ ಹೂವಿನ ವ್ಯಾಪಾರಿಗಳು ಪರದಾಡುತ್ತಿದ್ದರು. ದೇವಾಲಯಗಳು ಬಂದ್ ಆಗಿದ್ದರಿಂದ ಹಾಗೂ ಮನೆಗಳಲ್ಲಿ ಸಂಜೆ ನಂತರ ಸ್ವಚ್ಛತಾ ಕಾರ್ಯ ನಡೆಸಿ, ಪೂಜೆ ನಡೆಸುವುದರಿಂದ ಹೂವಿನ ವ್ಯಾಪಾರವೂ ಕಳೆಗುಂದಿತ್ತು.

ಮಂಡಿ ಮಾರುಕಟ್ಟೆ, ಅಗ್ರಹಾರದ ವಾಣಿ ವಿಲಾಸ ಮಾರುಕಟ್ಟೆ, ಎಂ.ಜಿ.ರಸ್ತೆ ಮಾರುಕಟ್ಟೆಯಲ್ಲೂ ಗ್ರಾಹಕರು ಕೊರತೆ ಎದ್ದು ಕಾಣುತ್ತಿತ್ತು. ತರಕಾರಿ, ಹೂವು, ಹಣ್ಣಿನ ವ್ಯಾಪಾರವೂ ಕ್ಷೀಣಿಸಿದ್ದರಿಂದ ವ್ಯಾಪಾರಿಗಳು ಹಬ್ಬದ ದಿನ ಪರದಾಡಿದರು.

ಸಂಜೆ ವೇಳೆ ಕಳೆಗಟ್ಟಿದ ವ್ಯಾಪಾರ: ಚಿಕ್ಕಗಡಿಯಾರದ ಸುತ್ತ ಗಾಡಿಗಳಲ್ಲಿ ಹಣ್ಣಿನ ವ್ಯಾಪಾರ ಮಾಡುತ್ತಿದ್ದ ವ್ಯಾಪಾರಿಗಳಲ್ಲಿ ಗ್ರಹಣ ಕಳೆದ ನಂತರವಷ್ಟೇ ಮಂದಹಾಸ ಮೂಡಿತು. ಜನರು ಸಂಜೆ ನಗರಕ್ಕೆ ಧಾವಿಸಿ, ಹಣ್ಣು, ತರಕಾರಿ ಹಾಗೂ ಪೂಜಾ ಸಾಮಗ್ರಿ ಖರೀದಿಸಲು ಮುಗಿ ಬಿದ್ದ ಪರಿಣಾಮ ವ್ಯಾಪಾರಿಗಳು ಸಮಾಧಾನಪಟ್ಟರು.

ಬಂಡೆಮಠ ಶ್ರೀ ಡೆತ್‌ನೋಟ್‌ನಲ್ಲಿ ವ್ಯತ್ಯಾಸ; ತನಿಖೆಗೆ ಎಸ್‌ಪಿ ಆದೇಶ



ರಾಮನಗರ, ಅ.25– ಬಂಡೆಮಠ ಬಸವಲಿಂಗ ಸ್ವಾಮೀಜಿ ಡೆತ್‌ನೋಟ್‌ನಲ್ಲಿ ಅನಾಮಧೇಯ ವ್ಯಕ್ತಿ ಹೆಸರು ಉಲ್ಲೇಖಿಸಿದ್ದಾರೆ. ಆದರೆ ಮತ್ತೊಬ್ಬ ಅನಾಮಧೇಯ ವ್ಯಕ್ತಿಯ ಬಗ್ಗೆ ಅವರು ಉಲ್ಲೇಖಿಸಿರುವ ಮಾತುಗಳಿಂದ ಬೇಜಾರಾಗಿದೆ ಅಂತ ಸ್ವಾಮೀಜಿ ಬರೆದಿದ್ದಾರೆಂದು ರಾಮನಗರ ಎಸ್ಪಿ ಸಂತೋಷ ಬಾಬು ತಿಳಿಸಿದ್ದಾರೆ.

ಡೆತ್ ನೋಟ್‌ನಲ್ಲಿ ವ್ಯತ್ಯಾಸ: ಕಂಚುಗಲ್ ಬಂಡೆಮಠದ ಬಸವಲಿಂಗ ಸ್ವಾಮೀಜಿ ಆತ್ಮಹತ್ಯೆಗೆ ಸಂಬಂಧಿಸಿದ ಮಾಹಿತಿಯನ್ನು ತಿಳಿಸಿದ ಎಸ್ಪಿ ಸಂತೋಷ್ ಬಾಬು, ಸ್ವಾಮೀಜಿ ಆತ್ಮಹತ್ಯೆ ಮಾಡಿಕೊಂಡ ಸ್ಥಳದಲ್ಲಿ 3 ಪುಟಗಳ ಡೆತ್ ನೋಟ್ ಸಿಕ್ಕಿರುವುದು ನಿಜ. ಆದರೆ ಸಾಮಾಜಿಕ ಜಾಲತಾಣಗಳಲ್ಲಿ ಹರಿದಾಡುತ್ತಿರುವ ಡೆತ್‌ನೋಟ್ ಮತ್ತು ಪೊಲೀಸರಿಗೆ ಸಿಕ್ಕಿರುವ ಡೆತ್‌ನೋಟ್‌ನಲ್ಲಿ ಬಹಳಷ್ಟು ವ್ಯತ್ಯಾಸವಿದೆ ಎಂದು ಸ್ಪಷ್ಟಪಡಿಸಿದ್ದಾರೆ.

ಪ್ರಗತಿಯಲ್ಲಿ ತನಿಖೆ: ಡೆತ್ ನೋಟ್‌ನಲ್ಲಿ ಕೆಲವು ಹೆಸರುಗಳನ್ನು ಉಲ್ಲೇಖಿಸಿದ್ದಾರೆ. ಆದರೆ ಸ್ವಾಮೀಜಿಗಳ ಸಾವಿನಲ್ಲಿ ಅವರ ಪಾತ್ರವೇನೂ ಇಲ್ಲ. ಮತ್ತೊಬ್ಬ ಅನಾಮಧೇಯ ವ್ಯಕ್ತಿಯ ಬಗ್ಗೆ ಅವರು ಉಲ್ಲೇಖಿಸಿ ಅವನಾಡಿರುವ ಮಾತುಗಳಿಂದ ಬೇಜಾರಾಗಿದೆ ಅಂಥ ಬರೆದಿದ್ದಾರೆ. ತನಿಖೆ ಪ್ರಗತಿಯಲ್ಲಿದೆ ಎಂದು ಎಸ್‌ಪಿ ಮಾಹಿತಿ ನೀಡಿದರು.

ಮಳವಳ್ಳಿ ಅತ್ಯಾಚಾರ, ಹತ್ಯೆ ಪ್ರಕರಣ

ನ್ಯಾಯಾಲಯಕ್ಕೆ ಚಾರ್ಜ್‌ಶೀಟ್ ಸಲ್ಲಿಕೆ

ಮಂಡ್ಯ, ಅ.25– ಮಳವಳ್ಳಿ ಬಾಲಕಿ ಕೊಲೆ ಪ್ರಕರಣಕ್ಕೆ ಸಂಬಂಧಿಸಿದಂತೆ ಮಳವಳ್ಳಿ ಡಿವೈಎಸ್ಪಿ ನೇತೃತ್ವದಲ್ಲಿ ನ್ಯಾಯಾಲಯಕ್ಕೆ ಮಂಗಳವಾರ ದೋಷಾರೋಪಣ ಪಟ್ಟಿಯನ್ನು ಸಲ್ಲಿಸಲಾಗಿದೆ ಎಂದು ಮಂಡ್ಯ ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಎನ್.ಯತೀಶ್ ತಿಳಿಸಿದರು.



ಮಂಗಳವಾರ ನಗರದ ಎಸ್ಪಿ ಕಚೇರಿಯಲ್ಲಿ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಪ್ರಕರಣದ ಸೂಕ್ಷ್ಮತೆಯನ್ನು ಅರಿತು ಮಳವಳ್ಳಿ ಡಿವೈಎಸ್ಪಿ ಅವರನ್ನು ತನಿಖಾಧಿಕಾರಿಯನ್ನಾಗಿ ನೇಮಿಸಲಾಗಿತ್ತು. ಅದರಂತೆ ವಿಚಾರಣೆ ನಡೆಸಿದ ಬಳಿಕ ತನಿಖೆಯನ್ನು ಬಹಳ ಪಾರದರ್ಶಕವಾಗಿ ಹಾಗೂ ವೈಜ್ಞಾನಿಕವಾಗಿ ನಡೆಸಿದ್ದು, ಆರೋಪಿಗೆ ಕಠಿಣ ಶಿಕ್ಷೆಯಾಗುವಂತೆ ಮಾಹಿತಿ, ದಾಖಲೆ ಹಾಗೂ ಸಾಕ್ಷಿಗಳನ್ನು ನಾವು ನ್ಯಾಯಾಲಯಕ್ಕೆ ಸಲ್ಲಿಸಿದ್ದೇವೆ. ಈ ಪ್ರಕರಣಕ್ಕೆ ಸಂಬಂಧಿಸಿದಂತೆ ವಿಶೇಷ ಸರ್ಕಾರಿ ಅಭಿಯೋಜಕರನ್ನು ನೇಮಕ ಮಾಡಬೇಕೆಂದು ರಾಜ್ಯ ಸರ್ಕಾರಕ್ಕೆ ಮನವಿಯನ್ನು ಮಾಡಿದ್ದೇವೆ ಎಂದರು.

ಕೋರ್ಟ್‌ಗೆ ಸಲ್ಲಿಸಿರುವ ಚಾರ್ಜ್‌ಶೀಟ್ ಬಗ್ಗೆ ಬಹಿರಂಗವಾಗಿ ಹೇಳಲು ಸಾಧ್ಯವಿಲ್ಲ. ಆದರೆ ಆರೋಪಿಗೆ ಕಠಿಣ ಶಿಕ್ಷೆಯಾಗುವಂತ ನಿಟ್ಟಿನಲ್ಲಿ ಪೂರಕ ದಾಖಲೆಗಳನ್ನು ಕೋರ್ಟ್‌ಗೆ ಸಲ್ಲಿಸಿದ್ದೇವೆ. ಐಪಿಸಿ ಸೆಕ್ಷನ್ 302, 201, 376 ಎ ಮತ್ತು ಬಿ, ಕಲಂ 5(ಐ), ಕಲಂ 5(ಎಂ), 6 ಪೋಕ್ಸೋ ಕಾಯ್ದೆಯಡಿ ನ್ಯಾಯಾಲಯಕ್ಕೆ ಚಾರ್ಜ್‌ಶೀಟ್ ಸಲ್ಲಿಸಿರುವುದಾಗಿ ಎಸ್ಪಿ ಯತೀಶ್ ತಿಳಿಸಿದರು.

ಆರೋಪಿ ಮೇಲೆ ಈ ಹಿಂದೆ ಯಾವುದೇ ಪ್ರಕರಣ ದಾಖಲಾಗಿಲ್ಲ ಈ ನಿಟ್ಟಿನಲ್ಲಿ ಇದೊಂದೇ ಕೇಸಿಗೆ ಸಂಬಂಧಪಟ್ಟಂತೆ ಎಲ್ಲಾ ಆಯಾಮದಲ್ಲೂ ತನಿಖೆಯನ್ನು ಮಾಡಿದ್ದೇವೆ. ಆರೋಪಿ ಈ ಹಿಂದೆ ಎಲ್ಲಿ ಹೋಗುತ್ತಿದ್ದ, ಏನು ಕೆಲಸ ಮಾಡುತ್ತಿದ್ದ, ಈತನ ಒಡನಾಡಿಗಳು ಯಾರ್ಯಾರು ಎಂಬ ಬಗ್ಗೆಯೂ ನಾವು ಮಾಹಿತಿ ಸಂಗ್ರಹಿಸಿದ್ದೇವೆ. ಈ ಬಗ್ಗೆ ಪರಿಶೀಲಿಸಿದಾಗ ಈತ ಯಾವುದೇ ದುಷ್ಕೃತ್ಯದಲ್ಲಿ ಈ ಹಿಂದೆ ಭಾಗಿಯಾಗಿಲ್ಲ ಎಂಬುದು ತಿಳಿದ ಮೇಲೆ ಇದೊಂದೇ ಪ್ರಕರಣದಡಿ ಸಮಗ್ರ ತನಿಖೆ ನಡೆಸಿದ್ದೇವೆ ಎಂದರು.

ಈ ಪ್ರಕರಣದಲ್ಲಿ ಆರೋಪಿಗೆ ಕಠಿಣ ಶಿಕ್ಷೆಯಾಗಬೇಕೆಂಬ ನಿಟ್ಟಿನಲ್ಲಿ ನಾವು ನ್ಯಾಯಾಧೀಶರನ್ನು ಮನವಿ ಏನು ಮಾಡಿಲ್ಲ. ಚಾರ್ಜ್‌ಶೀಟ್ ಸಲ್ಲಿಸಿದ ಬಳಿಕ ಮುಂದಿನ ಕೆಲಸ ನ್ಯಾಯಾಲಯದ್ದೇ ಆಗಿರುವುದರಿಂದ ನ್ಯಾಯಾಲಯ ಮತ್ತು ನ್ಯಾಯಾಧೀಶರು ನಿರ್ಧರಿಸಲಿದ್ದು, ನಮ್ಮ ಸಮಗ್ರ ತನಿಖೆಯಲ್ಲಿ ಆರೋಪಿ ಅತ್ಯಾಚಾರ ಮತ್ತು ಕೊಲೆ ಮಾಡಿರುವುದು ಸಾಬೀತಾಗಿರುವ ಹಿನ್ನಲೆಯಲ್ಲೇ ನಾವು ಕೋರ್ಟ್‌ಗೆ ಎಲ್ಲಾ ವಿಚಾರವನ್ನು ಸೇರಿಸಿ ಚಾರ್ಜ್‌ಶೀಟ್ ಸಲ್ಲಿಕೆ ಮಾಡಿದ್ದೇವೆ. ಆರೋಪಿಗೆ ತಕ್ಕ ಶಿಕ್ಷೆ ವಿಧಿಸುವುದು ನ್ಯಾಯಾಲಯ ಮತ್ತು ನ್ಯಾಯಾಧೀಶರ ತೀರ್ಮಾನ ಆಗಿರುತ್ತದೆ ಎಂದು ಸ್ಪಷ್ಟಪಡಿಸಿದರು.

ಈ ಪ್ರಕರಣದ ಸೂಕ್ಷ್ಮತೆ ಅರಿತು ಎಡಿಜಿಪಿ ಅಲೋಕ್‌ಕುಮಾರ್ ಹಾಗೂ ದಕ್ಷಿಣ ವಲಯ ಐಜಿಪಿ ಪ್ರವೀಣ್ ಮಧುಕರ್ ಪವಾರ್ ಮೃತ ಬಾಲಕಿ ಮನೆಗೆ ಭೇಟಿ ನೀಡಿ, ಕುಟುಂಬಕ್ಕೆ ಸಾಂತ್ವನ ಹೇಳಿ, ಬಳಿಕ ತನಿಖೆ ನಡೆಸುವ ಸೂಕ್ಷ್ಮ ವಿಧಾನಗಳ ಬಗ್ಗೆ ನಮಗೆ ತಿಳಿಸಿದ್ದರು. ಅವರ ಮಾರ್ಗದರ್ಶನದಲ್ಲಿ ಇಡೀ ತಂಡ ತನಿಖೆ ಹಾಗೂ ವಿಚಾರಣೆ ನಡೆಸಿದೆ ಎಂದು ಹೇಳಿದರು.

ಮಂಡ್ಯದಲ್ಲಿ ಕಳೆಗಟ್ಟಿದ ದೀಪಾವಳಿ, ಪಟಾಕಿ ಖರೀದಿ ಜೋರು



ಮಂಡ್ಯ, ಅ.25– ಸಕ್ಕರೆ ನಾಡು ಮಂಡ್ಯದಲ್ಲಿ ಈ ಬಾರಿ ದೀಪಾವಳಿ ಕಳೆಗಟ್ಟಿದ್ದು, ಸಾರ್ವಜನಿಕರು ಪಟಾಕಿ ಖರೀದಿ ಮಾಡಲು ಮುಗಿಬೀಳುತ್ತಿದ್ದ ದೃಶ್ಯ ಕಂಡು ಬಂತು.

ಮಂಡ್ಯ ನಗರ ಸೇರಿದಂತೆ ಜಿಲ್ಲೆಯಾದ್ಯಂತ ದೀಪಾವಳಿಯ ರಂಗು ಕಳೆಗಟ್ಟಿದೆ. ಕಳೆದ ಎರಡು ವರ್ಷಗಳಿಂದ ಕೊರೊನಾ ಹೊಡೆತದಿಂದ ಬೆಳಕಿನ ಹಬ್ಬದ ಸಂದರ್ಭದಲ್ಲಿ ಕಳೆಯೇ ಇರಲಿಲ್ಲ. ಆದರೆ ಈ ಬಾರಿ ಹಬ್ಬದ ರಂಗು ಜೋರಾಗಿತ್ತು.

ಮಂಡ್ಯ ನಗರದ ಸರ್‌ಎಂವಿ ಕ್ರೀಡಾಂಗಣದ ಹಿಂಭಾಗ ಪಟಾಕಿ ಸ್ಟಾಲ್‌ನಲ್ಲಿ ಕಳೆದ ಎರಡು–ಮೂರು ದಿನಗಳಿಂದ ಪಟಾಕಿ ಖರೀದಿ ಜೋರಾಗಿ ನಡೆಯುತ್ತಿದೆ. ಹಬ್ಬ ಮುನ್ನಾ ದಿನವಾದ ಇಂದು ಜನರು ಗುಂಪು-ಗುಂಪಾಗಿ ಪಟಾಕಿ ಖರೀದಿ ಮಾಡುತ್ತಿದ್ದರು.

ನಿನ್ನೆ ನರಕ ಚತುರ್ದಶಿಯಂದು ವಿವಿಧ ದೇವಾಲಯಗಳಲ್ಲಿ ಪೂಜೆ, ಪುನಸ್ಕಾರ ಜೋರಾಗಿದ್ದರೆ ಇಂದು ಗ್ರಹಣ ಅಂಗವಾಗಿ ಮನೆಯಲ್ಲಿಯೇ ಪೂಜೆಗಳು ನಡೆದವು.

ಗ್ರಹಣದ ಅಂಗವಾಗಿ ದೇಗುಲಗಳು ಬಂದ್: ಮಂಗಳವಾರ ಅಮಾವಾಸ್ಯೆ ದಿನದಂದು ದೀಪಾವಳಿ ಹಬ್ಬದ ಮುನ್ನಾ ದಿನ ಸೂರ್ಯ ಗ್ರಹಣದ ಅಂಗವಾಗಿ ಮಂಡ್ಯದ ವಿವಿಧ ದೇಗುಲಗಳು ಬಂದ್ ಗೊಂಡಿದ್ದವು. ಸಂಜೆ 7 ಗಂಟೆ ಬಳಿಕ ದೇಗುಲಗಳು ತೆರೆದವು.

ಮೇಲುಕೋಟೆಯ ಚೆಲುವನಾರಾಯಣ ಸ್ವಾಮಿ, ಶ್ರೀರಂಗಪಟ್ಟಣದ ಶ್ರೀ ನಿಮಿಷಾಂಬ, ಶ್ರೀರಂಗನಾಥ, ಆದಿಚುಂಚನ ಗಿರಿಯ ಕಾಲ ಭೈರವೇಶ್ವರ, ಮದ್ದೂರಿನ ವೈದ್ಯನಾಥೇಶ್ವರ, ಮದ್ದೂರಮ್ಮ, ಹೊಳೆ ಆಂಜನೇಯ ದೇಗುಲ, ಮಳವಳ್ಳಿಯ ಮತ್ತೀ ತಾಳೇಶ್ವರ, ಆಬಲವಾಡಿಯ ತೋಪಿನ ತಿಮ್ಮಪ್ಪ, ಮಂಡ್ಯ ನಗರದ ಕಾಳಿಕಾಂಬ, ಅರ್ಕೇಶ್ವರ ದೇಗುಲಗಳು ಏಳರ ಬಳಿಕ ತೆರೆದವು.

ಭಾರತೀನಗರದಲ್ಲಿ ಪಟಾಕಿ ವ್ಯಾಪಾರ ನೀರಸ

ಭಾರತೀನಗರ, ಅ.25– ನಿರಂತರವಾಗಿ ಜನಜಾಗೃತಿ ಮೂಡಿಸುವ ಜಾಹೀರಾತು ಹಾಗೂ ಮಳೆಯ ಅಬ್ಬರದಿಂದ ಬೆಳಕಿನ ಹಬ್ಬದ ದೀಪಾವಳಿಯಲ್ಲಿ ಪಟಾಕಿ ಸಿಡಿಸುವ ಸಂಭ್ರಮ ಭಾರತೀನಗರದಲ್ಲಿ ಗಣನೀಯವಾಗಿ ಕುಸಿದಿದೆ.

ಜನರು ಪಟಾಕಿ ಕೊಂಡುಕೊಳ್ಳದ ಕಾರಣ ಪಟಾಕಿಗಳ ಸದ್ದು, ಗದ್ದಲ ವರ್ಷದಿಂದ ವರ್ಷಕ್ಕೆ ಕಡಿಮೆಯಾಗುತ್ತ ಬರುತ್ತಿದೆ. ದೀಪಾವಳಿ ಶಬ್ದಮಾಲಿನ್ಯ ಮುಕ್ತವಾಗಬೇಕೆಂಬ ಅರಿವು ಎಲ್ಲೆಡೆ ಹೆಚ್ಚಾಗುತ್ತಿರುವುದರಿಂದ ಪಟಾಕಿಗಳ ಸಡಗರವು ಕಡಿಮೆಯಾಗುತ್ತಿದೆ. ಪರಿಸರಕ್ಕೆ ಮಾರಕವಾದ ಹಾಗೂ ಪ್ರಾಣಿ–ಪಕ್ಷಿಗಳಿಗೆ ಕಿರಿಕಿರಿಯಾಗುವ ಮತ್ತು ಮಾನವರು ಎಚ್ಚರ ತಪ್ಪಿದರೆ ದೃಷ್ಟಿಯನ್ನೇ ಕಳೆದುಕೊಳ್ಳಬೇಕಾದ ಭಯ ಪಟಾಕಿಯಲ್ಲಿ ಅಡಗಿರುತ್ತದೆ. ಈ ಹಿನ್ನೆಲೆಯಲ್ಲಿ ಇತ್ತೀಚೆಗೆ ಎಲ್ಲೆಡೆ ಪರಿಸರ ಜಾಗೃತಿ ವೇದಿಕೆಗಳು ಹಾಗೂ ಪರಿಸರ ಪ್ರೇಮಿಗಳು ಜಾಗೃತಿ ಮೂಡಿಸುತ್ತಿರುವುದರಿಂದ ಪಟಾಕಿಗಳ ಕಿವಿಗಡಚಿಕ್ಕುವ ಶಬ್ದ ಹಾಗೂ ಕಣ್ಣುಕೋರೈಸುವ ಬೆಳಕಿನ ತೀವ್ರತೆ ದಿನೇದಿನೇ ಕಡಿಮೆಯಾಗುತ್ತಿದೆ.

ಅಗತ್ಯ ವಸ್ತುಗಳ ಬೆಲೆ ಏರಿಕೆ ನಡುವೆಯೂ ದೀಪಾವಳಿ ಹಬ್ಬವನ್ನು ಸಂಭ್ರಮ ಸಡಗರದಿಂದ ಆಚರಿಸುತ್ತಿರುವ ಜನತೆ ಪಟಾಕಿಗಳತ್ತ ಹೆಚ್ಚು ಮುಖ ಮಾಡದಿರುವುದು ಪಟಾಕಿ ವ್ಯಾಪಾರಸ್ಥರಿಗೆ ಆತಂಕ ಮೂಡಿಸಿ, ಲಾಭವಿರಲಿ, ಹಾಕಿದ ಬಂಡವಾಳ ಗತಿ ಏನು ಎನ್ನುವಂತಾಗಿದೆ. ಈ ಹಿಂದಿನ ವರ್ಷಗಳಲ್ಲಿ ಪಟಾಕಿ ಬೆಲೆ ದುಬಾರಿ ಎಂದು ಚಿಂತಿಸುತ್ತಿದ್ದ ಜನರು ಈ ದೀಪಾವಳಿಯಲ್ಲಿ ಅದರ ಗೊಡವೆ ನಮಗೇತಕ್ಕೆ ಎನ್ನುತ್ತಿದ್ದಾರೆ. ಆದರೂ, ಕೆಲವರು ಮಕ್ಕಳನ್ನು ಸಂತೋಷಪಡಿಸಲು ಅಪಾಯಕಾರಿಯಲ್ಲದ ಸಣ್ಣಪುಟ್ಟ ಪಟಾಕಿ ಐಟಂಗಳನ್ನು ಕೊಡಿಸುತ್ತಿರುವುದು ಕಂಡುಬಂದಿದೆ.

ಕುರುಬ ಸಮುದಾಯವನ್ನು ಎಸ್‌ಟಿ ವರ್ಗಕ್ಕೆ ಸೇರಿಸಲು ಆಗ್ರಹ

ಕೆ.ಆರ್.ಪೇಟೆ, ಅ.25– ಗೊಂಡ ಮತ್ತು ಕುರುಬರು ಒಂದೇ ಎಂದು ಪರಿಗಣಿಸಿ ರಾಜ್ಯದಲ್ಲಿ ಹಿಂದುಳಿದ ಸಮುದಾಯವಾಗಿರುವ ಕುರುಬ ಸಮುದಾಯವನ್ನು ಪರಿಶಿಷ್ಟ ಪಂಗಡಕ್ಕೆ ಸೇರ್ಪಡೆ ಮಾಡಬೇಕು ಎಂದು ತಾಲೂಕು ಕುರುಬ ಸಮುದಾಯ ಎಸ್.ಟಿ. ಹೋರಾಟ ವೇದಿಕೆಯ ಯುವ ಮುಖಂಡ ಶ್ರೀನಿವಾಸ್ ಮುತ್ತಣ್ಣ ಒತ್ತಾಯಿಸಿದರು.



ಈಗಾಗಲೇ ಅನೇಕ ರಾಜ್ಯಗಳಲ್ಲಿ ಕುರುಬ ಸಮಾಜವನ್ನು ಪರಿಶಿಷ್ಟ ಜಾತಿಗೆ ಸೇರ್ಪಡೆ ಮಾಡಿರುವ ಕಾರಣ ಅಲ್ಲಿ ಸಮುದಾಯದ ಅಭಿವೃದ್ಧಿ ಸಾಧ್ಯವಾಗಿದೆ. ಆದ್ದರಿಂದ ಕರ್ನಾಟಕದಲ್ಲಿಯೂ ಗೊಂಡ ಪರ್ಯಾಯ ಪದವೇ ಕುರುಬ ಸಮುದಾಯವಾಗಿರುವ ಕಾರಣ ಕುರುಬರನ್ನು ಎಸ್.ಟಿ. ವರ್ಗಕ್ಕೆ ಸೇರಿಸುವ ಮೂಲಕ ಸಮುದಾಯದ ಅಭಿವೃದ್ಧಿಗೆ ಅವಕಾಶ ಕಲ್ಪಿಸಬೇಕು ಎಂದು ಆಗ್ರಹಿಸಿದರು.

ಸುದ್ದಿಗಾರರೊಂದಿಗೆ ಮಾತನಾಡಿದ ಶ್ರೀನಿವಾಸ್ ಮುತ್ತಣ್ಣ, ಕುರುಬ ಮತ್ತು ಗೊಂಡ ಒಂದೇ ಅರ್ಥವನ್ನು ತಿಳಿಸುವ ಪದಗಳಾಗಿವೆ. 1997ರಲ್ಲಿ ರಾಜ್ಯ ಸರ್ಕಾರವು ಕೇಂದ್ರ ಸರ್ಕಾರಕ್ಕೆ ಗೊಂಡ ಪರ್ಯಾಯ ಪದ ಕುರುಬ ಆಗಿದೆ ಎಂಬ ಪ್ರಸ್ತಾವನೆಯನ್ನು ಕಳುಹಿಸಿತ್ತು. ಮೈಸೂರಿನ ಪರಿಶಿಷ್ಟ ವರ್ಗಗಳ ಸಂಶೋಧನಾ ಸಂಸ್ಥೆ ನೀಡಿದ ವರದಿಯನ್ನು 2014ರಲ್ಲಿ ಸಚಿವ ಸಂಪುಟದಲ್ಲಿ ಒಪ್ಪಿಗೆ ನೀಡಿ ಮತ್ತೊಮ್ಮೆ ರಾಜ್ಯ ಸರ್ಕಾರವು ಕೇಂದ್ರಕ್ಕೆ ಕಳುಹಿಸಿ ಕೊಟ್ಟಿದೆ. ಈ ವರದಿಯ ಹಿನ್ನೆಲೆಯಲ್ಲಿ ಕುರುಬ ಸಮುದಾಯವನ್ನು ಎಸ್.ಟಿ. ವರ್ಗಕ್ಕೆ ಸೇರಿಸುವಂತೆ ಒತ್ತಾಯಿಸಿ ಕಾಗಿನೆಲೆ ಶ್ರೀಗಳು ಬೆಂಗಳೂರಿಗೆ ಪಾದಯಾತ್ರೆ ನಡೆಸಿದ್ದರು. ಇಷ್ಟಾದರೂ ಕೇಂದ್ರ ಸರ್ಕಾರವು ವಿಳಂಬ ಮಾಡುತ್ತಿರುವುದು ಸರಿಯಲ್ಲ. ಬೆಟ್ಟ ಕುರುಬ, ಕಾಡು ಕುರುಬ, ಜೇನು ಕುರುಬ ಎಲ್ಲವೂ ಕುರುಬ ಸಮುದಾಯದ ಪರ್ಯಾಯ ಪದಗಳಾಗಿವೆ. ಹಾಗಾಗಿ ಕೂಡಲೇ ರಾಜ್ಯ ಮತ್ತು ಕೇಂದ್ರ ಸರ್ಕಾರಗಳು ಕುರುಬ ಸಮುದಾಯವನ್ನು ಪರಿಶಿಷ್ಟ ವರ್ಗಕ್ಕೆ ಸೇರಿಸಬೇಕು ಎಂದು ಶ್ರೀನಿವಾಸ್ ಮುತ್ತಣ್ಣ ಒತ್ತಾಯ ಮಾಡಿದರು.

ನ.3ರಂದು ರಾಜಮುಡಿ ಅಷ್ಠ ತೀರ್ಥೋತ್ಸವ



ಫೈಲ್ ಚಿತ್ರ

ಮೇಲುಕೋಟೆ, ಅ.25– ಮಕ್ಕಳ ಭಾಗ್ಯ ಕರುಣಿಸುವ ಉತ್ಸವವೆಂದೇ ಪ್ರಖ್ಯಾತವಾಗಿರುವ ಚೆಲುವನಾರಾಯಣಸ್ವಾಮಿಯವರ ತೊಟ್ಟಿಲುಮಡು ಜಾತ್ರೆ "ರಾಜಮುಡಿ ಅಷ್ಠ ತೀರ್ಥೋತ್ಸವ" ನ.3ರ ಗುರುವಾರ ನಡೆಯಲಿದೆ.

ಅಷ್ಠತೀರ್ಥೋತ್ಸವ ಬೆಳಗ್ಗೆ 8ಗಂಟೆಗೆ ಕಲ್ಯಾಣಿಯಲ್ಲಿ ಆರಂಭವಾಗಿ ರಾತ್ರಿ 9ಗಂಟೆಗೆ ಮುಕ್ತಾಯವಾಗಲಿದೆ. ಈ ನಡುವೆ ಗಿರಿಕಂದರಗಳ ಮಧ್ಯೆಯಿರುವ ಎಂಟು ತೀರ್ಥಗಳಲ್ಲಿ ಸ್ವಾಮಿಯ ಪಾದುಕೆಗೆ ಅಭಿಷೇಕ ನೆರವೇರಿಸಲಾಗುತ್ತದೆ. ಸಂಜೆ ಕಣಿವೆ ಬಳಿಯಿರುವ ತೊಟ್ಟಿಲಮಡು ಬಳಿ ಜಾತ್ರೆ ಸೇರುತ್ತದೆ. ಅಷ್ಠತೀರ್ಥೋತ್ಸವದಲ್ಲಿ ಮಕ್ಕಳ ಭಾಗ್ಯ ಅಪೇಕ್ಷಿಸುವ ದಂಪತಿಗಳು, ವಿವಾಹ ಅಪೇಕ್ಷಿತರು ಹರಕೆಯೊಂದಿಗೆ ಭಾಗಿಯಾದರೆ ಇಷ್ಟಾರ್ಥ ಸಿದ್ಧಿಸುತ್ತದೆ ಎಂಬ ನಂಬಿಕೆಯಿಂದ ನೂರಾರು ಸಂಖ್ಯೆಯ ಭಕ್ತರು ಪಾಲ್ಗೊಳ್ಳುತ್ತಾರೆ.

ಇದಕ್ಕೂ ಮುನ್ನ ದಿನವಾದ ನವೆಂಬರ್ 2ರ ಬುಧವಾರ ರಾತ್ರಿ 7 ಗಂಟೆಗೆ ರಾಜಮುಡಿ ಉತ್ಸವ ನೆರವೇರಲಿದೆ. ರಾಜಮುಡಿ ಬ್ರಹ್ಮೋತ್ಸವ ಸಂಬಂಧ ಧಾರ್ಮಿಕ ಕಾರ್ಯಕ್ರಮಗಳು ಅ.28 ರಿಂದಲೇ ಆರಂಭವಾಗಿ ಹತ್ತು ದಿನಗಳ ಕಾಲ ನಡೆಯಲಿದೆ.

ಮಂಡ್ಯ ಜಿಲ್ಲಾ ಖಜಾನೆಯಲ್ಲಿರುವ ರಾಜಮುಡಿ ಕಿರೀಟವನ್ನು ಪೊಲೀಸ್ ಭದ್ರತೆಯಲ್ಲಿ ಮೇಲುಕೋಟೆಗೆ ತಂದು ಪಾರ್ವತಿ ಮಂಟಪದ ಬಳಿಯ ಕಾರ್ಯಸಿದ್ಧಿ ವೀರಾಂಜನೇಯ ಸ್ವಾಮಿ ಸನ್ನಿಧಿಯಲ್ಲಿಳಿಸಿ ಪೂಜೆ ಮಾಡಿ ಪಲ್ಲಕ್ಕಿಯಲ್ಲಿ ಮೆರವಣಿಗೆಯ ಮೂಲಕ ದೇವಾಲಯಕ್ಕೆ ತಂದು ಸ್ಥಾನೀಕರು, ಅರ್ಚಕ ಪರಿಚಾರಕರ ಸಮಕ್ಷಮ ಪರಿಶೀಲಿಸಿ ಚೆಲುವ ನಾರಾಯಣನಿಗೆ ಅಲಂಕರಿಸಿ ಉತ್ಸವ ನೆರವೇರಿಸಲಾಗುತ್ತದೆ.

ಅ.28 ರಂದು ಅಂಕುರಾರ್ಪಣೆಯೊಂದಿಗೆ ಆರಂಭವಾಗುವ ರಾಜಮುಡಿ ಬ್ರಹ್ಮೋತ್ಸವದಲ್ಲಿ ಅ.29, ಧ್ವಜಪ್ರತಿಷ್ಠೆ, ಅ.30 ರಂದು ಒಂದನೇ ತಿರುನಾಳ್, ನ.5ರಂದು ರಥ, ನ.7ರಂದು ಅವಭೃತ ತೀರ್ಥಸ್ನಾನ, ಅ.8ರಂದು ಪುಷ್ಪಯಾಗದೊಂದಿಗೆ ರಾಜಮುಡಿ ಬ್ರಹ್ಮೋತ್ಸವ ಮುಕ್ತಾಯವಾಗಲಿದೆ.

ಬಹಿರಂಗ ಹರಾಜು ಪ್ರಕ್ರಿಯೆ

ಮಂಡ್ಯ, ಅ.25– ಮಂಡ್ಯ ತಾಲೂಕು ಕೆರಗೋಡು ಪೊಲೀಸ್ ಠಾಣಾ ವ್ಯಾಪ್ತಿಯ ಹುಲಿವನ ಗ್ರಾಮದ ಶ್ರೀ ಬೈರೇಶ್ವರ ಅಕ್ಕಿ ಗಿರಾಣಿಯಲ್ಲಿ ವಶಪಡಿಸಿಕೊಂಡಿ ರುವ ಅಕ್ರಮವಾಗಿ ಸಂಗ್ರಹಿಸಿದ 38.89 ಕ್ವಿಂಟಾಲ್ ಮತ್ತು 47 ಕ್ವಿಂಟಾಲ್ ಅಕ್ಕಿನುಚ್ಚನ್ನು ಹೆಚ್ಚು ಕಾಲ ಹಾಗೆಯೇ ಇಟ್ಟಲ್ಲಿ ಹಾಳಾಗುವ ಸಂಭವವಿರುವುದರಿಂದ ಮುಕ್ತ ಮಾರುಕಟ್ಟೆ ದರದಲ್ಲಿ/ಎಪಿಎಲ್ ದರಕ್ಕಿಂತ ಕಡಿಮೆಯಾಗದಂತೆ ನವೆಂಬರ್ 05 ರಂದು ಬೆಳಗ್ಗೆ 11 ಗಂಟೆಗೆ ಆರ್.ಎ.ಪಿ.ಸಿ.ಎಂ.ಎಸ್ ಮಂಡ್ಯ ಸಗಟು ಮಳಿಗೆ ಆವರಣದಲ್ಲಿ ಬಹಿರಂಗ ಹರಾಜು ವಿಲೇವಾರಿ ಮಾಡಲಾಗುವುದು ಎಂದು ಮಂಡ್ಯ ತಹಶೀಲ್ದಾರ್ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.



ಶ್ರೀರಂಗಪಟ್ಟಣ ತಾಲೂಕಿನ ಬ್ರಹ್ಮಪುರ ಗ್ರಾಮದಲ್ಲಿ ವಿದ್ಯುತ್ ಸ್ಪರ್ಶದಿಂದ ಮೃತಪಟ್ಟ ಹಸುವಿನ ಮಾಲೀಕರಿಗೆ ಎನ್. ಶಂಕರೇಗೌಡ ಚಾರಿಟಬಲ್ ಟ್ರಸ್ಟ್‌ನ ಪೋಷಕ ಇಂಡುವಾಳು ಸಚ್ಚಿದಾನಂದ ವೈಯಕ್ತಿಕವಾಗಿ ಪರಿಹಾರ ನೀಡಿದರು. ತಾಪಂ ಮಾಜಿ ಅಧ್ಯಕ್ಷ ಟಿ. ಶ್ರೀಧರ್, ಮೇಳಾಪುರ ಪಿಎಸಿಎಸ್ ಮಾಜಿ ಅಧ್ಯಕ್ಷ ಎಂ.ಜೆ. ಪುಟ್ಟರಾಜು, ಟಿಎಪಿಸಿಎಂಎಸ್ ನಿರ್ದೇಶಕ ಶಿವಕುಮಾರ್, ಮೇಳಾಪುರ ಗ್ರಾಪಂ ಅಧ್ಯಕ್ಷ ಬೆಟ್ಟೇಗೌಡ, ಸದಸ್ಯ ಹೊಸೂರು ಧನರಾಜ್, ಮಹದೇವಪುರ ಶಶಿಕುಮಾರ್, ಮುಖಂಡರಾದ ನಗುವನಹಳ್ಳಿ ಮಹದೇವಸ್ವಾಮಿ, ವೆಂಕಟೇಶ್, ಪ್ರದೀಪ್, ವಿರೂಪಾಕ್ಷ, ಸಚಿನ್, ಭರತ್, ನವೀನ್, ಚಂದನ್, ಬ್ರಹ್ಮಪುರ ಮಂಜುನಾಥ್, ಬೆಳವಾಡಿ ರಾಜೇಶ್ ಈ ಸಂದರ್ಭದಲ್ಲಿ ಹಾಜರಿದ್ದರು.

ಕಾಂತಾರ ಚಿತ್ರ ವೀಕ್ಷಿಸಿ ಹೊರ ಬರುತ್ತಿದ್ದ ವ್ಯಕ್ತಿಗೆ ಹೃದಯಾಘಾತ: ಸಾವು

ನಾಗಮಂಗಲ, ಅ.25– ಕಾಂತಾರ ಸಿನಿಮಾ ವೀಕ್ಷಿಸಿ, ಚಿತ್ರಮಂದಿರದಿಂದ ಹೊರಗೆ ಬರುತ್ತಿದ್ದ ವ್ಯಕ್ತಿಯೊಬ್ಬ ಹೃದಯಾಘಾತದಿಂದ ಚಿತ್ರಮಂದಿರದ ಆವರಣದಲ್ಲೇ ಸಾವನ್ನಪ್ಪಿದ ಘಟನೆ ಪಟ್ಟಣದಲ್ಲಿ ಸಂಭವಿಸಿದೆ. ನಾಗಮಂಗಲ ತಾಲೂಕಿನ ಸಾರೆ ಮೇಗಲಕೊಪ್ಪ ಗ್ರಾಮದ ರಾಜಶೇಖರ್ (45) ಹೃದಯಾಘಾತದಿಂದ ಸಾವನ್ನಪ್ಪಿದ ವ್ಯಕ್ತಿಯಾಗಿದ್ದು, ಕಾಂತಾರ ಚಿತ್ರ ನೋಡಲು ವೆಂಕಟೇಶ್ವರ ಚಿತ್ರಮಂದಿರಕ್ಕೆ ಆಗಮಿಸಿದ್ದರು. ಖುಷಿಯಾಗಿಯೇ ಕಾಂತಾರ ಸಿನಿಮಾವನ್ನು ವೀಕ್ಷಿಸಿದ ರಾಜಶೇಖರ್, ಥಿಯೇಟರ್‌ನಿಂದ ಆಚೆ ಬರುವಾಗ ಎದೆ ನೋವು ಕಾಣಿಸಿಕೊಂಡಿದೆ. ಅಲ್ಲಿಯೇ ಕುಸಿದಿದ್ದಾರೆ. ತೀವ್ರ ಹೃದಯಾಘಾತವಾಗಿ ರಾಜಶೇಖರ್ ಸಾವನ್ನಪ್ಪಿದ್ದಾರೆ. ಘಟನೆ ಸುಂಬಂಧ ನಾಗಮಂಗಲ ಪಟ್ಟಣ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಕರ್ನಾಟಕ ಜಾನಪದ ಪರಿಷತ್ ಜಿಲ್ಲಾಧ್ಯಕ್ಷರಾಗಿ ಡಾ.ಹೆಚ್.ಆರ್.ತಿಮ್ಮೇಗೌಡ

ಮೈಸೂರು, ಅ.25(ಎಸ್‌ಪಿಎನ್)–ಮೈಸೂರಿನ ಜಯಲಕ್ಷ್ಮಿಪುರಂನಲ್ಲಿರುವ ಎಸ್‌ಬಿಆರ್‌ಆರ್ ಮಹಾಜನ ಪ್ರಥಮ ದರ್ಜೆ ಕಾಲೇಜಿನ ಕನ್ನಡ ವಿಭಾಗದ ಮುಖ್ಯಸ್ಥ ಡಾ. ಎಚ್.ಆರ್. ತಿಮ್ಮೇಗೌಡ ಅವರನ್ನು ಕರ್ನಾಟಕ ಜಾನಪದ ಪರಿಷತ್ತಿನ (ಜಾನಪದ ಲೋಕ) ಮೈಸೂರು ಜಿಲ್ಲಾಧ್ಯಕ್ಷರನ್ನಾಗಿ ಆಯ್ಕೆ ಮಾಡಲಾಗಿದೆ. ಕಳೆದ ಮೂರು ದಶಕಗಳಿಂದ ಮಹಾಜನ ಕಾಲೇಜಿನಲ್ಲಿ ಕನ್ನಡ ಪ್ರಾಧ್ಯಾಪಕರಾಗಿ, ಸಂಘಟಕರಾಗಿ, ಮೈಸೂರು ವಿಶ್ವವಿದ್ಯಾನಿಲಯದ ಪದವಿ ಕನ್ನಡ ಅಧ್ಯಾಪಕರ ಸಂಘದ ಅಧ್ಯಕ್ಷರಾಗಿ ಕಾರ್ಯನಿರ್ವಹಿಸುತ್ತಿದ್ದಾರೆ. 'ಒಳದನಿ', 'ಕೋಳಲದನಿ', 'ಸಂವೇದನೆ', 'ಭಾರತೀಯ ಕಾವ್ಯಮೀಮಾಂಸೆ–ಸಮೀಕ್ಷೆ– ಒಂದು ಅವಲೋಕನ', 'ಸಂಕ್ಷಿಪ್ತ ಶಬ್ದಮಣಿದರ್ಪಣ', 'ಕನ್ನಡ ಸಾಹಿತ್ಯದಲ್ಲಿ ಪ್ರಗತಿಶೀಲರ ಸಣ್ಣಕತೆಗಳು ಹಾಗೂ ಇನ್ನಿತರ ಕೃತಿಗಳನ್ನು ರಚಿಸಿ ಕನ್ನಡ ಸಾಹಿತ್ಯ ಸೇವೆಯಲ್ಲಿ ನಿರತರಾಗಿದ್ದಾರೆ.



ಇವರಿಗೆ 'ಉತ್ತಮ ಶಿಕ್ಷಕ ಪ್ರಶಸ್ತಿ', 'ಉತ್ತಮ ಎನ್.ಎಸ್.ಎಸ್. ಕಾರ್ಯಕ್ರಮಾಧಿಕಾರಿ ಪ್ರಶಸ್ತಿ', 'ಪರಿಸರಮಿತ್ರ ಪ್ರಶಸ್ತಿ' ಮತ್ತು 'ಆದರ್ಶ ಗುರು ಪ್ರಶಸ್ತಿ'ಗಳು ಲಭಿಸಿದೆ ಎಂದು ಮಹಾಜನ ಕಾಲೇಜಿನ ಪತ್ರಿಕೋದ್ಯಮ ಮತ್ತು ಸಹಾಯಕ ಪ್ರಾಧ್ಯಾಪಕ ಎಲ್.ರವಿ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಮೂರನೇ ಪುಟದಿಂದ

ಗುಂಪು ವಸತಿ ಯೋಜನೆ

ನಗರ ಪ್ರದೇಶದಲ್ಲಿ ಮೀಸಲಿ ರಿಸಿರುವ ತನ್ನ ಜಾಗಗಳಲ್ಲಿ ಬಹು ಮಹಡಿ ಕಟ್ಟಡ ನಿರ್ಮಿಸಿ ಕೈಗೆಟಕುವ ದರದಲ್ಲಿ ಗುಂಪು ಮನೆಗಳನ್ನು ಬಡವರು ಮತ್ತು ಮಧ್ಯಮ ವರ್ಗದವರಿಗೆ ಮಂಜೂರು ಮಾಡಲು ಮುಂದಾಗಿದೆ. ಮುಡಾ ಅಭಿವೃದ್ಧಿಪಡಿಸಿರುವ ವಿಜಯನಗರ 4ನೇ ಹಂತ, 2ನೇ ಘಟ್ಟದಲ್ಲಿ 560 ಮತ್ತು ದಟ್ಟಗಳ್ಳಿ–ರಾಮಕೃಷ್ಣನಗರ 'ಎ' ಮತ್ತು 'ಬಿ' ಬ್ಲಾಕ್‌ನಲ್ಲಿ 392 ಸೇರಿ ಒಟ್ಟು 952 ಮನೆಗಳನ್ನು 342 ಕೋಟಿ ರೂ. ಅಂದಾಜು ವೆಚ್ಚದಲ್ಲಿ ನಿರ್ಮಿಸಲುದ್ದೇಶಿಸಿರುವ ಪ್ರಾಧಿಕಾರವು ಡಿಪಿಆರ್‌ನೊಂದಿಗೆ ಅನುಮೋದನೆಗಾಗಿ ಸರ್ಕಾರಕ್ಕೆ ಪ್ರಸ್ತಾವನೆ ಸಲ್ಲಿಸಿದೆ. ವಾಹನ ನಿಲ್ದಾಣಕ್ಕಾಗಿ ಭೂಮಿ ಮಟ್ಟಕ್ಕೆ ತಳಭಾಗದಲ್ಲಿ ಎರಡು ಅಂತಸ್ತು ಹಾಗೂ 14 ಮಹಡಿಗಳ ವಸತಿ ಸಮುಚ್ಚಯ (G+14)ದ ಗಗನಚುಂಬಿ ಕಟ್ಟಡಗಳನ್ನು ಮೈ–1 ಟೆಕ್ನಾಲಜಿ ಬಳಸಿ ಆರ್‌ಸಿಸಿ ಗೋಡೆಯೊಂದಿಗೆ 18 ತಿಂಗಳೊಳಗಾಗಿ ನಿರ್ಮಿಸಲು ಮೈಸೂರು ನಗರಾಭಿವೃದ್ಧಿ ಪ್ರಾಧಿಕಾರದ ಸಭೆಯು ಆಡಳಿತಾತ್ಮಕ ಅನುಮೋದನೆ ನೀಡಿದೆ.

ಬೇಸ್‌ಮೆಂಟ್+ಸ್ಟಿಲ್ಟ್+14 ಮಹಡಿ ಕಟ್ಟಡಗಳನ್ನು ವಿಜಯನಗರದಲ್ಲಿ ಪ್ರತೀ ಮಹಡಿಗೆ 32ರಂತೆ 448 ಮನೆ, ಮತ್ತೊಂದು ಟವರ್‌ನ ಪ್ರತೀ ಮಹಡಿಯಲ್ಲಿ 8ರಂತೆ 112 ಮನೆ ಸೇರಿ ಒಟ್ಟು 560 ಮನೆಗಳನ್ನು ನಿರ್ಮಿಸಲುದ್ದೇಶಿಸಲಾಗಿದೆ. ದಟ್ಟಗಳ್ಳಿಯ 12,869.60 ಚದರ ಮೀಟರ್ ವಿಸ್ತೀರ್ಣದಲ್ಲಿ ಪ್ರತೀ ಮಹಡಿಯಲ್ಲಿ 28ರಂತೆ 392 ಮನೆಗಳನ್ನು ನಿರ್ಮಿಸಲು ಡಿಪಿಆರ್ ತಯಾರಿಸಲಾಗಿದೆ. ಒಟ್ಟು 952 ಮನೆಗಳನ್ನು ಶಿಯರ್‌ವಾಲ್ ಟೆಕ್ನಾಲಜಿ (ಮೈ–1 ಟೆಕ್ನಾಲಜಿ) ಅಳವಡಿಸಿಕೊಂಡು 7.28 ಎಕರೆ ಪ್ರದೇಶದಲ್ಲಿ ನಿರ್ಮಿಸಲುದ್ದೇಶಿಸಿರುವ ಬಹುಮಹಡಿ ವಸತಿ ಯೋಜನೆಯನ್ನು 342 ಕೋಟಿ ರೂ. ವೆಚ್ಚದಲ್ಲಿ ಅನುಷ್ಠಾನಗೊಳಿಸಲು ಮುಡಾ ಸರ್ಕಾರದ ಅನುಮೋದನೆ ಎದುರು ನೋಡುತ್ತಿದೆ. ಯೋಜನೆಗೆ ತಗಲುವ ವೆಚ್ಚದ ಶೇ.15ರಷ್ಟನ್ನು ಮುಡಾ ನಿವೇಶನ ವಿಲೇವಾರಿಯಿಂದ ಬಂದಿರುವ ಹಣವನ್ನು ಬ್ಯಾಂಕಿನಲ್ಲಿ ಠೇವಣಿ ಇರಿಸಿರುವ ಹಣದಿಂದ, ಉಳಿದ ಹಣವನ್ನು ಮನೆ ಹಂಚಿಕೆ ಮಾಡಿದಾಗ ಕಂತು ರೂಪದಲ್ಲಿ ಬರುವ ಹಣದಿಂದ ಭರಿಸಲು ಉದ್ದೇಶಿಸಲಾಗಿದೆ. ಅಲ್ಲದೆ ಪ್ರಸಕ್ತ ಸಾಲಿನಲ್ಲಿ ಈ ಉದ್ದೇಶಕ್ಕೆ ಬಜೆಟ್‌ನ ಅಭಿವೃದ್ಧಿ ನಿಧಿ–1ರಲ್ಲಿ 75 ಕೋಟಿ ರೂ. ಅನುದಾನವನ್ನು ಪ್ರಾಧಿಕಾರವು ಕಾಯ್ದಿರಿಸಿದೆ. ಭೂ ಸ್ವಾಧೀನ ಕಾಯ್ದೆ–2013 ಜಾರಿಗೆ ಬಂದ ನಂತರ ಮುಡಾದಿಂದ ಹೊಸದಾಗಿ ಬಡಾವಣೆ ರಚಿಸಲು ಭೂ ಪರಿಹಾರದ ವೆಚ್ಚ ಅಧಿಕವಾಗಿರುವುದರಿಂದ ಕೈಗೆಟಕುವ ದರದಲ್ಲಿ ನಿವೇಶನ ಒದಗಿಸಲು ಸಾಧ್ಯವಿಲ್ಲವಾದ್ದರಿಂದ ಗುಂಪು ವಸತಿಗಾಗಿ ಕಾಯ್ದಿರಿಸಿರುವ ಜಾಗದಲ್ಲೇ ಎತ್ತರದ ಬಹುಮಹಡಿ ಕಟ್ಟಡ ನಿರ್ಮಿಸಿ ಮನೆಗಳನ್ನು ಹಂಚಿಕೆ ಮಾಡಲು ಮುಡಾ ಸಿದ್ಧತೆ ಮಾಡಿಕೊಂಡಿದೆ.

ಈಗಾಗಲೇ ನಿವೇಶನ ಕೋರಿ ಕಳೆದ 20–30 ವರ್ಷಗಳಿಂದ 80,000 ಮಂದಿ ಕಾಯುತ್ತಿದ್ದಾರಲ್ಲದೆ, ಮನೆ ಬೇಡಿಕೆ ಸಮೀಕ್ಷೆ ಮಾಡಿದಾಗ 46,000 ಅರ್ಜಿಗಳು ಸಲ್ಲಿಕೆಯಾಗಿವೆ. ಈ ಬೇಡಿಕೆಯನ್ನು ಗಮನದಲ್ಲಿರಿಸಿಕೊಂಡು ಪ್ರಾಧಿಕಾರವು ಗುಂಪು ಮನೆ ಯೋಜನೆ ತಯಾರಿಸಿ ಸರ್ಕಾರದ ಅನುಮೋದನೆಗಾಗಿ ಎದುರು ನೋಡುತ್ತಿದೆ.

ಖರ್ಗೆ ಅಧಿಕಾರ ಸ್ವೀಕಾರ

ಎಐಸಿಸಿ ಅಧ್ಯಕ್ಷ ಸ್ಥಾನಕ್ಕೆ ಚುನಾವಣೆ ನಡೆಸಲು ತೀರ್ಮಾನವಾದಾಗ ಶುರುವಿನಲ್ಲಿ ರಾಜಸ್ತಾನ ಮುಖ್ಯಮಂತ್ರಿ ಅಶೋಕ್ ಗೆಹ್ಲೋಟ್ ಅವರನ್ನು ಆ ಜಾಗಕ್ಕೆ ತರಲು ಸೋನಿಯಾಗಾಂಧಿ ನಿರ್ಧರಿಸಿದ್ದರಾದರೂ,ಮುಖ್ಯಮಂತ್ರಿ ಪಟ್ಟವನ್ನು ಕಳೆದುಕೊಳ್ಳಲು ಅಶೋಕ್ ಗೆಹ್ಲೋಟ್ ಅವರು ಇಷ್ಟಪಡಲಿಲ್ಲ. ಹೀಗಾಗಿ ತಮ್ಮ ಬೆಂಬಲಿಗ ಶಾಸಕರು ಇದಕ್ಕೆ ವಿರೋಧ ವ್ಯಕ್ತಪಡಿಸುತ್ತಿರುವುದಾಗಿ ಕಾಂಗ್ರೆಸ್ ಹೈಕಮಾಂಡ್‌ಗೆ ಅಶೋಕ್ ಗೆಹ್ಲೋಟ್ ಅವರು ಮನವರಿಕೆ ಮಾಡಿಕೊಟ್ಟಾಗ,ಸೋನಿಯಾಗಾಂಧಿ ಅವರ ಕಣ್ಣಿಗೆ ಕಾಣಿಸಿದವರೇ ಮಲ್ಲಿಕಾರ್ಜುನ ಖರ್ಗೆ. ದಲಿತ ಸಮುದಾಯದ ಮಲ್ಲಿಕಾರ್ಜುನ ಖರ್ಗೆ ಐದು ದಶಕಗಳಿಂದ ಪಕ್ಷದ ನಿಷ್ಠಾವಂತ ಸಿಪಾಯಿಯಾಗಿ ಕಾರ್ಯನಿರ್ವಹಿಸಿದ್ದು, ಕರ್ನಾಟಕದಲ್ಲಿ ಶಾಸಕರಾಗಿ, ಸಚಿವರಾಗಿ, ವಿರೋಧಪಕ್ಷದ ನಾಯಕರಾಗಿ, ಕೆಪಿಸಿಸಿ ಅಧ್ಯಕ್ಷರಾಗಿ ಕಾರ್ಯನಿರ್ವಹಿಸಿದವರು. 1972ರಲ್ಲಿ ಮೊದಲ ಬಾರಿ ಶಾಸನಸಭೆ ಪ್ರವೇಶಿಸಿದ್ದ ಮಲ್ಲಿಕಾರ್ಜುನ ಖರ್ಗೆ ಸತತ ಒಂಭತ್ತು ಬಾರಿ ಶಾಸಕರಾಗಿ ಆಯ್ಕೆಯಾಗಿದ್ದರಲ್ಲದೆ, ಎರಡು ಬಾರಿ ಲೋಕಸಭೆಗೆ ಆಯ್ಕೆಯಾಗಿದ್ದರು.

ಉತ್ತಮ ಬೆಳವಣಿಗೆ

ಅವರು ಅಭಿಪ್ರಾಯ ಪಟ್ಟಿದ್ದಾರೆ. ಪ್ರಸ್ತುತ ಮೈಸೂರಿನ ಮಾನಸ ಗಂಗೋತ್ರಿಯಲ್ಲಿ ಶ್ರೀಕಂಠದತ್ತ ನರಸಿಂಹರಾಜ ಒಡೆಯರ್ ಕ್ರಿಕೆಟ್ ಮೈದಾನವಿದೆ. ಆದರೆ, ಐಪಿಎಲ್ ನಂತಹ ಪಂದ್ಯಾವಳಿ ನಡೆದರೆ ಹೆಚ್ಚು ಮಂದಿ ವೀಕ್ಷಿಸಲು ಸಾಧ್ಯವಾಗದು. ಒಂದು ವೇಳೆ ಕೆಎಸ್‌ಸಿಎದಿಂದ ಹೊಸ ಸ್ಟೇಡಿಯಂ ನಿರ್ಮಾಣವಾದಲ್ಲಿ ಒಳ್ಳೆಯದಾಗುತ್ತದೆ ಎಂದು ಅವರು ನುಡಿದರು. ಮೈಸೂರಲ್ಲಿ ವಾರಿಯರ್ಸ್ ಪಂದ್ಯ ನಡೆದಾಗ ಜಾಗ ಸಾಲದೆ ಜನ ಕಿಕ್ಕಿರಿದು ಸೇರಿದ್ದನ್ನು ನೋಡಿದ್ದೇವೆ. ಇದೀಗ ರಸ್ತೆ, ರೈಲು ಮತ್ತು ವಿಮಾನ ಸಂಪರ್ಕವಾಗಿರುವುದರಿಂದ ಐಪಿಎಲ್ ಪಂದ್ಯಾವಳಿಗೆ ಮೈಸೂರು ಸೂಕ್ತ ಸ್ಥಳವಾಗಿದ್ದು, ಅದರಿಂದ ಮೈಸೂರು ಪ್ರಾಂತದ ಕ್ರಿಕೆಟ್ ಪ್ರತಿಭೆಗಳು ಅಂತಾರಾಷ್ಟ್ರೀಯ ಮಟ್ಟದಲ್ಲಿ ಮನ್ನಣೆ ಗಳಿಸಲು ಸಾಧ್ಯವಾಗುತ್ತದೆ ಎಂದು ಅರ್ಜುನ್ ರಂಗ ಅವರು ತಿಳಿಸಿದರು. ಮೈಸೂರಲ್ಲಿ ಐಪಿಎಲ್ ಮ್ಯಾಚ್ ಅನ್ನು ಬಹಳಷ್ಟು ಮಂದಿ ಎದುರು ನೋಡುತ್ತಿದ್ದಾರೆ. ಇಲ್ಲಿ ಅಂತಾರಾಷ್ಟ್ರೀಯ ಕ್ರಿಕೆಟ್ ಕ್ರೀಡಾಂಗಣ ನಿರ್ಮಾಣ ಮಾಡುವ ಬಗ್ಗೆ ಆಸಕ್ತಿ ತೋರಿರುವ ಬಿಸಿಸಿಐ ನಡೆ ಸ್ವಾಗತಾರ್ಹ ಎಂದು ಕೆಎಸ್‌ಸಿಎ ಮೈಸೂರು ವಲಯದ ಸಂಚಾಲಕ ಎಸ್.ಸುಧಾಕರ್ ರೈ ಅವರು ಪ್ರತಿಕ್ರಿಯಿಸಿದ್ದಾರೆ. ಎರಡು ವರ್ಷದೊಳಗಾಗಿ ಅಂತಾರಾಷ್ಟ್ರೀಯ ಕ್ರಿಕೆಟ್ ಕ್ರೀಡಾಂಗಣ ಸ್ಥಾಪನೆಯಾದಲ್ಲಿ ಮೈಸೂರು ವಿಶ್ವದ ಕ್ರಿಕೆಟ್ ಭೂಪಟದಲ್ಲಿ ರಾರಾಜಿಸಲಿದೆ ಎಂದು ಅವರು ನುಡಿದರು.

ಸಮ್ಮತಿಯಷ್ಟೇ ಬಾಕಿ

ನಗರಾಭಿವೃದ್ಧಿ ಇಲಾಖೆ ಸೂಕ್ತ ನಿರ್ಧಾರ ಕೈಗೊಂಡು ಅಗತ್ಯ ಭೂಮಿ ಮಂಜೂರು ಮಾಡಬೇಕು ಎಂದರು. ಬೆಂಗಳೂರಿನ ಚಿನ್ನಸ್ವಾಮಿ ಕ್ರೀಡಾಂಗಣ 32,000 ಆಸನ ಸಾಮರ್ಥ್ಯ ಹೊಂದಿದ್ದು, ಅದನ್ನು 70,000 ಆಸನ ಸಾಮರ್ಥ್ಯಕ್ಕೆ ವಿಸ್ತರಿಸಿ ಉನ್ನತೀಕರಿ ಸಲು ಕೆಎಸ್‌ಸಿಎ ಪ್ರಯತ್ನಿಸುತ್ತಿದೆ. ಐಪಿಎಲ್ ಗವರ್ನಿಂಗ್ ಕೌನ್ಸಿಲ್ ಅಧ್ಯಕ್ಷ ಬ್ರಿಜೇಶ್ ಪಟೇಲ್ ಮತ್ತು ಕೆಎಸ್‌ಸಿಎ ಗೌರವ ಕಾರ್ಯದರ್ಶಿ ಸಂತೋಷ್ ಮೆನನ್ ಅವರು ಮೈಸೂರಲ್ಲಿ ಇತ್ತೀಚೆಗೆ ನಡೆದ ಮಹಾರಾಜ ಟ್ರೋಫಿ–20 ಕ್ರಿಕೆಟ್ ಪಂದ್ಯಾವಳಿ ಸಂದರ್ಭ ಸಂಸದ ಪ್ರತಾಪ್ ಸಿಂಹರೊಂದಿಗೆ ಸಭೆ ನಡೆಸಿ ಸಮಾಲೋಚಿಸಿದ್ದಾರೆ. ಮೈಸೂರಲ್ಲಿ ಅಂತಾರಾಷ್ಟ್ರೀಯ ಕ್ರಿಕೆಟ್ ಕ್ರೀಡಾಂಗಣ ನಿರ್ಮಿಸಲು ತಾವು ಸರ್ವ ರೀತಿಯಲ್ಲಿ ಸಹಕರಿಸುವುದಾಗಿ ಇದೇ ವೇಳೆ ಪ್ರತಾಪ್ ಸಿಂಹ ಭರವಸೆ ನೀಡಿದ್ದಾರೆ. ಕ್ರೀಡಾಂಗಣ ನಿರ್ಮಿಸಲು ಕೆಎಸ್‌ಸಿಎ 40 ಕೋಟಿ ರೂ. ಹೂಡಿಕೆ ಮಾಡುವುದಾಗಿ ಸಂತೋಷ್ ಮೆನನ್ ಅವರು ಈ ಸಂದರ್ಭ ಪ್ರಕಟಿಸಿದ್ದಾರೆ. ಮೈಸೂರು, ಮಂಡ್ಯ, ಕೊಡಗು, ಹಾಸನ ಮತ್ತು ಚಾಮರಾಜನಗರ ಜಿಲ್ಲೆಗಳಲ್ಲಿ ಕ್ರಿಕೆಟ್‌ಗೆ ಪ್ರೋತ್ಸಾಹ ನೀಡುವ ಸಲುವಾಗಿ ಮುಡಾದಿಂದ ರಿಯಾಯಿತಿ ದರದಲ್ಲಿ ಭೂಮಿ ಮಂಜೂರು ಮಾಡಿಸಿಕೊಡುವುದಾಗಿ ಮುಖ್ಯಮಂತ್ರಿಗಳು ಭರವಸೆ ನೀಡಿದ್ದಾರೆಂಬ ವಿಷಯವನ್ನು ಪ್ರತಾಪ್‌ಸಿಂಹ ಅವರು ಬ್ರಿಜೇಶ್ ಪಟೇಲ್ ಮತ್ತು ಸಂತೋಷ್ ಮೆನನ್ ಅವರಿಗೆ ತಿಳಿಸಿದ್ದಾರೆ.

ಅಖಂಡ ಭಾರತಕ್ಕಾಗಿ ಒಂದು ದೀಪ ಕಾರ್ಯಕ್ರಮ



ಮೈಸೂರು, ಅ. 25– "ಅಖಂಡ ಭಾರತಕ್ಕಾಗಿ ಒಂದು ದೀಪ" ಎಂಬ ಕಾರ್ಯಕ್ರಮವನ್ನು ವೀರಸಾವರ್ಕರ್ ಯುವ ಬಳಗದಿಂದ ಡಿ.ದೇವರಾಜ ಅರಸು ರಸ್ತೆಯ ತ್ರಿಪುರಭೈರವಿ ಮಠದ ಆವರಣದಲ್ಲಿ ಹಮ್ಮಿಕೊಳ್ಳಲಾಗಿತ್ತು.

ಪಾಕಿಸ್ತಾನ, ನೇಪಾಳ, ಬಾಂಗ್ಲಾದೇಶ, ಅಫ್ಘಾನಿಸ್ತಾನ, ಮಯನ್ಮಾರ್, ಥಾಯ್ಲಾಂಡ್, ಕಾಂಬೋಡಿಯಾ, ವಿಯೆಟ್ನಾಂ, ಇಂಡೋನೇಷಿಯಾ, ಶ್ರೀಲಂಕಾ, ಮಾಲ್ಡೀವ್ಸ್ ಸೇರಿದಂತೆ ಅನೇಕ ದೇಶಗಳಲ್ಲಿ ಹಿಂದೂಸ್ಥಾನದ ಸಂಸ್ಕೃತಿಯು ನೆಲೆಸಿತ್ತು. ಕಾಲಾಂತರದಲ್ಲಿ ಬದಲಾವಣೆಗಳಾಗಿ ವಿವಿಧ ದೇಶಗಳಾಗಿ ಗಡಿ ಹಾಕಿಕೊಂಡಿವೆ. ಎಲ್ಲವನ್ನೂ ಮತ್ತೆ ಒಟ್ಟುಗೂಡಿಸಿ ಅಖಂಡ ಭಾರತವನ್ನಾಗಿಸುವ ಸಂಕಲ್ಪಕ್ಕಾಗಿ ದೀಪಾವಳಿಯಂದು ಅಖಂಡ ಭಾರತಕ್ಕಾಗಿ ಒಂದು ದೀಪ ಎಂಬ ಕಾರ್ಯಕ್ರಮವನ್ನು ರಾಜ್ಯದಾದ್ಯಂತ ಆಚರಿಸಲಾಗುತ್ತಿದೆ. ಕಾರ್ಯಕ್ರಮದಲ್ಲಿ ಅಖಂಡ ಭಾರತದ ಭೂಪಟದ ಮುಂದೆ ಹಣತೆಯನ್ನು ಹಚ್ಚಿ ಆರತಿ ಮಾಡಲಾಯಿತು. ಭಾರತ ಮಾತೆಗೆ ಜಯಘೋಷ ಕೂಗಿ ಅಖಂಡ ಭಾರತಕ್ಕಾಗಿ ಸಂಕಲ್ಪಿಸಲಾಯಿತು.

ನಂತರ ಮಾತನಾಡಿದ ಬಳಗದ ಅಧ್ಯಕ್ಷ ರಾಕೇಶ್ ಭಟ್, ಹಿಂದೂಸ್ತಾನದ ಸುತ್ತಮುತ್ತಲಿನ ದೇಶಗಳಲ್ಲಿ ಭಾರತೀಯ ಹೆಸರುಗಳು, ಸಂಸ್ಕೃತಿ ಜೀವಂತವಾಗಿರುವುದನ್ನು ಈಗಲೂ ಕಾಣಬಹುದು. ಇತ್ತೀಚಿನ ದಿನಗಳಲ್ಲಿ ಹಿಂದುತ್ವ ಎಂದರೆ ಕೋಮುವಾದ, ಮೂಲಭೂತವಾದ ಮತ್ತು ಬ್ರಾಹ್ಮಣವಾದ ಎಂಬ ಸುಳ್ಳನ್ನು ಜನರ ಮನಸ್ಸಿನಲ್ಲಿ ತುಂಬಲು ಯತ್ನಿಸಲಾಗುತ್ತಿದೆ. ಆದರೆ ಸಾವರ್ಕರ್ ಅವರು ಯಾರೆಲ್ಲಾ ಭಾರತೀಯ ನೆಲದ ಸಂಸ್ಕೃತಿಯನ್ನು ಒಪ್ಪಿ ಅನುಸರಿಸಿ ಬದುಕುತ್ತಿದ್ದಾರೋ ಅವರೆಲ್ಲರೂ ಹಿಂದೂಗಳು ಎಂಬುದನ್ನು ಪ್ರತಿಪಾದಿಸಿದ್ದರು. ಸರ್ವೋಚ್ಚ ನ್ಯಾಯಾಲಯವು ಸಹ ಹಿಂದೂ ಎಂದರೆ ಬದುಕುವ ವಿಧಾನ ಎಂಬುದಾಗಿ ತಿಳಿಸಿದೆ. ಈ ಸಿದ್ಧಾಂತದ ಅಡಿಯಲ್ಲಿ ಸರ್ವ ಧರ್ಮಗಳು, ಮತಗಳು, ಜಾತಿಗಳು ಸಹಿಷ್ಣುತೆಯಿಂದ ಪರಸ್ಪರರ ಸಂಸ್ಕೃತಿಯನ್ನು ಗೌರವಿಸುತ್ತಾ ಬದುಕುವುದೇ ಆಗಿದೆ. ಹಾಗಾಗಿ ಅಖಂಡ ಭಾರತದ ನಿರ್ಮಾಣದಿಂದ ಪ್ರಪಂಚದಲ್ಲಿಯೇ ಭಾರತೀಯ ಸಂಸ್ಕೃತಿ ಮೇಳೈಸಲಿದೆ ಎಂದು ನುಡಿದರು.

ಕಾರ್ಯಕ್ರಮದಲ್ಲಿ ಸಂದೇಶ್ ಪವಾರ್, ಟಿ.ಎಸ್. ಅರುಣ್, ಸುರೇಂದ್ರ, ಬಿ.ಸಿ.ಶಶಿಕಾಂತ್, ಅಂಬಾರಿ ಪ್ರಹ್ಲಾದರಾವ್, ಅನೂಜ್ ಸಾರಸ್ವತ್, ಶ್ರೀನಿವಾಸಪ್ರಸಾದ್, ಸುಚೇಂದ್ರ ಉಮೇಶ್, ಸಂತೋಷ್, ಕುಮಾರ್, ಮುರಳಿ ಭಾಗವಹಿಸಿದ್ದರು.

ವಿಶ್ವದಾದ್ಯಂತ 2 ಗಂಟೆಗಳ ಕಾಲ ಸ್ಥಗಿತವಾಗಿದ್ದ ವಾಟ್ಸಾಪ್ ಸೇವೆಗಳು ಪುನಾರಂಭ


ಬೆಂಗಳೂರು, ಅ.25– ವಿಶ್ವದಾದ್ಯಂತ ಸರ್ವರ್ ಸಮಸ್ಯೆಯಿಂದಾಗಿ 2 ಗಂಟೆಗಳ ಕಾಲ ಸ್ಥಗಿತಗೊಂಡಿದ್ದ ವಾಟ್ಸಾಪ್ ಸೇವೆಗಳು ಪುನಾರಂಭಗೊಂಡಿವೆ. ಭಾರತ ಸೇರಿದಂತೆ ಹಲವೆಡೆ ವಾಟ್ಸಾಪ್ ಸೇವೆಗಳು ಪುನಾರಂಭವಾಗಿವೆ ಎಂದು ಮೆಟಾ ಕಂಪನಿ ತಿಳಿಸಿದೆ. ಭಾರತದ ಹಲವೆಡೆ ವಾಟ್ಸಾಪ್ ಬಳಕೆದಾರರು ಸಂದೇಶ ರವಾನಿಸಲು ಹಾಗೂ ಸ್ವೀಕರಿಸಲು ಸಾಧ್ಯವಾಗದೆ ಪರದಾಡಿದ್ದರು.

ವಾಟ್ಸಾಪ್ ಮೊಬೈಲ್ ಅಪ್ಲಿಕೇಷನ್ ಮತ್ತು ವೆಬ್ ಅಪ್ಲಿಕೇಷನ್ ಎರಡೂ ಕಾರ್ಯಾಚರಣೆ ಸ್ಥಗಿತಗೊಂಡಿತ್ತು. ವಾಟ್ಸಾಪ್ ಆಡಿಯೊ ಮತ್ತು ವಿಡಿಯೊ ಕಾಲ್ ಸೇವೆಯೂ ಕಾರ್ಯ ನಿರ್ವಹಿಸುತ್ತಿರಲಿಲ್ಲ.

ವಾಟ್ಸಾಪ್ ತೆರೆಯಲು ಸಾಧ್ಯವಾಗುತ್ತಿದೆ. ಆದರೆ ಸಂದೇಶಗಳನ್ನು ಕಳುಹಿಸಲು ಮತ್ತು ಸ್ವೀಕರಿಸಲು ಸಾಧ್ಯವಾಗುತ್ತಿಲ್ಲ ಎಂದು ಹಲವು ಬಳಕೆದಾರರು ದೂರಿದ್ದರು. ಡೌನ್‌ಡಿಟೆಕ್ಟರ್ ಪ್ರಕಾರ ಶೇ 69ರಷ್ಟು ಬಳಕೆದಾರರು ಈ ಸಮಸ್ಯೆ ಎದುರಿಸಿದ್ದರು. ಶೇ 21ರಷ್ಟು ಬಳಕೆದಾರರಿಗೆ ಸರ್ವರ್ ಸಂಪರ್ಕ ಸಿಕ್ಕಿರಲಿಲ್ಲ. ಶೇ 9ರಷ್ಟು ಮಂದಿ ತಮ್ಮ ಸ್ಮಾರ್ಟ್‌ಫೋನ್ ಆಪ್‌ಗಳಲ್ಲಿ ಗುರುತಿಸಲಾಗದ ಸಮಸ್ಯೆಗಳನ್ನು ಎದುರಿಸುತ್ತಿದ್ದಾರೆ ಎಂದಿತ್ತು. ಟ್ವಿಟರ್ ಸೇರಿದಂತೆ ಇತರ ಸಾಮಾಜಿಕ ಜಾಲತಾಣಗಳಲ್ಲಿ ವಾಟ್ಸಾಪ್ ಡೌನ್ ಹ್ಯಾಶ್‌ಟ್ಯಾಗ್ ಟ್ರೆಂಡ್ ಆಗಿತ್ತು.

ನಿವೃತ್ತ ಎಸ್ಪಿ ಹನುಮಂತರಾಯಪ್ಪ ನಿಧನ

ಮೈಸೂರು, ಅ.25–ಮೈಸೂರು ನಗರ ಹಾಗೂ ಜಿಲ್ಲೆಯಲ್ಲಿ ಹದಿನೈದು ವರ್ಷಕ್ಕೂ ಹೆಚ್ಚು ಕಾಲ ಪೊಲೀಸ್ ಅಧಿಕಾರಿಯಾಗಿ ಸೇವೆ ಸಲ್ಲಿಸಿದ್ದ ನಿವೃತ್ತ ಎಸ್ಪಿ ಎ.ಎಸ್.ಹನುಮಂತರಾಯ(70) ಇಂದು ಬೆಂಗಳೂರಿನಲ್ಲಿ ನಿಧನರಾದರು.



1971ರಲ್ಲಿ ಸಬ್ ಇನ್ಸ್‌ಪೆಕ್ಟರ್ ಆಗಿ ಪೊಲೀಸ್ ಇಲಾಖೆಗೆ ಸೇರಿದ ಇವರು, ಮೈಸೂರಿನ ವಿದ್ಯಾರಣ್ಯಪುರಂ, ಕೆ.ಆರ್., ವಿವಿ ಪುರಂ, ಕೆ.ಆರ್.ಸಂಚಾರ ಠಾಣೆಯಲ್ಲಿ ಸೇವೆ ಸಲ್ಲಿಸಿದ ನಂತರ ಚಾಮರಾಜನಗರ ಡಿವೈಎಸ್‌ಪಿ ಆಗಿ ನಂತರ ಲೋಕಾಯುಕ್ತ ಎಸ್ಪಿ ಆಗಿ ಸೇವೆ ಸಲ್ಲಿಸಿ ನಿವೃತ್ತರಾದರು. ಮೃತರು ಪತ್ನಿ, ಪುತ್ರ, ಪುತ್ರಿ ಹಾಗೂ ಅಪಾರ ಬಂಧು ಬಳಗವನ್ನು ಅಗಲಿದ್ದಾರೆ. ಬುಧವಾರ ಬೆಳಗ್ಗೆ ಬೆಂಗಳೂರಿನ ಬನಶಂಕರಿ ಚಿತಾಗಾರದಲ್ಲಿ ಅಂತ್ಯಕ್ರಿಯೆ ನೆರವೇರಲಿದೆ ಎಂದು ಕುಟುಂಬದ ಮೂಲಗಳು ತಿಳಿಸಿವೆ.

ಎಂ.ಶ್ರೀಕಂಠಮೂರ್ತಿ



ಮೈಸೂರು, ಅ.25–ಮೈಸೂರಿನ ಗಾಂಧಿನಗರ ನಿವಾಸಿ ಎಂ.ಶ್ರೀಕಂಠಮೂರ್ತಿ (62) ಅವರು ಇಂದು ಬೆಳಗಿವ ಜಾವ ನಿಧನರಾದರು. ಮೃತರು ಪತ್ನಿ ಶ್ರೀಮತಿ ರುಕ್ಮಿಣಿ, ಮಕ್ಕಳಾದ ಕೆನರಾ ಬ್ಯಾಂಕ್ ಉದ್ಯೋಗಿ ಎಸ್. ಪವನ್ ಕುಮಾರ್, ಎಸ್.ಶಾಲಿನಿ, ಎಸ್. ಕಾವ್ಯ, ಸಹೋದರರಾದ ಎಂ.ಜಗದೀಶ್, ಎಂ.ಮಹೇಶ್, ಸಹೋದರಿ ಎಂ. ಶೈಲಜಾ ಮುರುಳೀಧರ ಹಾಗೂ ಅಪಾರ ಬಂಧು–ಬಳಗವನ್ನು ಅಗಲಿದ್ದಾರೆ. ಮೃತರ ಅಂತ್ಯಕ್ರಿಯೆಯು ಇಂದು ಗಾಂಧಿನಗರದ ಆದಿಜಾಂಬವ ರುದ್ರಭೂಮಿಯಲ್ಲಿ ನೆರವೇರಿಸಲಾಯಿತು ಎಂದು ಕುಟುಂಬದ ಮೂಲಗಳು ತಿಳಿಸಿವೆ.

ವಿಶ್ವ ಪೋಲೀಯೋ ನಿರ್ಮೂಲನಾ ಜಾಗೃತಿ ದಿನಾಚರಣೆ



ಮೈಸೂರು, ಅ.25(ಎಸ್‌ಪಿಎನ್)– ರೋಟರಿ ಕ್ಲಬ್ ಜಯಪ್ರಕಾಶ್ ನಗರದ ವತಿಯಿಂದ ನಾಚನಹಳ್ಳಿ ಪಾಳ್ಯದ ಪ್ರಾಥಮಿಕ ಆರೋಗ್ಯ ಕೇಂದ್ರದಲ್ಲಿ ವಿಶ್ವ ಪೋಲಿಯೊ ನಿರ್ಮೂಲನಾ ಜಾಗೃತಿ ದಿನವನ್ನು ಬುಧವಾರ ಆಚರಿಸಲಾಯಿತು.

ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿದ ಜೆ.ಪಿ.ನಗರ ರೋಟರಿ ಅಧ್ಯಕ್ಷ ಡಾ.ಮುಳ್ಳೂರು ನಂಜುಂಡಸ್ವಾಮಿ, ಪೋಲಿಯೋ ಮುಕ್ತ ಜಗತ್ತು ನಿರ್ಮಿಸುವುದು ರೋಟರಿ ಸಂಸ್ಥೆಯ ಮುಖ್ಯ ಗುರಿಯಾಗಿದೆ. ಪೋಲಿಯೋ ಮೊದಲ ಬಾರಿಗೆ ಅಮೆರಿಕ ಸಂಯುಕ್ತ ಸಂಸ್ಥಾನದಲ್ಲಿ ಕಾಣಿಸಿಕೊಂಡು ನಂತರ ಜಗತ್ತಿನಾದ್ಯಂತ ಹರಡಿತು. ಇದರಿಂದ ಸಾವಿರಾರು ಮಕ್ಕಳು ಸಾವನ್ನಪ್ಪಿದ್ದಾರೆ ಎಂದು ತಿಳಿಸಿದರು.

1985ರಲ್ಲಿ ಅಂತರರಾಷ್ಟ್ರೀಯ ರೋಟರಿ ಸೇವಾ ಸಂಸ್ಥೆಯು 120 ಬಿಲಿಯನ್ ಡಾಲರ್ ಹಣವನ್ನು ಈ ಯೋಜನೆಗೆ ಮೀಸಲಿಟ್ಟು, ಪೋಲಿಯೋ ನಿರ್ಮೂಲನೆಗೆ ಜಾಗತಿಕ ಆಂದೋಲನ ಆರಂಭಿಸಿ, ಇಂದಿಗೂ ಹೋರಾಡುತ್ತಿದೆ ಎಂದರು.

ಈ ವೇಳೆ ಜೆಪಿನಗರ ರೋಟರಿ ಸಂಸ್ಥೆಯ ಕಾರ್ಯದರ್ಶಿ ರೊ.ಅನಿಲ್ ಸಾಲ್ಡಾನ, ರೊ.ಚೆಲುವಯ್ಯ, ರೊ.ಡಾ.ವೆಂಕಟೇಶ್, ರೊ.ಡಾ.ಡಿ.ಎಂ.ನಾಗರಾಜು, ರೊ. ಸೇತುರಾಂ, ಆಸ್ಪತ್ರೆಯ ವೈದ್ಯರು, ಸಿಬ್ಬಂದಿ, ಸಾರ್ವಜನಿಕರು ಸೇರಿದಂತೆ ಇನ್ನಿತರರು ಹಾಜರಿದ್ದರು.

ಗಾಳಿಬೀಡುನಲ್ಲಿ ಆಫ್ರಿಕನ್ ಹಂದಿ ಜ್ವರ

- 1 ಕಿ.ಮೀ ರೋಗ ಪೀಡಿತ ವಲಯ
- 10 ಕಿ.ಮೀ ವ್ಯಾಪ್ತಿ ಜಾಗೃತ ವಲಯ
- ಜಿಲ್ಲಾಧಿಕಾರಿ ಘೋಷಣೆ

ಮಡಿಕೇರಿ, ಅ.25– ಕೊಡಗು ಜಿಲ್ಲೆಯಲ್ಲಿ ಇದೇ ಪ್ರಥಮ ಬಾರಿಗೆ ಮಡಿಕೇರಿ ತಾಲೂಕಿನ ಗಾಳಿಬೀಡು ಗ್ರಾಮದಲ್ಲಿ 'ಆಫ್ರಿಕನ್ ಹಂದಿ ಜ್ವರ' ಪತ್ತೆಯಾಗಿದ್ದು ಆತಂಕ ಮೂಡಿಸಿದೆ. ಈ ಪ್ರದೇಶದ 1 ಕಿ.ಮೀ. ವ್ಯಾಪ್ತಿಯನ್ನು ರೋಗ ಪೀಡಿತ ವಲಯ ಹಾಗೂ 10 ಕಿ.ಮೀ. ವಲಯವನ್ನು ಜಾಗೃತ ವಲಯವನ್ನಾಗಿ ಜಿಲ್ಲಾಧಿಕಾರಿಗಳು ಘೋಷಿಸಿದ್ದಾರೆ.

ಗಾಳಿಬೀಡು ಗ್ರಾಮದ ಗಣೇಶ್ ಬಿ.ಪಿ. ಎಂಬವರ ಹಂದಿ ಸಾಕಾಣಿಕೆ ಕೇಂದ್ರದಲ್ಲಿನ ಹಂದಿಗಳಲ್ಲಿ ಹಂದಿ ಜ್ವರದ ಲಕ್ಷಣಗಳು ಪತ್ತೆಯಾಗಿದೆ. ಇದು ಜಿಲ್ಲೆಯ ಇತರೆಡೆಗಳಿಗೂ ಹರಡದಂತೆ ಮುಂಜಾಗ್ರತಾ ಕ್ರಮವಾಗಿ ಅಗತ್ಯ ಕ್ರಮಗಳನ್ನು ಕೈಗೊಳ್ಳಲು ಸೂಚಿಸಲಾಗಿದೆ. ರೋಗ ಪಸರಿಸದಂತೆ ಮುಂಜಾಗ್ರತಾ ಕ್ರಮವಾಗಿ ರೋಗ ಪೀಡಿತ ಹಂದಿ ಫಾರಂನಿಂದ 1 ಕಿ.ಮೀ. ವ್ಯಾಪ್ತಿಯಲ್ಲಿ ಬರುವ ಎಲ್ಲಾ ಹಂದಿ ಸಾಕಾಣೆ ಕೇಂದ್ರಗಳನ್ನು ಮುಚ್ಚುವಂತೆ ಮತ್ತು ಅಲ್ಲಿರುವ ಎಲ್ಲಾ ಹಂದಿಗಳನ್ನು ನಿಯಮಾನುಸಾರ ವಧೆ ಮಾಡಿ ವೈಜ್ಞಾನಿಕ ರೀತಿಯಲ್ಲಿ ವಿಲೇವಾರಿ ಮಾಡಬೇಕು. ಸೋಂಕು ಕಂಡು ಬಂದ ಹಂದಿ ಫಾರಂನ್ನು ಶುಚಿಗೊಳಿಸಿ, ಸೋಂಕು ನಿವಾರಕ ದ್ರಾವಣವನ್ನು ಸಿಂಪಡಿಸಬೇಕು. ಈ ಪ್ರದೇಶದ ಬಳಿ ಯಾವುದೇ ವಾಹನ ಮತ್ತು ಜನರ ಸಂಚಾರವನ್ನು ನಿರ್ಬಂಧಿಸಬೇಕೆಂದು ಜಿಲ್ಲಾ ದಂಡಾಧಿಕಾರಿಗಳು ತಮ್ಮ ಆದೇಶದಲ್ಲಿ ಸ್ಪಷ್ಟ ನಿರ್ದೇಶನವನ್ನು ನೀಡಿದ್ದಾರೆ.

ಮಾರಾಟಕ್ಕೆ ನಿರ್ಬಂಧ: ರೋಗ ಪೀಡಿತ ಪ್ರದೇಶದಿಂದ ತಂದ ಜೀವಂತ ಹಂದಿಗಳ ಮಾರಾಟ ಹಾಗೂ ಅವುಗಳ ಮಾಂಸದ ಮಾರಾಟವನ್ನು ಕೂಡ ನಿರ್ಬಂಧಿಸಲಾಗಿದೆ. ರೋಗ ಪೀಡಿತ ಹಂದಿ ಫಾರಂನಿಂದ 10 ಕಿ.ಮೀ. ಒಳಗಿನ ಎಲ್ಲಾ ಹಂದಿ ಸಾಕಾಣೆದಾರರು ಹೊಸದಾಗಿ ಹಂದಿಗಳನ್ನು ಬೇರೆ ಕಡೆಯಿಂದ ಕೊಂಡು ತರಬಾರದು, ಹಂದಿಗಳ ಮತ್ತು ಹಂದಿ ಸಾಕಾಣಿಕೆ ಕೇಂದ್ರಗಳಲ್ಲಿನ ಕೆಲಸಗಾರರ ಸಂಚಾರವನ್ನು ನಿಯಂತ್ರಿಸಬೇಕು, ಹಂದಿಗಳಿಗೆ ಹೋಟೆಲ್ ಹಾಸ್ಟೆಲ್‌ಗಳಲ್ಲಿನ ಮಿಕ್ಕಿದ ಆಹಾರವನ್ನು ಸಂಗ್ರಹಿಸಿ ತಿನ್ನಿಸುವವರು ಕಡ್ಡಾಯವಾಗಿ ಅಂತಹ ಆಹಾರ ಪದಾರ್ಥವನ್ನು ಕನಿಷ್ಟ 20 ನಿಮಿಷಗಳ ಕಾಲ ಬೇಯಿಸಿ ಕೊಡಬೇಕೆಂದು ಆದೇಶದಲ್ಲಿ ಸೂಚಿಸಲಾಗಿದೆ.

ಹಂದಿ ಮಾಂಸದ ಹೋಟೆಲ್ ಮತ್ತು ಹಂದಿ ಮಾಂಸ ಮಾರಾಟ ಮಾಡುವ ಅಂಗಡಿಯಲ್ಲಿನ ಉಳಿಕೆ ಪದಾರ್ಥಗಳನ್ನು ಯಾವುದೇ ಕಾರಣಕ್ಕೂ ಹಂದಿಗಳಿಗೆ ನೀಡಬಾರದು. ಸಂದರ್ಶಕರಿಗೆ ಹಂದಿ ಫಾರಂ ಒಳಗೆ ಪ್ರವೇಶಕ್ಕೆ ಅವಕಾಶ ನೀಡಬಾರದು, ಹಂದಿ ಆಹಾರ, ಇತರೆ ಸಾಮಗ್ರಿಗಳನ್ನು ಫಾರಂಗೆ ಸಾಗಿಸುವ ವಾಹನಗಳನ್ನು ಸೋಂಕು ನಿವಾರಕ ದ್ರಾವಣದಿಂದ ಶುಚಿಗೊಳಿಸಬೇಕು ಮತ್ತು ಒಂದು ಹಂದಿ ಫಾರಂನ ಕೆಲಸಗಾರರು ಬೇರೆ ಫಾರಂಗೆ ಹೋಗಬಾರದೆಂದು ಸ್ಪಷ್ಟ ನಿರ್ದೇಶನವನ್ನು ನೀಡಲಾಗಿದೆ.

ಪ್ರಾದೇಶಿಕ ಸಾರಿಗೆ ಅಧಿಕಾರಿಗಳು, ಅರಣ್ಯ ಇಲಾಖೆ, ಪೊಲೀಸ್ ಇಲಾಖೆ, ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆಯ ಜಿಲ್ಲಾ ಮಟ್ಟದ ಅಧಿಕಾರಿಗಳು ನಿಗಾವಹಿಸಿ ಪಶುಸಂಗೋಪನಾ ಇಲಾಖೆಯ ಅಧಿಕಾರಿಗಳಿಗೆ ಸಹಕಾರ ನೀಡಿ ಆಫ್ರಿಕನ್ ಹಂದಿ ಜ್ವರದ ಹತೋಟಿಗೆ ಕ್ರಮ ಕೈಗೊಳ್ಳುವಂತೆ ಜಿಲ್ಲಾ ದಂಡಾಧಿಕಾರಿಗಳು ಆದೇಶದಲ್ಲಿ ಸ್ಪಷ್ಟವಾಗಿ ಸೂಚಿಸಿದ್ದಾರೆ.

ಚೆನ್ನಯ್ಯನಕೋಟೆ ಗ್ರಾಮ ಪಂಚಾಯಿತಿ ಚುನಾವಣೆ

17 ಸ್ಥಾನಕ್ಕೆ 49 ಮಂದಿ ಕಣಕ್ಕೆ

ಮತದಾರರನ್ನು ಸೆಳೆಯಲು ರಾಜಕೀಯ ಪಕ್ಷಗಳ ಕಸರತ್ತು



ಸಿದ್ದಾಪುರ, ಅ.25– ಗ್ರಾಮದ ಅಭಿವೃದ್ಧಿಗಾಗಿ ರಾಜಕೀಯ ರಹಿತವಾಗಿ ನಡೆಯಬೇಕಿದ್ದ ಸ್ಥಳೀಯ ಸಂಸ್ಥೆಗಳ ಚುನಾವಣೆಗೆ ರಾಜಕೀಯ ಪಕ್ಷಗಳು ಬೆಂಬಲ ಸೂಚಿಸುವುದರೊಂದಿಗೆ ತಮ್ಮದೇಯಾದ ಅಭ್ಯರ್ಥಿಗಳನ್ನು ಕಣಕ್ಕಿಳಿಸಿ ಅಭಿವೃದ್ಧಿಯ ಮಂತ್ರದೊಂದಿಗೆ ಮತದಾರರನ್ನು ಸೆಳೆಯುವ ಕಸರತ್ತು ವಿರಾಜಪೇಟೆ ತಾಲೂಕಿನ ಚೆನ್ನಯ್ಯನ ಕೋಟೆ ಗ್ರಾಮ ಪಂಚಾಯಿತಿ ವ್ಯಾಪ್ತಿಯಲ್ಲಿ ನಡೆಯುತ್ತಿದೆ.

ವಿರಾಜಪೇಟೆ ತಾಲೂಕಿನ ಚೆನ್ನಯ್ಯನ ಕೋಟೆ ಗ್ರಾಮ ಪಂಚಾಯಿತಿಗೆ ಚೆನ್ನಯ್ಯನ ಕೋಟೆ 1 ಮತ್ತು 2, ತಣ್ಣೀರ ಹಳ್ಳ 3, ಕೋಟೆ ಪೈಸಾರಿ 4, ಗೂಡ್ಲೂರು 5, ಚೆನ್ನಂಗಿ 6 ವಾರ್ಡ್‌ಗಳಿದ್ದು 17 ಸ್ಥಾನಗಳಿಗೆ 49 ಮಂದಿ ಸ್ಪರ್ಧಾ ಕಣದಲ್ಲಿದ್ದಾರೆ. ಕಾಂಗ್ರೆಸ್ ಮತ್ತು ಬಿಜೆಪಿ ಪಕ್ಷಗಳು ಬೆಂಬಲ ಸೂಚಿಸಿ ಹದಿನೇಳು ಸ್ಥಾನಗಳಿಗೂ ಅಭ್ಯರ್ಥಿ ಗಳನ್ನು ಕಣಕ್ಕಿಳಿಸಿದರೆ. ಮತ್ತೊಂದು ಪಕ್ಷ ಹನ್ನೊಂದು ಮಂದಿಯನ್ನು ಕಣಕ್ಕಿಳಿಸಿದೆ ಎನ್ನಲಾಗಿದೆ ಇದರೊಂದಿಗೆ 4ಮಂದಿ ಪಕ್ಷೇತರರಾಗಿ ಸ್ಪರ್ಧೆಗಿಳಿದಿದ್ದು, ತೀವ್ರ ಪೈಪೋಟಿ ಯೊಂದಿಗೆ ಮತದಾರರನ್ನು ಸೆಳೆಯುವ ಕಾರ್ಯತಂತ್ರ ರೂಪಿಸಿದ್ದಾರೆ.

ಸವಾಲಿನ ಸಮಸ್ಯೆಗಳು

- ಕಾಡು ಪ್ರಾಣಿಗಳೇ ಹೆಚ್ಚಾಗಿರುವ ಗ್ರಾಮೀಣ ಪ್ರದೇಶ
- ಕಾಡು ಪ್ರಾಣಿಗಳ ಹಾವಳಿ ತಡೆಗೆ ಶಾಶ್ವತ ಕ್ರಮ ಇಲ್ಲ.
- ಪಂಚಾಯಿತಿ ವ್ಯಾಪ್ತಿಯಲ್ಲಿ ಆದಿವಾಸಿ ಗ್ರಾಮಗಳು ಹೆಚ್ಚಾಗಿದ್ದು ಮೂಲ ಸೌಕರ್ಯ ವಂಚಿತರಾಗಿ ಬದುಕು ಸಾಗಿಸುತ್ತಿದ್ದಾರೆ.
- ಕುಡಿಯುವ ನೀರು, ರಸ್ತೆ, ಚರಂಡಿ, ವಿದ್ಯುತ್, ಮನೆ, ನಿವೇಶನ ಸೇರಿದಂತೆ ಹಲವು ಸಮಸ್ಯೆಗಳು ಗ್ರಾಮೀಣ ಭಾಗದಲ್ಲಿದೆ.
- ಹಸಿ ತ್ಯಾಜ್ಯ ವಿಲೇವಾರಿ ಸಮಸ್ಯೆ ಬಗೆಹರಿದಿಲ್ಲ.

ಚುನಾವಣೆ ಘೋಷಿಸಿ ಅ 12 ರಿಂದ 17ವರಗೆ ನಾಮ ಪತ್ರ ಸಲ್ಲಿಕೆಗೆ ಅವಕಾಶ ಕಲ್ಪಿಸಲಾಗಿತ್ತು, ಅ 19ರಂದು ನಾಮಪತ್ರ ಪರಿಶೀಲನೆ, ಅ 21ರಂದು ನಾಮಪತ್ರ ಹಿಂತೆಗೆದುಕೊಳ್ಳಲು ಅವಕಾಶ ನೀಡಲಾಗಿತ್ತು.

6 ಬೂತ್‌ಗಳಲ್ಲೂ ಅ 28ರಂದು ಬೆಳಿಗ್ಗೆ 7 ಗಂಟೆಯಿಂದ ಸಂಜೆ 5ವರೆಗೆ ಮತದಾನ ಮಾಡಲು ಅವಕಾಶ ಕಲ್ಪಿಸಲಾಗಿದೆ. ಅ 31 ರಂದು ಮತ ಎಣಿಕೆ ಕಾರ್ಯ ನಡೆಯಲಿದೆ. ಚುನಾವಣಾ ಅಧಿಕಾರಿಯಾಗಿ ರಾಜೇಶ್, ಸಹಾಯಕ ಚುನಾವಣಾಧಿಕಾರಿಯಾಗಿ ಕೀರ್ತಿ ಕುಮಾರ್ ಕಾರ್ಯನಿರ್ವಹಿಸುತ್ತಿದ್ದಾರೆ. ಒಟ್ಟು17 ಸ್ಥಾನಗಳಿಗೆ 54 ಅಭ್ಯರ್ಥಿಗಳು ನಾಮಪತ್ರ ಸಲ್ಲಿಸಿದ್ದರು.

ಇದರಲ್ಲಿ 4 ಅಭ್ಯರ್ಥಿಗಳು ನಾಮಪತ್ರ ಹಿಂತೆಗೆದುಕೊಂಡರು. ಇದೀಗ 49 ವಿದ್ಯಾರ್ಥಿಗಳು ಸ್ಪರ್ಧಾ ಕಣದಲ್ಲಿದ್ದು ಎಲ್ಲಾ ವಾರ್ಡ್ ಗಳಲ್ಲೂ ಬಿರುಸಿನ ಪ್ರಚಾರ ಕೈಗೊಂಡಿದ್ದಾರೆ. ಚೆನ್ನಯ್ಯನ ಕೋಟೆ ಪಂಚಾಯಿತಿ ವ್ಯಾಪ್ತಿಯಲ್ಲಿ ಒಟ್ಟು 6946 ಜನಸಂಖ್ಯೆ ಇದ್ದು 4700 ಮತದಾರರಿದ್ದಾರೆ.

ಅ.28, ಕೋಟಿ ಕಂಠ ಗಾಯನಕ್ಕೆ ಸಕಲ ಸಿದ್ಧತೆ

ಮಡಿಕೇರಿ, ಅ.25– 67ನೇ ಕನ್ನಡ ರಾಜ್ಯೋತ್ಸವ ಪ್ರಯುಕ್ತ 'ಕೋಟಿ ಕಂಠ ಗಾಯನಕ್ಕೆ' ಜಿಲ್ಲಾಡಳಿತ ವತಿಯಿಂದ ವಿವಿಧ ಇಲಾಖೆಗಳು ಹಾಗೂ ಸಂಘ ಸಂಸ್ಥೆಗಳ ಸಹಕಾರದಿಂದ ಸಕಲ ಸಿದ್ಧತೆ ಮಾಡಿಕೊಳ್ಳಲಾಗಿದೆ.

ಇದೇ ಅಕ್ಟೋಬರ್ 28 ರಂದು ಬೆಳಗ್ಗೆ 11 ಗಂಟೆಗೆ ಜಿಲ್ಲಾ ಕೇಂದ್ರ ಮಡಿಕೇರಿಯ ರಾಜಸೀಟಿನಲ್ಲಿ ಪ್ರಧಾನ ಕಾರ್ಯಕ್ರಮ ನಡೆಯಲಿದ್ದು, ವಿವಿಧ ಶಾಲಾ–ಕಾಲೇಜುಗಳ ವಿದ್ಯಾರ್ಥಿಗಳು, ಸಂಘ ಸಂಸ್ಥೆಗಳ ಪ್ರತಿನಿಧಿಗಳು, ಅಧಿಕಾರಿಗಳು ಇತರರು ಕೋಟಿ ಕಂಠ ಗಾಯನ ಕಾರ್ಯಕ್ರಮದಲ್ಲಿ ಪಾಲ್ಗೊಳ್ಳಲಿದ್ದಾರೆ.

'ನನ್ನ ನಾಡು–ನನ್ನ ಹಾಡು' ಹೆಸರಿನಲ್ಲಿ ಜಿಲ್ಲೆಯಾದ್ಯಂತ ಕನ್ನಡ ರಾಜ್ಯೋತ್ಸವ ಪ್ರಯುಕ್ತ ಸರ್ಕಾರದ ನಿರ್ದೇಶನದಂತೆ ಜಿಲ್ಲಾಡಳಿತ ವತಿಯಿಂದ ಅತ್ಯಂತ ವಿಶಿಷ್ಟವಾಗಿ ಆಚರಿಸಲು ಉದ್ದೇಶಿಸಲಾಗಿದೆ. ಈಗಾಗಲೇ ನೋಂದಣಿ ಕಾರ್ಯವು ನಡೆದಿದ್ದು, ಸಾರ್ವಜನಿಕರು ಕೋಟಿ ಕಂಠ ಗೀತ ಗಾಯನಕ್ಕೆ ಆನ್‌ಲೈನ್ https://kannadasiri.karnataka.gov.in/kkg/public/ ನಲ್ಲಿ ನೋಂದಣಿ ಮಾಡಬಹುದಾಗಿದೆ.

ಸಾರ್ವಜನಿಕ ಶಿಕ್ಷಣ ಇಲಾಖೆಯಿಂದ 20 ಸಾವಿರ, ಪದವಿ ಪೂರ್ವ ಶಿಕ್ಷಣ ಇಲಾಖೆಯಿಂದ 10 ಸಾವಿರ, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ ವ್ಯಾಪ್ತಿಯಲ್ಲಿ 1800, ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆ ವ್ಯಾಪ್ತಿಯಲ್ಲಿ 1,270 ವಿದ್ಯಾರ್ಥಿಗಳು ಹಾಗೂ ನೌಕರರು ವಸತಿ ಶಿಕ್ಷಣ ಸಂಸ್ಥೆಗಳಲ್ಲಿ 1,050 ಕ್ಕೂ ಹೆಚ್ಚು ಮಂದಿ ಹೆಸರು ನೋಂದಾಯಿಸಿದ್ದಾರೆ.

ಕನ್ನಡ ಸಾಹಿತ್ಯ ಪರಿಷತ್ ಜಿಲ್ಲಾ ಘಟಕ ವತಿಯಿಂದ 1,500 ಕ್ಕೂ ಹೆಚ್ಚು ಮಂದಿ, ವೈದ್ಯಕೀಯ ಶಿಕ್ಷಣ ಇಲಾಖೆ ವ್ಯಾಪ್ತಿಯಲ್ಲಿ 700, ಕೊಡಗು ಜಿಲ್ಲಾ ಕನ್ನಡ ಜಾಗೃತಿ ಸಮಿತಿ ವತಿಯಿಂದ 300 ಕ್ಕೂ ಹೆಚ್ಚು ಮಂದಿ, ಹಾಗೆಯೇ ವಸತಿ ಶಾಲೆಗಳು, ವಿದ್ಯಾರ್ಥಿ ನಿಲಯಗಳು, ಕ್ರೀಡಾ ವಸತಿ ಶಾಲೆಗಳು, ಎಂಜಿನಿಯರಿಂಗ್ ಕಾಲೇಜುಗಳಲ್ಲಿ, ಸಂಘ ಸಂಸ್ಥೆಗಳಲ್ಲಿ ನೋಂದಣಿ ಕಾರ್ಯ ಮುಂದುವರೆದಿದೆ.

ಹಾಗೆಯೇ ಜಿಲ್ಲೆಯಲ್ಲಿ ಸುಮಾರು 20 ರಿಂದ 25 ಕಡೆಗಳಲ್ಲಿ ಹಾಗೂ ಶಾಲಾ–ಕಾಲೇಜುಗಳಲ್ಲಿ ಕೋಟಿ ಕಂಠ ಗಾಯನ ಕಾರ್ಯಕ್ರಮ ಜರುಗಲಿದೆ. ಕೋಟಿ ಕಂಠ ಗಾಯನ ಕಾರ್ಯಕ್ರಮವು ಆಯಾಯ ಶಿಕ್ಷಣ ಸಂಸ್ಥೆಗಳಲ್ಲಿ ಹಾಗೂ ಇತರ ಪ್ರಮುಖ ಸ್ಥಳಗಳಲ್ಲಿ 'ಕೋಟಿ ಕಂಠ ಗಾಯನ' ಕಾರ್ಯಕ್ರಮ ಜರುಗಲಿದೆ.

ರಾಷ್ಟ್ರಕವಿ ಕುವೆಂಪು ಅವರು ಬರೆದಿರುವ ನಾಡಗೀತೆಯಾದ 'ಜಯ ಭಾರತ ಜನನಿಯ ತನುಜಾತೆ', ಹುಯಿಲಗೋಳ ನಾರಾಯಣರಾಯರು ರಚಿಸಿರುವ 'ಉದಯವಾಗಲಿ ನಮ್ಮ ಚೆಲುವ ಕನ್ನಡನಾಡು', ಕುವೆಂಪು ಅವರು ಬರೆದಿರುವ 'ಬಾರಿಸು ಕನ್ನಡ ಡಿಂಡಿಮವ', ಡಾ.ಡಿ.ಎಸ್.ಕರ್ಕಿ ಅವರು ಬರೆದಿರುವ 'ಹಚ್ಚೇವು ಕನ್ನಡದ ದೀಪ', ನಾಡೋಜ ಡಾ.ಚೆನ್ನವೀರ ಕಣವಿ ಅವರು ಬರೆದಿರುವ 'ವಿಶ್ವ ವಿನೂತನ ವಿದ್ಯಾಚೇತನ', ಡಾ.ಹಂಸಲೇಖ ಅವರು ಬರೆದಿರುವ 'ಹುಟ್ಟಿದರೆ ಕನ್ನಡ ನಾಡಲ್ಲಿ ಹುಟ್ಟಬೇಕು' ಈ ಹಾಡುಗಳನ್ನು ಕೋಟಿ ಕಂಠ ಗಾಯನ ಕಾರ್ಯಕ್ರಮದಲ್ಲಿ ಹಾಡಲಾಗುತ್ತದೆ. ತಾಲ್ಲೂಕು ಮಟ್ಟದಲ್ಲಿ ತಾಲೂಕು ಆಡಳಿತ ಹಾಗೂ ವಿವಿಧ ಸಂಘ ಸಂಸ್ಥೆಗಳ ನೇತೃತ್ವದಲ್ಲಿ 'ಕೋಟಿ ಕಂಠ ಗಾಯನ' ಕಾರ್ಯಕ್ರಮ ಜರುಗಲಿದೆ.

ಸೋಮವಾರಪೇಟೆ ಪಟ್ಟಣದ ಖಾಸಗಿ ಬಸ್ ನಿಲ್ದಾಣದಲ್ಲಿ ತಾಲ್ಲೂಕು ಆಡಳಿತ ವತಿಯಿಂದ ಕೋಟಿ ಕಂಠ ಗಾಯನ ಕಾರ್ಯಕ್ರಮ ನಡೆಯಲಿದೆ.

ಅರ್ಜಿ ಸಲ್ಲಿಸಲು ಕಾಲಾವಕಾಶ

ಮಡಿಕೇರಿ, ಅ.25– ಕರ್ನಾಟಕ ಮರಾಠ ಸಮುದಾಯಗಳ ಅಭಿವೃದ್ಧಿ ನಿಗಮದಿಂದ 2022–23 ನೇ ಸಾಲಿಗೆ ಅರಿವು ಶೈಕ್ಷಣಿಕ ಸಾಲ ಯೋಜನೆ ಮತ್ತು ರಾಜಶ್ರೀ ಶಾಹುಮಹಾರಾಜ ವಿದೇಶಿ ವ್ಯಾಸಂಗ ಯೋಜನೆಯಲ್ಲಿ ಈಗಾಗಲೇ ಅರ್ಜಿ ಆಹ್ವಾನಿಸಲಾಗಿದೆ.

ಅರ್ಜಿ ಸಲ್ಲಿಸಲು ಡಿ.9 ರವರೆಗೆ ಅವಧಿ ವಿಸ್ತರಿಸಲಾಗಿದೆ ಎಂದು ಕರ್ನಾಟಕ ಮರಾಠ ಸಮುದಾಯಗಳ ಅಭಿವೃದ್ಧಿ ನಿಗಮದ ಜಿಲ್ಲಾ ವ್ಯವಸ್ಥಾಪಕರು ತಿಳಿಸಿದ್ದಾರೆ.

ವೃದ್ಧಾಶ್ರಮದಲ್ಲಿ ನಾಪೋಕ್ಲು ಶೌರ್ಯ ಘಟಕದಿಂದ ದೀಪಾವಳಿ ಆಚರಣೆ



ನಾಪೋಕ್ಲು, ಅ.25– ಮಡಿಕೇರಿಯ ಹಿರಿಯ ಜೀವಗಳ ಆಶ್ರಯ ತಾಣ ತನಲ್ ವೃದ್ಧಾಶ್ರಮದಲ್ಲಿ ನಾಪೋಕ್ಲು ಶೌರ್ಯ ಘಟಕದ ಸಂಯೋಜಕರಾದ ದಿವ್ಯ ಬಾಳೆಯಡರವರ ನೇತೃತ್ವದಲ್ಲಿ ಶೌರ್ಯ ಸದಸ್ಯರು ದೀಪಾವಳಿಯನ್ನು ಅರ್ಥಪೂರ್ಣವಾಗಿ ಆಚರಿಸಿದರು. ಈ ಸಂದರ್ಭ ವೃದ್ಧಾಶ್ರಮದಲ್ಲಿ ವಿವಿಧ ಸ್ವಚ್ಛತಾ ಕಾರ್ಯಗಳನ್ನು ಮಾಡಿ ಶುಚಿ ರುಚಿಯಾದ ವಿವಿಧ ಖಾದ್ಯಗಳನ್ನು ತಯಾರಿಸಿ ಹಿರಿಯ ಜೀವಗಳಿಗೆ ಉಣಬಡಿಸಿ ಕುಶಲೋಪಚಾರ ವಿಚಾರಿಸಿ ಆಶೀರ್ವಾದದೊಂದಿಗೆ ಅರ್ಥಪೂರ್ಣವಾಗಿ ಆಚರಿಸಿ ಸೇವೆಯ ಮುನ್ನುಡಿಗೆ ಹೊಸ ಭಾಷ್ಯವನ್ನೇ ಬರೆದಿದ್ದಾರೆ.

ಈ ಸಂದರ್ಭ ಶೌರ್ಯ ಸದಸ್ಯರು ಉಮಾಲಕ್ಷ್ಮಿ, ಆಶಾ, ಚಂದ್ರಕಲಾ, ಗೀತಾ, ಸ್ವಪ್ನ, ಅಜಿತಾ, ಸತ್ಯಬಾಮ, ಸರಸ್ವತಿ,ಸೀನ ಮಾಧವನ್, ಶಂಕರ್, ದಿಲೀಶ್, ಅಜಿತ್,ಸೋಮಣ್ಣ, ಯೋಗೀಶ್, ಪ್ರವೀಣ್ ಹಾಜರಿದ್ದರು.

ಹುಲಿ ದಾಳಿಗೆ ಹಸು ಕಳೆದುಕೊಂಡವರಿಗೆ ಪರಿಹಾರ ವಿತರಣೆ

ಮಡಿಕೇರಿ, ಅ.25– ಹುಲಿ ದಾಳಿಯಿಂದ ಹಸು ಕಳೆದುಕೊಂಡ ನಿಟ್ಟೂರು ಕಾರ್ಮಾಡು ಗ್ರಾಮದ ಸಂತ್ರಸ್ತ ರಾಜು ಅವರಿಗೆ ಶಾಸಕ ಕೆ.ಜಿ.ಬೋಪಯ್ಯ ಅರಣ್ಯ ಇಲಾಖೆ ವತಿಯಿಂದ ರೂ.16 ಸಾವಿರ ಪರಿಹಾರದ ಚೆಕ್ ವಿತರಿಸಿದರು. ಇದೇ ಸಂದರ್ಭ ಮರಿಯಮ್ಮ ಚಾರಿಟೇಬಲ್ ಟ್ರಸ್ಟ್ ವತಿಯಿಂದ ಸಂಸ್ಥೆಯ ಪರವಾಗಿ ನಿರ್ದೇಶಕರಾದ ಕೊಡಂದೇರ ಸುಬ್ಬಯ್ಯ 3 ಸಾವಿರ ರೂ. ಚೆಕ್ ವಿತರಣೆ ಮಾಡಿದರು.

ನಿಟ್ಟೂರು ಗ್ರಾ.ಪಂ ಅಧ್ಯಕ್ಷ ಕಾಟಿಮಾಡ ಶರೀನ್ ಮುತ್ತಣ್ಣ, ಸದಸ್ಯರುಗಳಾದ ಚಕ್ಕೇರ ಸೂರ್ಯ ಅಯ್ಯಪ್ಪ ಪಡಿಞರಂಡ ಕವಿತಾ ಪ್ರಭು, ಭಾರತೀಯ ಜನತಾ ಪಕ್ಷದ ವಿರಾಜಪೇಟೆ ಮಂಡಲ ಅಧ್ಯಕ್ಷ ನೆಲ್ಲೀರ ಚಲನ್ ಕುಮಾರ್, ಜಿಲ್ಲಾ ಬಿಜೆಪಿ ಕಾರ್ಯದರ್ಶಿ ಚೆಪ್ಪುಡಿರ ಮಾಚಯ್ಯ, ಅರಣ್ಯ ಇಲಾಖೆ ಕಲ್ಲಳ ವಲಯ ಸಂರಕ್ಷಣಾಧಿಕಾರಿಗಳಾದ ಯೋಗೀಶ್, ಮುಜಾಪರ್ ಫಕಾಲಿ ಮತ್ತಿತ್ತರರು ಹಾಜರಿದ್ದರು.

ಶ್ರೀ ಚಾಮುಂಡೇಶ್ವರಿ ವಾರ್ಷಿಕ ಉತ್ಸವ



ಸಿದ್ದಾಪುರ, ಅ.25– ಅರೆಕಾಡು ಗ್ರಾಮ ಸಮೀಪವಿರುವ ಶ್ರೀ ಚಾಮುಂಡೇಶ್ವರಿ (ಐದ್ರೋಡಮ್ಮ) ದೇವಿಯ 14 ನೇ ವರ್ಷದ ವಾರ್ಷಿಕ ಉತ್ಸವವು ಶ್ರದ್ಧಾ ಭಕ್ತಿಯಿಂದ ನೆರವೇರಿತು. ದೀಪಾವಳಿ, ಅಮಾವಾಸ್ಯೆ ಅಂಗವಾಗಿ ವಿವಿಧ ಧಾರ್ಮಿಕ ಪೂಜಾ ವಿಧಿ ವಿಧಾನಗಳು ನಡೆದವು. ಜಿಲ್ಲೆಯ ನಾನಾ ಭಾಗಗಳಿಂದ ಆಗಮಿಸಿದ ಅಪಾರ ಸಂಖ್ಯೆಯ ಭಕ್ತರು ಹರಕೆಗಳನ್ನು ಹೊತ್ತುದೇವಾಲಯಕ್ಕೆ ಆಗಮಿಸಿ ಇಷ್ಟಾರ್ಥಗಳನ್ನು ನೆರವೇರಿಸಿ ಅನ್ನಸಂತರ್ಪಣೆಕಾರ್ಯದಲ್ಲಿ ಪಾಲ್ಗೊಂಡರು. ದೇವಾಲಯ ಸಮಿತಿಯ ಅಧ್ಯಕ್ಷ ರಮೇಶ್ ಸೇರಿದಂತೆ ಆಡಳಿತ ಮಂಡಳಿಯ ಸದಸ್ಯರು, ಪ್ರಮುಖರು ಪಾಲ್ಗೊಂಡಿದ್ದರು.

ಮಾದಪ್ಪನ ಸನ್ನಿಧಿಯಲ್ಲಿ ಸಂಭ್ರಮದ ಹಾಲರವಿ ಉತ್ಸವ

• ಸಹಸ್ರಾರು ಭಕ್ತರಿಂದ ದೇವರ ದರ್ಶನ • ಸಾಂಪ್ರದಾಯಿಕವಾಗಿ ಜರುಗಿದ ಪೂಜಾ ಕೈಂಕರ್ಯ



ಹನೂರು, ಅ.25– ತಾಲೂಕಿನ ಪ್ರಸಿದ್ಧ ಯಾತ್ರಾ ಕ್ಷೇತ್ರ ಶ್ರೀ ಮಲೆ ಮಹದೇಶ್ವರ ಬೆಟ್ಟದ ದೇಗುಲದಲ್ಲಿ ಮಂಗಳವಾರ ಅಮಾವಾಸ್ಯೆ ಪೂಜೆ ಹಾಗೂ ಹಾಲರವಿ ಉತ್ಸವ ವಿಜೃಂಭಣೆಯಿಂದ ಜರುಗಿತು.

ದೇವಸ್ಥಾನ ಮುಂಭಾಗ, ರಂಗ ಮಂದಿರ ಮುಂತಾದೆಡೆ ಬಿಡಾರ ಹೂಡಿದ್ದ ಭಕ್ತರು ಮಾದಪ್ಪನನ್ನು ಸ್ಮರಿಸಿದರು. ಸೋಮವಾರ ಎಣ್ಣೆಮಜ್ಜನ ಸೇವೆ, ಹುಲಿವಾಹನ ಉತ್ಸವ, ಬಸವವಾಹನ, ರುದ್ರಾಕ್ಷಿ ಮಂಟಪೋತ್ಸವ ಮತ್ತಿತರ ಧಾರ್ಮಿಕ ಕಾರ್ಯಕ್ರಮಗಳು ನಡೆದವು. ರಾತ್ರಿ ಇಡೀ ಸರತಿಯಲ್ಲಿ ನಿಂತ ಭಕ್ತರು ಮಾದಪ್ಪನ ದರ್ಶನ ಪಡೆದರು.

ಹಾಲರವಿ ಉತ್ಸವ: ದೀಪಾವಳಿ ಜಾತ್ರಾ ಮಹೋತ್ಸವದ ವಿಶೇಷವಾಗಿ ಬುಧವಾರ ಹಾಲರವಿ ಉತ್ಸವ ನಡೆಯಿತು. ಉತ್ಸವದಲ್ಲಿ ಬೇಡಗಂಪಣರ 101 ಹೆಣ್ಣು ಮಕ್ಕಳು ಸಾಂಪ್ರದಾಯಿಕ ಉಡುಗೆಗಳನ್ನು ಧರಿಸಿ ವಿವಿಧ ವಾದ್ಯ ಮೇಳಗಳೊಂದಿಗೆ ದಟ್ಟ ಕಾನನದ ನಡುವೆ ಹರಿಯುವ ಹಾಲು ಹಳ್ಳದಿಂದ 101 ಕುಂಭಗಳನ್ನು ಹೊತ್ತು ತಂದು ದೇವಸ್ಥಾನಕ್ಕೆ ಸಮರ್ಪಿಸಿದರು.

ಈ ವೇಳೆ ಸಾಲೂರು ಬೃಹನ್ಮಠದ ಪೀಠಾಧಿಪತಿ ಶ್ರೀಶಾಂತಮಲ್ಲಿಕಾರ್ಜುನ ಸ್ವಾಮೀಜಿ ಸಾನಿಧ್ಯದಲ್ಲಿ ಮಹಾಮಂಗಳಾರತಿ ಬೆಳಗಿ, ನೈವೇದ್ಯ–ದೀವಟಿಗೆ ಸೇವೆ ನೆರವೇರಿಸಲಾಯಿತು. ಬಳಿಕ ಸ್ವಾಮಿಯ ಉತ್ಸವಮೂರ್ತಿಯನ್ನು ವಿವಿಧ ಪುಷ್ಪಗಳಿಂದ ಸಿಂಗರಿಸಿದ್ದ ಪಲ್ಲಕ್ಕಿಯಲ್ಲಿರಿಸಿ ದೇಗುಲದ ಸುತ್ತಾ ಪ್ರದಕ್ಷಿಣೆ ಹಾಕಲಾಯಿತು.

ಜಾತ್ರಾ ಮಹೋತ್ಸವ ಹಿನ್ನೆಲೆಯಲ್ಲಿ ಚಾಮರಾಜನಗರ, ಮೈಸೂರು, ರಾಮನಗರ, ಮಂಡ್ಯ, ಬೆಂಗಳೂರು ನಗರ ಮಾತು ಗ್ರಾಮಾಂತರ ಜಿಲ್ಲೆಗಳು ಸೇರಿದಂತೆ ನೆರೆಯ ತಮಿಳುನಾಡಿನಿಂದಲೂ ಸಾಹಸ್ರಾರು ಭಕ್ತರು ಬೆಟ್ಟಕ್ಕೆ ವಾಹನ ಹಾಗೂ ಕಾಲ್ನಡಿಗೆಯಲ್ಲಿ ಬಂದು ಬೀಡು ಬಿಟ್ಟಿದ್ದಾರೆ.

ಹರಕೆ ಹೊತ್ತ ಭಕ್ತರು ಮುಡಿಸೇವೆ, ರಜ ಒಡೆಯುವ ಸೇವೆ, ಪಂಜಿನಸೇವೆ, ಉರುಳು ಸೇವೆ, ಚಿನ್ನದ ತೇರಿನ ಸೇವೆ, ಹುಲಿವಾಹನ ಸೇವೆ, ರುದ್ರಾಕ್ಷಿವಾಹನ ಸೇವೆ ಹಾಗೂ ಬಸವ ವಾಹನ ಸೇವೆಗಳ ಜೊತೆಗೆ ಕೆಲವರು ಪರ(ಪರ್ವ)ಸೇವೆಯನ್ನು ನೆರವೇರಿಸಿ ಅನ್ನ ಸಂತರ್ಪಣೆ ಸೇವೆ ನೆರವೇರಿಸಿ, ಮಾದಪ್ಪನ ಕೃಪೆಗೆ ಪಾತ್ರರಾದರು. ದೀಪಾವಳಿ ಜಾತ್ರೆ ಹಿನ್ನೆಲೆಯಲ್ಲಿ ದೇವ ಸ್ಥಾನ ಹಾಗೂ ಗೋಪುರ ಸೇರಿದಂತೆ ಸುತ್ತಮುತ್ತಲ ಪ್ರದೇಶಕ್ಕೆ ವಿಶೇಷ ದೀಪಾಲಂಕಾರ ಮಾಡಲಾಗಿದೆ.

ಸಚಿವ ಸೋಮಣ್ಣ ವಿರುದ್ಧ ಮುಂದುವರೆದ ಆಕ್ರೋಶ

ರೈತ ಸಂಘ, ದಸಂಸ ಕಾರ್ಯಕರ್ತರಿಂದ ರಸ್ತೆತಡೆ





ಚಾಮರಾಜನಗರ, ಅ.25– ಗುಂಡ್ಲುಪೇಟೆ ತಾಲೂಕಿನ ಹಂಗಳ ಗ್ರಾಮದಲ್ಲಿ ನಿವೇಶನ ಹಕ್ಕು ಪತ್ರ ವಿತರಣೆ ಕಾರ್ಯಕ್ರಮದಲ್ಲಿ ನಡೆದ ಮಹಿಳೆಗೆ ಕಪಾಳಮೋಕ್ಷ ಪ್ರಕರಣ ಸಂಬಂಧ ಜಿಲ್ಲಾ ಉಸ್ತುವಾರಿ ಸಚಿವ ವಿ.ಸೋಮಣ್ಣ ವಿರುದ್ಧ ಆಕ್ರೋಶ ಮುಂದುವರೆದಿದ್ದು, ಮಂಗಳವಾರ ಸಹ ಸಚಿವ ರಾಜೀನಾಮೆಗೆ ಆಗ್ರಹಿಸಿ ಕರ್ನಾಟಕ ದಲಿತ ಸಂಘರ್ಷ ಸಮಿತಿ (ಅಂಬೇಡ್ಕರ್ ವಾದ) ತಾಲೂಕಿನ ಸಂತೇಮರಹಳ್ಳಿಯಲ್ಲಿ ಹಾಗೂ ಯಳಂದೂರಿನಲ್ಲಿ ರೈತ ಸಂಘದಿಂದ ರಸ್ತೆ ತಡೆ ನಡೆಸಲಾಯಿತು.

ಸಂತೇಮರಹಳ್ಳಿ ಇಂಡಿಯನ್ ಪೆಟ್ರೋಲ್ ಬಂಕ್ ಮುಂಭಾಗದಲ್ಲಿ ಸಮಿತಿಯ ಮೈಸೂರು ವಿಭಾಗೀಯ ಸಂಚಾಲಕ ದೊಡ್ಡಿಂದುವಾಡಿ ಸಿದ್ದರಾಜು, ನಗರಸಭಾ ಸದಸ್ಯ ಆರ್.ಪಿ.ನಂಜುಂಡಸ್ವಾಮಿ ನೇತೃತ್ವದಲ್ಲಿ ಸಮಾವೇಶಗೊಂಡ ಪ್ರತಿಭಟನಾನಿರತರು, ಅಲ್ಲಿಂದ ಮೆರವಣಿಗೆ ಹೊರಟು ರಾಷ್ಟ್ರೀಯ ಹೆದ್ದಾರಿ–209ರ ಮೂಲಕ ಸಂತೇಮರಹಳ್ಳಿ ವೃತ್ತದಲ್ಲಿ ಕೆಲಕಾಲ ಪ್ರತಿಭಟಿಸಿದರಲ್ಲದೆ, ಸಚಿವ ವಿಸೋಮಣ್ಣ ವಿರುದ್ಧ ಘೋಷಣೆ ಕೂಗಿದರು.

ಈ ವೇಳೆ ರಾಜ್ಯ ಉಪ್ಪಾರ ಎಸ್‌ಟಿ ಹೋರಾಟ ಸಮಿತಿ ಅಧ್ಯಕ್ಷ ಬಾಗಳಿ ರೇವಣ್ಣ, ಸಮಿತಿಯ ಜಿಲ್ಲಾ ಸಂಘಟನಾ ಸಂಚಾಲಕರಾದ ನಾಗಣ್ಣ ಕೆವೀರ, ಮಹದೇವಸ್ವಾಮಿ, ರವಿಕುಮಾರ್, ಶಿವಣ್ಣ, ಮುರುಗೇಶ್, ರಾಚಪ್ಪ, ಆಮ್ ಆದ್ಮಿ ಪಕ್ಷದ ಮುಖಂಡರಾದ ನಾಗೇಂದ್ರ, ಹರೀಶ್, ಕೆಂಪಣ್ಣ, ಲಿಂಗರಾಜು, ಜಾನ್, ಕರುನಾಡ ವಿಜಯಸೇನೆ ಮಂಜುನಾಯಕ, ಜಗದೀಶ್, ಸಿದ್ದರಾಜು, ನಂಜುಂಡಸ್ವಾಮಿ, ಮೋಹನ್ ಕುಮಾರ್ ಭಾಗವಹಿಸಿದ್ದರು.

ಯಳಂದೂರು ವರದಿ: ಸಚಿವ ವಿ.ಸೋಮಣ್ಣ ರೈತರೊಂದಿಗೆ ಸಭೆ ನಡೆಸಿ ಅವರ ಸಮಸ್ಯೆಗಳಿಗೆ ಪರಿಹಾರ ಹುಡುಕಿಕೊಡುವಲ್ಲಿ ವಿಫಲವಾಗಿದ್ದಾರೆ. ಹಾಗೂ ಹಂಗಳ ಗ್ರಾಮದಲ್ಲಿ ಮಹಿಳೆಗೆ ಕಪಾಳಮೋಕ್ಷ ಮಾಡಿದ್ದಾರೆ ಎಂದು ಆರೋಪಿ ಪಟ್ಟಣದಲ್ಲಿ ಮಂಗಳವಾರ ರೈತ ಸಂಘದ ಸದಸ್ಯರು ರಸ್ತೆ ತಡೆ ನಡೆಸಿದರು.

ಸಂಘದ ಜಿಲ್ಲಾಧ್ಯಕ್ಷ ಹೊನ್ನೂರು ಪ್ರಕಾಶ್ ಮಾತನಾಡಿ, ಕೂಡಲೇ ಮುಖ್ಯಮಂತ್ರಿಗಳು ಜಿಲ್ಲಾ ಕೇಂದ್ರದಲ್ಲಿ ಸೋಮಣ್ಣ ಹೊರತುಪಡಿಸಿ ಜಿಲ್ಲೆಗೆ ಅರಣ್ಯ, ವಿದ್ಯುತ್, ಕೃಷಿ, ನೀರಾವರಿ ಸಚಿವರ ಜೊತೆ ಸಭೆಯನ್ನು ನಡೆಸಿ ರೈತರ ಸಮಸ್ಯೆಗಳನ್ನು ಬಗೆಹರಿಸಬೇಕು. ಸೋಮಣ್ಣರನ್ನು ಸಚಿವ ಸ್ಥಾನದಿಂದ ಮುಖ್ಯಮಂತ್ರಿಗಳು ಉಚ್ಚಾಟಿಸಬೇಕು. ಜಿಲ್ಲೆಗೆ ಹೊಸ ಉಸ್ತುವಾರಿ ಸಚಿವರನ್ನು ನೇಮಿಸಬೇಕು ಎಂದು ಆಗ್ರಹಿಸಿದರು.

ಈ ವೇಳೆ ಸಂಘದ ತಾಲೂಕು ಅಧ್ಯಕ್ಷ ಸಿದ್ದಲಿಂಗಸ್ವಾಮಿ, ಮೆಳ್ಳಹಳ್ಳಿ ಚಂದ್ರಶೇಖರ್ ಮೂರ್ತಿ, ಅಂಬಳೆ ಶಿವಕುಮಾರ್, ಗೌಡಹಳ್ಳಿ ಸೋಮಣ್ಣ, ವೀರಣ್ಣ, ಆಲ್ಕೆರೆ ಅಗ್ರಹಾರ ನಾಗರಾಜು, ರಂಗಸ್ವಾಮಿ, ಪುಟ್ಟರಾಜು, ನಂಜುಂಡಸ್ವಾಮಿ, ಸಂತೋಷ ಸೇರಿದಂತೆ ಅನೇಕರಿದ್ದರು.

ಕಾಲು ಜಾರಿ ಕೆರೆಗೆ ಬಿದ್ದು ವ್ಯಕ್ತಿ ಸಾವು



ಗುಂಡ್ಲುಪೇಟೆ, ಅ.25–ಕಾಲು ಜಾರಿ ಕೆರೆಗೆ ಬಿದ್ದು ವ್ಯಕ್ತಿಯೋರ್ವ ಸಾವನ್ನಪ್ಪಿರುವ ಘಟನೆ ಪಟ್ಟಣದ ಹೊರ ವಲಯದ ವಿಜಯಪುರ ಅಮ್ಮಾನಿ ಕೆರೆಯಲ್ಲಿ ಮಂಗಳವಾರ ನಡೆದಿದೆ.

ಪಟ್ಟಣದ ಕೆ.ಎಸ್.ನಾಗರತ್ನಮ್ಮ ಬಡಾವಣೆಯ ನಿವಾಸಿ ರಾಜು (35) ಮೃತಪಟ್ಟವರು. ಇವರು ವಿಜಯಪುರ ಅಮ್ಮಾನಿ ಕೆರೆಯಲ್ಲಿ ಸ್ನಾನ ಮಾಡಲು ಹೋಗಿ ಕೆರೆಯ ತಟದ ಚಾನಲ್ ಬಳಿ ಬಟ್ಟೆ ತೊಳೆಯುತ್ತಿದ್ದರು. ಈ ವೇಳೆ ಕಾಲು ಕೆರೆಗೆ ಬಿದ್ದು ಮೃತಪಟ್ಟಿದ್ದಾರೆ. ಮೃತ ವ್ಯಕ್ತಿ ಬಾರ್ ಬೆಂಡಿಂಗ್ ಕೆಲಸ ಮಾಡಿ ಕೊಂಡಿದ್ದರು ಎಂದು ತಿಳಿದು ಬಂದಿದೆ ಪೊಲೀಸರು ಸ್ಥಳಕ್ಕೆ ತೆರಳಿ ಪರಿಶೀಲಿಸಿ ಮೃತ ದೇಹವನ್ನು ಪಟ್ಟಣದ ಸಾರ್ವಜನಿಕರ ಆಸ್ಪತ್ರೆಗೆ ರವಾನಿಸಿದರು. ಮರಣೋತ್ತರ ಪರೀಕ್ಷೆ ಬಳಿಕ ವಾರಸುದಾರರಿಗೆ ಹಸ್ತಾಂತರಿಸಲಾಯಿತು. ಪಟ್ಟಣ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.



ಅಖಿಲ ಭಾರತ ಕಾಂಗ್ರೆಸ್ ಸಮಿತಿ ನೂತನ ಅಧ್ಯಕ್ಷರಾಗಿ ಆಯ್ಕೆಯಾಗಿರುವ ಎಂ.ಮಲ್ಲಿಕಾರ್ಜುನ ಖರ್ಗೆ ಅವರನ್ನು ಅವರ ದೆಹಲಿ ನಿವಾಸದಲ್ಲಿ ಮಂಗಳವಾರ ರಾತ್ರಿ ಕೆಪಿಸಿಸಿ ಕಾರ್ಯಾಧ್ಯಕ್ಷ ಆರ್.ಧ್ರುವನಾರಾಯಣ್ ಭೇಟಿಯಾಗಿ ಅಭಿನಂದಿಸಿದರು.

ಕೆಂಚಯ್ಯನದೊಡ್ಡಿಯಲ್ಲಿ ಚಿರತೆ ಸೆರೆ

ಹನೂರು, ಅ.25–ಕೆಂಚಯ್ಯನ ದೊಡ್ಡಿ ಗ್ರಾಮದ ಸುತ್ತಮುತ್ತ ಜನ–ಜಾನುವಾರುಗಳಿಗೆ ಭೀತಿ ಹುಟ್ಟಿದ್ದ ಚಿರತೆಯನ್ನು ಅರಣ್ಯ ಇಲಾಖೆಯವರು ಕೊನೆಗೂ ಸೆರೆ ಹಿಡಿಯಾಗಿದೆ.

ಚಿರತೆ ಕೆಂಚಯ್ಯನ ದೊಡ್ಡಿ ಗ್ರಾಮದ ಅರಣ್ಯ ಪ್ರದೇಶದ ಬಳಿ ಅರಣ್ಯ ಇಲಾಖೆಯವರು ಇಡಲಾಗಿದ್ದ ಬೋನಿಗೆ ಚಿರತೆ ಬಿದ್ದಿದೆ ಹಲವಾರು ಜಾನುವಾರುಗಳು ಅಲ್ಲದೆ ವ್ಯಕ್ತಿಯೋರ್ವನನ್ನು ಸಹ ಕೊಂದು, ಈ ಭಾಗದ ಜನರ ಆತಂಕಕ್ಕೆ ಕಾರಣವಾಗಿತ್ತು ಹಲವಾರು ದಿನಗಳಿಂದ ಅರಣ್ಯ ಇಲಾಖೆಯ ಸಿಬ್ಬಂದಿ ಹಾಗೂ ಅಧಿಕಾರಿಗಳಿಗೂ ತಲೆನೋವಾಗಿ ಪರಿಣಮಿಸಿತ್ತು ಸದ್ಯ ಚಿರತೆಯ ಭಯದಿಂದಲೇ ಕಾಲಕಳೆಯುತ್ತಿದ್ದ ಈ ಭಾಗದ ಜನತೆಯ ಆತಂಕ ದೂರವಾದಂತಾಗಿದೆ.

ಉಡ ಬೇಟೆಗಾರನ ಬಂಧನ



ಹನೂರು, ಅ.25–ಅಳಿವಿನಂಚಿನಲ್ಲಿರುವ ವನ್ಯಜೀವಿ ಉಡ ಬೇಟೆಯಾಡುತ್ತಿದ್ದ ವ್ಯಕ್ತಿಯೋರ್ವನನ್ನು ಬಂಧಿಸಿರುವ ಘಟನೆ ಕಾವೇರಿ ವನ್ಯಜೀವಿ ವಿಭಾಗದ ಕೌದಳ್ಳಿ ವಲಯದಲ್ಲಿ ನಡೆದಿದೆ. ದಂಟಳ್ಳಿ ಗ್ರಾಮದ ಶಿವಮಾದೇವ(45) ಬಂಧಿತ ಆರೋಪಿ. ಕೌದಳ್ಳಿ ವನ್ಯಜೀವಿ ವಲಯದ ದಂಟಳ್ಳಿ ಗಸ್ತಿನ ಕುಂಬಾರ ಕೆಂಪನ ಬೋರೆ ಅರಣ್ಯ ಪ್ರದೇಶದಲ್ಲಿ ಆರೋಪಿಯನ್ನು ಬಂಧಿಸಿ ಕಾನೂನು ಕ್ರಮ ಕೈಗೊಳ್ಳಲಾಗಿದೆ. ಕಾರ್ಯಾಚರಣೆಯಲ್ಲಿ ಡಿಸಿಎಫ್ ನಂದೀಶ್, ಎಸಿಎಫ್ ಎನ್.ಎಂ. ಅಂಕರಾಜು ಮಾರ್ಗದರ್ಶನದಲ್ಲಿ ಆರ್‌ಎಫ್‌ಓ ಲೋಕೇಶ್‌ಚೌಹಣ್, ಅರಣ್ಯ ರಕ್ಷಕ ರವಿ, ಕ್ಷೇಮಾಭಿವೃದ್ಧಿ ನೌಕರರ ಹುಚ್ಚಯ್ಯ, ಹೊರಗುತ್ತಿಗೆ ನೌಕರ ಮಾದೇವ ಪಾಲ್ಗೊಂಡಿದ್ದರು.

ಚಾ.ನಗರದಲ್ಲೂ ಸೂರ್ಯಗ್ರಹಣ ಗೋಚರ



ಚಾಮರಾಜನಗರ, ಅ.25–ಮಂಗಳವಾರ ಸಂಭವಿಸಿದ ಪಾರ್ಶ್ವ ಸೂರ್ಯಗ್ರಹಣ ಜಿಲ್ಲೆಯಲ್ಲೂ ಗೋಚರಿಸಿತು. ಗ್ರಹಣ ಹಿನ್ನೆಲೆ ಮಧ್ಯಾಹ್ನದ ಬಳಿಕ ಬಹುತೇಕ ದೇವಾಲಯಗಳು ಮುಚ್ಚಿದ್ದವು. ನಗರದ ಚಾಮರಾಜೇಶ್ವರ ದೇಗುಲ ಬೆಳಗ್ಗೆ 11.30ಕ್ಕೆ ಮುಚ್ಚಲಾಗಿತ್ತು. ಗ್ರಹಣ ಮುಗಿದ ಬಳಿಕ ಸಂಜೆ 6.45ಕ್ಕೆ ಮತ್ತೆ ದೇವಾಲಯವನ್ನು ತೆರೆಯಲಾಯಿತು. ಮಹದೇಶ್ವರಬೆಟ್ಟದಲ್ಲಿ ಗ್ರಹಣದ ಸಂದರ್ಭದಲ್ಲೂ ದರ್ಶನಕ್ಕೆ ಅವಕಾಶ ಇದೆ ಎಂದು ಕ್ಷೇತ್ರ ಅಭಿವೃದ್ಧಿ ಪ್ರಾಧಿಕಾರ ಈ ಮೊದಲು ಹೇಳಿತ್ತು. ಆದರೆ ಮಂಗಳವಾರ ಸಂಜೆ 5ರಿಂದ 7 ಗಂಟೆಯವರೆಗೆ ದರ್ಶನಕ್ಕೆ ಅವಕಾಶ ಇಲ್ಲ ಎಂದು ಧ್ವನಿವರ್ಧಕದಲ್ಲಿ ಘೋಷಿಸಲಾಯಿತು. ಜಿಲ್ಲೆಯಲ್ಲಿ ಸಂಜೆ 5.20ರಿಂದ ಸೂರ್ಯಾಸ್ತದವರೆಗೂ ಗ್ರಹಣ ಗೋಚರಿಸಿತು.

ಚಿಕ್ಕಾಟಿ ಗ್ರಾಪಂ ನಿರ್ಲಕ್ಷ್ಯ: ಕೆರೆ ಏರಿ ರಸ್ತೆಯ ಹಳ್ಳ ಮುಚ್ಚಿದ ತೊಂಡವಾಡಿ ಗ್ರಾಮಸ್ಥರು



ಗುಂಡ್ಲುಪೇಟೆ, ಅ.25–ಇತ್ತೀಚೆಗೆ ಬಿದ್ದ ಮಳೆಗೆ ಕೆರೆ ಏರಿ ಸಡಿಲಗೊಂಡು ರಸ್ತೆಯಲ್ಲಿ ಹಳ್ಳ ಬಿದ್ದಿದ್ದರೂ ಅಧಿಕಾರಿಗಳು ಗಮನಿಸದ ಹಿನ್ನೆಲೆಯಲ್ಲಿ ಗ್ರಾಮಸ್ಥರೇ ಕಲ್ಲು–ಮಣ್ಣುಗಳನ್ನು ಹಾಕಿ ಮುಚ್ಚಿದ್ದಾರೆ. ತಾಲೂಕಿನ ತೊಂಡವಾಡಿ ಗ್ರಾಮದಲ್ಲಿ ಮಳೆಯಿಂದ ಕೆರೆ ಏರಿ ರಸ್ತೆ ಹಳ್ಳಬಿದ್ದು ದುಸ್ಥಿತಿ ತಲುಪಿದ್ದು, ಜನ–ಜಾನುವಾರು ಸಂಚಾರಕ್ಕೆ ತೊಂದರೆಯಾಗಿತ್ತು. ಹಿಗಾಗಿ ಏರಿರಸ್ತೆ ದುರಸ್ತಿಪಡಿಸುವಂತೆ ಚಿಕ್ಕಾಟಿ ಗ್ರಾಪಂ ಪಿಡಿಓ ವಿಶ್ವನಾಥ್ ಅವರ ಗಮನ ಸೆಳೆದರೂ ಪ್ರಯೋಜನವಾಗಲಿಲ್ಲ. ಇದರಿಂದ ಬೇಸತ್ತ ತೊಂಡವಾಡಿ ಗ್ರಾಮಸ್ಥರು ತಾವೇ ಕಲ್ಲು–ಮಣ್ಣು ಹಾಕಿ ತಾತ್ಕಾಲಿಕವಾಗಿ ಹಳ್ಳಗಳನ್ನು ಮುಚ್ಚಿ, ನಿರ್ಲಕ್ಷ್ಯವಹಿಸಿರುವ ಗ್ರಾಪಂ ವಿರುದ್ಧ ಅಸಮಾಧಾನ ವ್ಯಕ್ತಪಡಿಸಿದ್ದಾರೆ.

ಬೇಗೂರಲ್ಲಿ ಅ.30ಕ್ಕೆ ವಾಲ್ಮೀಕಿ ಜಯಂತ್ಯೋತ್ಸವ

ಸಮುದಾಯದ ಮುಖಂಡರ ಸಭೆಯಲ್ಲಿ ನಿರ್ಧಾರ

ಬೇಗೂರು, ಅ.25– ಗುಂಡ್ಲುಪೇಟೆ ತಾಲೂಕಿನ ಬೇಗೂರಿನಲ್ಲಿ ಹೋಬಳಿ ಮಟ್ಟದ ಶ್ರೀ ಮಹರ್ಷಿ ವಾಲ್ಮೀಕಿ ಜಯಂತ್ಯೋತ್ಸವವನ್ನು ಅ.30ರಂದು ಅದ್ಧೂರಿಯಾಗಿ ಆಚರಿಸಲು ತೀರ್ಮಾನಿಸಲಾಯಿತು.

ಗ್ರಾಮದ ಬಂಡಿಗೆರೆ ಮಹದೇಶ್ವರಸ್ವಾಮಿ ದೇವಸ್ಥಾನದ ಆವರಣದಲ್ಲಿ ನೆರೆದಿದ್ದ ಬೇಗೂರು ಭಾಗದ ಹದಿನಾರು ಗ್ರಾಮಗಳ ನಾಯಕ ಸಮುದಾಯದ ಯಜಮಾನರು ಹಾಗೂ ಮುಖಂಡರ ಸಮ್ಮುಖದಲ್ಲಿ ನಡೆದ ವಾಲ್ಮೀಕಿ ಜಯಂತಿ ಆಚರಣೆ ಪೂರ್ವಭಾವಿ ಸಭೆ ಚರ್ಚೆ ನಡೆಸಿ ಈ ನಿರ್ಧಾರ ಕೈಗೊಳ್ಳಲಾಯಿತು. ಈ ವೇಳೆ ನಾಯಕ ಸಮುದಾಯದ ಕೆಲ ಗ್ರಾಮದ ಯಜಮಾನರು ಮಾತನಾಡಿ, ಮಹರ್ಷಿ ವಾಲ್ಮೀಕಿ ಜಯಂತಿಯನ್ನು ಅದ್ಧೂರಿಯಿಂದ ಆಚರಿಸಬೇಕು. ಸಾಂಸ್ಕೃತಿಕ ಕಲಾ ತಂಡಗಳ ಸಮೇತ ಮೆರವಣಿಗೆ ನಡೆಸಬೇಕು.

ಈ ವೇಳೆ ಮಕ್ಕಳು ಕಳಸ ಹೊತ್ತು ಸಾಗುವ ಮೂಲಕ ಮೆರವಣಿಗೆಗೆ ಮೆರಗು ಹೆಚ್ಚಿಸುವಂತೆ ಮಾಡಬೇಕು. ಈ ಹಿನ್ನೆಲೆಯಲ್ಲಿ ಇಂದಿನಿಂದಲೇ ಸಿದ್ಧತೆ ಆರಂಭಿಸಬೇಕು. ಇದಕ್ಕೆ 16 ಗ್ರಾಮದ ಸಮುದಾಯದ ಮುಖಂಡರು ಸಹಕರಿಸಬೇಕು ಎಂದು ಕೋರಿದರು.



ಕೊಳ್ಳೇಗಾಲ ನಗರಸಭೆಯ 7 ವಾರ್ಡ್‌ಗಳಿಗೆ ಅ.30ರಂದು ನಡೆಯುತ್ತಿರುವ ಉಪಚುನಾವಣೆಯಲ್ಲಿ ಸ್ಪರ್ಧಿಸಿರುವ ಬಿಜೆಪಿ ಅಭ್ಯರ್ಥಿಗಳ ಪರ ಶಾಸಕ ಎನ್.ಮಹೇಶ್ ಮಂಗಳವಾರ ಬಿರುಸಿನ ಪ್ರಚಾರ ನಡೆಸಿದರು. ಈ ವೇಳೆ ಅಭ್ಯರ್ಥಿಗಳು ಹಾಗೂ ಪಕ್ಷದ ಕಾರ್ಯಕರ್ತರು, ಬೆಂಬಲಿಗರಿದ್ದರು.

ಡಿ.ಕೆ.ನಾಗರಾಜಪ್ಪ ನಿಧನ



ಚಾಮರಾಜನಗರ, ಅ.25– ತಾಲೂಕಿನ ದೇಮಹಳ್ಳಿ ಗ್ರಾಮದ ನಿವಾಸಿ ಡಿ.ಕೆ.ನಾಗರಾಜಪ್ಪ (68) ಅನಾರೋಗ್ಯದಿಂದ ಮೈಸೂರಿನ ಜಯದೇವ ಆಸ್ಪತ್ರೆಯಲ್ಲಿ ಮಂಗಳವಾರ ನಿಧನರಾದರು.

ಮೃತರು ಪತ್ನಿ, ಇಬ್ಬರು ಪುತ್ರರು ಸೇರಿದಂತೆ ಅಪಾರ ಬಂಧು–ಬಳಗ ಅಗಲಿದ್ದಾರೆ. ಅಂತ್ಯಕ್ರಿಯೆ ಬುಧವಾರ ಮಧ್ಯಾಹ್ನ 2 ಗಂಟೆಗೆ ಸ್ವಗ್ರಾಮದ ಅವರ ತೋಟದಲ್ಲಿ ನೆರವೇರಲಿದೆ ಎಂದು ಕುಟುಂಬ ಮೂಲಗಳು ತಿಳಿಸಿವೆ.

ಮೂರನೇ ಪುಟದಿಂದ

ಶೇ.9ರಷ್ಟು ಗ್ರಹಣ ಗೋಚರ


ದೇವಾಲಯಗಳಲ್ಲಿ ಮಧ್ಯಾಹ್ನ 1 ಗಂಟೆವರೆಗೂ ಭಕ್ತರಿಗೆ ದರ್ಶನ ಅವಕಾಶ ನೀಡಿ ನಂತರ ನಿರ್ಬಂಧಿಸಲಾಯಿತು.

ಶೇ.9ರಷ್ಟು ಗೋಚರ: ಮೈಸೂರಿನಲ್ಲಿ ಸಂಜೆ 5.13ರಿಂದ 6 ಗಂಟೆವರೆಗೆ ಪಾರ್ಶ್ವ ಸೂರ್ಯಗ್ರಹಣ ಗೋಚರಿಸಿತು. ಸಂಜೆ 6.27ಕ್ಕೆ ಮೋಕ್ಷಕಾಲ ಇತ್ತಾದರೂ 6 ಗಂಟೆಗೆ ಸೂರ್ಯಾಸ್ತಮಾನವಾದ ಕಾರಣ ಗ್ರಹಣದ ಅಂತಿಮ ಚಿತ್ರಣ ಕಾಣಿಸಲಿಲ್ಲ. ಒಟ್ಟಾರೆ ಮೈಸೂರಿನಲ್ಲಿ ಶೇ.9.5ರಷ್ಟು ಪಾರ್ಶ್ವ ಸೂರ್ಯಗ್ರಹಣ ಗೋಚರಿಸಿತ್ತು. ಕೆಲವರು ವೈಜ್ಞಾನಿಕ ಕ್ರಮಗಳ ಮೂಲಕ ಗ್ರಹಣ ಕಣ್ತುಂಬಿಕೊಂಡರಲ್ಲದೆ ಕ್ಯಾಮರಾಗಳಲ್ಲಿ ಸೂರ್ಯನ ಚಿತ್ರಣವನ್ನು ಸೆರೆಹಿಡಿದರು. ಆದರೆ ಬಹುತೇಕ ಮಂದಿ ಗ್ರಹಣವನ್ನು ನೋಡುವುದಕ್ಕೆ ಹಿಂದೇಟು ಹಾಕಿದರು. ಸಂಜೆ 6ಕ್ಕೆ ಸೂರ್ಯಾಸ್ತದ ಬಳಿಕ ತಾಯಿ ಚಾಮುಂಡೇಶ್ವರಿ ದೇವಾಲಯವನ್ನು ಶುದ್ಧೀಕರಣ ಮಾಡಿ, ಮೂಲ ದೇವರು ಹಾಗೂ ಉತ್ಸವ ಮೂರ್ತಿಗೆ ಅಭಿಷೇಕ ಮಾಡಿ, ಮಹಾಮಂಗಳಾರತಿ ನೆರವೇರಿಸಲಾಯಿತು. ನಗರದಲ್ಲಿರುವ ಎಲ್ಲಾ ದೇವಾಲಯಗಳಲ್ಲೂ ಈ ಕೈಂಕರ್ಯ ನೆರವೇರಿಸಲಾಯಿತು. ಹಾಗೆಯೇ ಸಾರ್ವಜನಿಕರು ತಮ್ಮ ಮನೆಯನ್ನೆಲ್ಲಾ ಶುದ್ಧ ಮಾಡಿ, ದೇವರಿಗೆ ಪೂಜೆ ಸಲ್ಲಿಸಿ ತಾಜಾ ಆಹಾರ ಸಿದ್ಧಪಡಿಸಿಕೊಂಡು ಸೇವಿಸಿದರು.

ಪ್ರವಾಸಿಗರೂ ವಿರಳ: ಮೈಸೂರಿನ ಪ್ರವಾಸಿ ತಾಣಗಳಲ್ಲೂ ಜನಸಂದಣಿ ಇರಲಿಲ್ಲ. ಸಾಲು ಸಾಲು ರಜೆ ಹಿನ್ನೆಲೆಯಲ್ಲಿ ಮೃಗಾಲಯದಲ್ಲಿ ಮಂಗಳವಾರದ ರಜೆ ರದ್ದು ಮಾಡಿ ವೀಕ್ಷಣೆಗೆ ಅವಕಾಶ ಕಲ್ಪಿಸಲಾಗಿತ್ತು. ಆದರೆ ಮೃಗಾಲಯ, ಅರಮನೆ ಇನ್ನಿತರ ಪ್ರವಾಸಿ ತಾಣಗಳಿಗೆ ಹೆಚ್ಚು ಪ್ರವಾಸಿಗರು ಬಂದಿರಲಿಲ್ಲ. ಇನ್ನು ಪ್ರಯಾಣಿಕರ ಕೊರತೆಯಿಂದಾಗಿ ಬಸ್ ಸಂಚಾರವೂ ಕಡಿಮೆಯಾಗಿತ್ತು. ಮೈಸೂರಿನಿಂದ ಬೆಂಗಳೂರು, ಹಾಸನ, ಮಡಿಕೇರಿ, ಮಂಗಳೂರು, ಮಹದೇಶ್ವರಬೆಟ್ಟ ಸೇರಿದಂತೆ ಬಹುತೇಕ ಎಲ್ಲಾ ಮಾರ್ಗದ ಬಸ್‌ಗಳನ್ನೂ ಪ್ರಯಾಣಿಕರು ಕಡಿಮೆಯಿದ್ದರು. ನಗರ ಬಸ್ ನಿಲ್ದಾಣವೂ ಭಣಗುಡುತ್ತಿತ್ತು. ಸಾಮಾನ್ಯ ದಿನಗಳಿಗಿಂತಲೂ ಶೇ.35ರಷ್ಟು ಪ್ರಯಾಣಿಕರು ಕಡಿಮೆ ಇದ್ದರು. ಅಗತ್ಯಕ್ಕೆ ಅನುಗುಣವಾಗಿ ಬಸ್‌ಗಳ ಕಾರ್ಯಾಚರಣೆ ನಡೆಸಲಾಯಿತು ಎಂದು ಕೆಎಸ್‌ಆರ್‌ಟಿಸಿ ಮೈಸೂರು ವಿಭಾಗೀಯ ನಿಯಂತ್ರಣಾಧಿಕಾರಿ ಅಶೋಕ್ ಕುಮಾರ್ ತಿಳಿಸಿದರು.



ಮೈಸೂರು–ಕೆಆರ್‌ಎಸ್ ರಸ್ತೆಯಲ್ಲಿರುವ ಮಿಲೇನಿಯಂ ಎನ್‌ಕ್ಲೇವ್ ನಿವಾಸಿ, ಹವ್ಯಾಸಿ ಛಾಯಾಗ್ರಾಹಕ ಕೆ.ಜಿ.ಗುರುರಾಜ್, ಪಾರ್ಶ್ವ ಸೂರ್ಯಗ್ರಹಣದ ಸ್ಪರ್ಶ ಕ್ಷಣದಿಂದ ಸೂರ್ಯಾಸ್ತದವರೆಗೂ ಕ್ಲಿಕ್ಕಿಸಿದ್ದಾರೆ.



ಮೈಸೂರಿನ ವಿದ್ಯಾವರ್ಧಕ ಇಂಜಿನಿಯರಿಂಗ್ ಕಾಲೇಜು ಮೆಕ್ಯಾನಿಕಲ್ ಇಂಜಿನಿಯರಿಂಗ್ ವಿಭಾಗದ ಅಸೋಸಿಯೇಟ್ ಪ್ರೊಫೆಸರ್ ಹಾಗೂ ಹವ್ಯಾಸಿ ಖಗೋಳಶಾಸ್ತ್ರಜ್ಞ ಡಾ.ಎಸ್.ಎ.ಮೋಹನ್ ಕೃಷ್ಣ ಅವರು ಸೆರೆ ಹಿಡಿದಿರುವ ಸೂರ್ಯಗ್ರಹಣದ ಚಿತ್ರಗಳು.



ಪಾರ್ಶ್ವ ಸೂರ್ಯಗ್ರಹಣದ ಬಳಿಕ ಮೈಸೂರಿನ ಅಮೃತೇಶ್ವರ ದೇವಾಲಯದಲ್ಲಿ ಗ್ರಹಣಶಾಂತಿ ಹೋಮಕ್ಕೆ ಭಕ್ತರು ಸಂಕಲ್ಪ ಮಾಡಿಕೊಳ್ಳುತ್ತಿರುವುದು.

ಪ್ರಧಾನಿಯಾಗಿ ರಿಷಿ ಸುನಕ್ ಅಧಿಕಾರ ಸ್ವೀಕಾರ

ಸಲುವಾಗಿ ಕೆಲ ಕಠಿಣ ನಿರ್ಣಯಗಳನ್ನು ಕೈಗೊಂಡರು. ನಾನು ಅವರನ್ನು ಮೆಚ್ಚುತ್ತೇನೆ. ಆದರೆ ಉದ್ದೇಶಪೂರ್ವಕವಲ್ಲದ ಕೆಲವು ತಪ್ಪುಗಳು ಆಗಿವೆ. ವಾಸ್ತವವಾಗಿ ಆ ತಪ್ಪುಗಳನ್ನು ಸರಿಪಡಿಸಬೇಕಿದೆ ಎಂದರು. ಇದಕ್ಕೂ ಮುನ್ನ ಬ್ರಿಟನ್‌ನ ನಿರ್ಗಮಿತ ಪ್ರಧಾನಿ ಲಿಜ್ ಟ್ರಸ್ ಅವರು ಡೌನಿಂಗ್ ಸ್ಟ್ರೀಟ್‌ನಿಂದ ವಿದಾಯ ಭಾಷಣ ಮಾಡಿದರು. ನೂತನ ಪ್ರಧಾನಿಯ ಯಶಸ್ಸಿಗೆ ಹಾರೈಸಿದರು. ಅವರು ಅಧಿಕಾರದಲ್ಲಿದ್ದ ಸಮಯದಲ್ಲಿನ ಕೆಲವು ಸಾಧನೆಗಳನ್ನು ಶ್ಲಾಘಿಸಿದರು.

ಬ್ರಿಟನ್ ಪ್ರಧಾನಿಯಾದ ಅಳಿಯ ರಿಷಿ ಸುನಕ್ ಬಗ್ಗೆ ಹೆಮ್ಮೆಯಾಗುತ್ತಿದೆ

ಇನ್ಫೋಸಿಸ್ ಸಂಸ್ಥಾಪಕ ನಾರಾಯಣಮೂರ್ತಿ

ಬೆಂಗಳೂರು, ಅ.25– ಬ್ರಿಟನ್ ಪ್ರಧಾನಿಯಾಗಿ ಪ್ರಮಾಣ ವಚನ ಸ್ವೀಕರಿಸಲಿರುವ ತಮ್ಮ ಅಳಿಯ ರಿಷಿ ಸುನಕ್ ಅವರನ್ನು ಇನ್ಫೋಸಿಸ್ ಸಂಸ್ಥಾಪಕ ನಾರಾಯಣಮೂರ್ತಿ ಅಭಿನಂದಿಸಿದ್ದಾರೆ. ಇದೇ ಮೊದಲ ಬಾರಿಗೆ ಪ್ರತಿಕ್ರಿಯಿಸಿರುವ ಅವರು, ರಿಷಿ ಸುನಕ್ ಬಗ್ಗೆ ಹೆಮ್ಮೆಯಾಗುತ್ತಿದೆ. ಉನ್ನತ ಸ್ಥಾನಕ್ಕೇರಿ ಇತಿಹಾಸ ಸೃಷ್ಟಿಸಿದ್ದಕ್ಕೆ ಅಳಿಯನಿಗೆ ಅಭಿನಂದನೆ ಸಲ್ಲಿಸಿ, ಶುಭ ಹಾರೈಸಿದ್ದಾರೆ.



'ರಿಷಿ ಅವರಿಗೆ ಅಭಿನಂದನೆಗಳು. ನಾವು ಅವರ ಬಗ್ಗೆ ಹೆಮ್ಮೆಪಡುತ್ತೇವೆ ಮತ್ತು ಅವರ ಯಶಸ್ಸನ್ನು ನಾವು ಬಯಸುತ್ತೇವೆ. ಅವರು ಬ್ರಿಟನ್ ಜನತೆಗೆ ತಮ್ಮ ಕೈಲಾದಷ್ಟು ಒಳ್ಳೆಯದನ್ನೇ ಮಾಡುತ್ತಾರೆ ಎಂಬ ವಿಶ್ವಾಸ ನಮಗಿದೆ' ಎಂದು ನಾರಾಯಣಮೂರ್ತಿ ಹೇಳಿಕೆಯಲ್ಲಿ ತಿಳಿಸಿದ್ದಾರೆ.

ಭಕ್ತಿ, ಭಾವೈಕ್ಯತೆಯ ಕುಂಬಾರಕೊಪ್ಪಲು ಶ್ರೀಮಹದೇಶ್ವರಸ್ವಾಮಿ ಜಾತ್ರಾ ಮಹೋತ್ಸವ ಆರಂಭ

- ಇಂದು ಸಂಜೆ ಹಾಲರವಿ, ಬಾಯಿಬೀಗ ಉತ್ಸವ
- ನಾಳೆ ಬೆಳಗಿನ ಜಾವ ಹುಲಿವಾಹನೋತ್ಸವ



ಮೈಸೂರು,ಅ.25(ಪಿಎಂ)– ಪರಂಪರಾಗತವಾಗಿ ಭಕ್ತಿ ಹಾಗೂ ಭಾವೈಕ್ಯತೆಯ ಪ್ರತೀಕವಾಗಿ ನಡೆಯುವ ಕುಂಬಾರಕೊಪ್ಪಲು ಶ್ರೀ ಮಹದೇಶ್ವರಸ್ವಾಮಿ ಜಾತ್ರಾ ಮಹೋತ್ಸವವು ಮಂಗಳವಾರ ಚಾಲನೆ ಪಡೆಯಿತು. ಕುಂಬಾರಕೊಪ್ಪಲು ಗ್ರಾಮಸ್ಥರು ಪ್ರತಿವರ್ಷ ದೀಪಾವಳಿ ಹಬ್ಬದ ಪ್ರಯುಕ್ತ ಭಕ್ತಿಭಾವದಿಂದ ಈ ಜಾತ್ರಾ ಮಹೋತ್ಸವ ಆಚರಿಸುವುದು ತಲತಲಾಂತರದಿಂದ ನಡೆದು ಬಂದಿದೆ.



ಗ್ರಾಮದ ಶ್ರೀ ಮಹದೇಶ್ವರ ದೇವಸ್ಥಾನ, ಈ ಜಾತ್ರಾ ಮಹೋತ್ಸವದ ಕೇಂದ್ರ ಬಿಂದು. ಈ ದೇವಾಲಯವೂ ಸೇರಿದಂತೆ ಗ್ರಾಮದ ಎಲ್ಲಾ ದೇವಾಲಯಗಳಲ್ಲಿ ಇಂದು ವಿಶೇಷ ಪೂಜೆ ಜರುಗುವ ಮೂಲಕ ಮೂರು ದಿನಗಳ ಜಾತ್ರೆ ಮಹೋತ್ಸವ ಆರಂಭಗೊಂಡಿತು.

ಶ್ರೀ ಮಹದೇಶ್ವರ ದೇವಸ್ಥಾನ, ಇದೇ ದೇವಾಲಯದ ಆವರಣದಲ್ಲಿರುವ ಶ್ರೀ ಸಿದ್ದಪ್ಪಾಜಿ ದೇವಸ್ಥಾನ, ಶ್ರೀ ವರಸಿದ್ಧಿ ವಿನಾಯಕ ದೇವಸ್ಥಾನ ಸೇರಿದಂತೆ ಗ್ರಾಮದ ಮಾರಮ್ಮನ ಗುಡಿ, ಬನ್ನಿ ಮಾರಮ್ಮ ದೇವಾಲಯ ಹಾಗೂ ಶ್ರೀ ಬಸವೇಶ್ವರ ದೇವಸ್ಥಾನಗಳಲ್ಲಿ ಇಂದು ಬೆಳಗ್ಗೆ 6ರಿಂದ ಮಧ್ಯಾಹ್ನ 2ರವರೆಗೆ ವಿಶೇಷ ಪೂಜಾ ಕೈಂಕರ್ಯ ನಡೆಸಲಾಯಿತು.

ಗ್ರಾಮಸ್ಥರು ಎಲ್ಲಾ ದೇವಾಲಯಗಳ ಪೂಜಾ ಕೈಂಕರ್ಯದಲ್ಲಿ ಪಾಲ್ಗೊಂಡು ಭಕ್ತಿಯ ಪರಾಕಾಷ್ಠೆ ಮೆರೆದರು. ಸೂರ್ಯ ಗ್ರಹಣದ ಹಿನ್ನೆಲೆಯಲ್ಲಿ ಮಧ್ಯಾಹ್ನ 2ರವರೆಗೆ ಪೂಜಾ ವಿಧಿವಿಧಾನಗಳನ್ನು ನಡೆಸಿ, ಬಳಿಕ ದೇವಾಲಯಗಳಿಗೆ ಭಕ್ತರ ಪ್ರವೇಶಕ್ಕೆ ನಿರ್ಬಂಧಿಸಿ, ದೇವಸ್ಥಾನಗಳ ಬಾಗಿಲು ಮುಚ್ಚಲಾಯಿತು.

'ಮೈಸೂರು ಮಿತ್ರ'ನೊಂದಿಗೆ ಮಾತನಾಡಿದ ಕುಂಬಾರಕೊಪ್ಪಲು ಅಭ್ಯುದಯ ಸಂಘದ ಅಧ್ಯಕ್ಷ ಕೆ.ಟಿ.ಚೆಲುವೇಗೌಡ, ಇಲ್ಲಿನ ಮಹದೇಶ್ವರಸ್ವಾಮಿ ದೇವಸ್ಥಾನ ಪುರಾತನ ಹಿನ್ನೆಲೆ ಹೊಂದಿದೆ. ಹಿಂದೆ ಮಹದೇಶ್ವರಸ್ವಾಮಿ ಅವರು ವಿಶ್ರಾಂತಿ ಪಡೆದ ಜಾಗವೇ ಇಲ್ಲಿನ ಮಹದೇಶ್ವರಸ್ವಾಮಿ ದೇವಸ್ಥಾನವಾಗಿದೆ. ಈ ಮೊದಲು ಇದು ಚಿಕ್ಕ ದೇವಸ್ಥಾನವಾಗಿತ್ತು. ಗ್ರಾಮಸ್ಥರಿಂದ ಜೀರ್ಣೋದ್ಧಾರಗೊಳಿಸಿ ವಿಶಾಲವಾದ ಆವರಣ ನಿರ್ಮಿಸಲಾಗಿದೆ. ಕುಂಬಾರಕೊಪ್ಪಲಿನಲ್ಲಿ ಸುಮಾರು 15ರಿಂದ 20 ಸಾವಿರ ಜನಸಂಖ್ಯೆ ಇದೆ. ವಿವಿಧ ಜಾತಿ–ಜನಾಂಗಗಳು ಇಲ್ಲಿದ್ದು, ಎಲ್ಲರೂ ಸಾಮರಸ್ಯದಿಂದ ಬದುಕುತ್ತಿದ್ದಾರೆ. ಜಾತ್ರೆಯಲ್ಲಿ ಎಲ್ಲರ ಮನೆಯಲ್ಲಿ ಹಬ್ಬದ ಸಂಭ್ರಮ ಮನೆ ಮಾಡಲಿದೆ ಎಂದು ಹೇಳಿದರು.

ಹಾಲರವಿ, ಬಾಯಿಬೀಗ ಉತ್ಸವ: ಅ.26ರಂದು ರಾತ್ರಿ 8ಕ್ಕೆ ತಿಪ್ಪಾಜಿ ಕೊಳದಿಂದ ಪ್ರಾರಂಭಗೊಳ್ಳುವ ಹಾಲರವಿ ಮತ್ತು ಬಾಯಿ ಬೀಗದ ಉತ್ಸವವು ಊರಿನ (ಕುಂಬಾರಕೊಪ್ಪಲು) ಪ್ರಮುಖ ಬೀದಿಗಳಲ್ಲಿ ಸಾಗಲಿದೆ. ಜಾನಪದ ಕಲಾತಂಡಗಳೊಂದಿಗೆ ನಡೆಯುವ ಈ ಉತ್ಸವ ಅಂತಿಮವಾಗಿ ಶ್ರೀ ಮಹದೇಶ್ವರಸ್ವಾಮಿ ದೇವಸ್ಥಾನ ತಲುಪಿ ಸಮಾಪ್ತಿಗೊಳ್ಳಲಿದೆ. ಇದಾದ ಬಳಿಕ ಅ.27ರ ಬೆಳಗಿನ ಜಾವ 3ಕ್ಕೆ ಹುಲಿವಾಹನೋತ್ಸವ ಜರುಗಲಿದ್ದು, ನಂತರ ಶ್ರೀ ಮಹದೇಶ್ವರಸ್ವಾಮಿ ದೇವಸ್ಥಾನದ ಎದುರು ಕೊಂಡೋತ್ಸವ ನಡೆಯಲಿದೆ. ಅನಂತರ ಮಧ್ಯಾಹ್ನ 12ಕ್ಕೆ ದೇವಸ್ಥಾನದ ಪಕ್ಕದಲ್ಲೇ ಇರುವ ಶ್ರೀ ಮಹದೇಶ್ವರ ಸಮುದಾಯ ಭವನದಲ್ಲಿ ಅನ್ನ ಸಂತರ್ಪಣೆ ನಡೆಯಲಿದ್ದು, ಸುಮಾರು 10 ಸಾವಿರ ಮಂದಿಗೆ ಮೊಸರನ್ನ, ಬಾತು ಹಾಗೂ ಕೇಸರಿ ಬಾತು ಉಣಬಡಿಸಲು ಸಿದ್ಧತೆ ನಡೆಸಲಾಗಿದೆ.



ರೋಚಕ ನಾಡ ಕುಸ್ತಿ: ಪ್ರತಿವರ್ಷದ ಈ ಜಾತ್ರೆಯ ಅಂಗವಾಗಿ ನಡೆಯುವ ನಾಡಕುಸ್ತಿಯನ್ನು ರೋಚಕ ಕ್ಷಣಗಳನ್ನು ಸವಿಯಲು ಸಾವಿರಾರು ಮಂದಿ ಸೇರುತ್ತಾರೆ. ಈ ಬಾರಿಯ ಕುಸ್ತಿಯು ಅ.27ರಂದು ಕೊಂಡೋತ್ಸವದ ಬಳಿಕ ನಡೆಯಲಿದ್ದು, ಶ್ರೀ ಮಹದೇಶ್ವರಸ್ವಾಮಿ ದೇವಸ್ಥಾನಕ್ಕೆ ಸಮೀಪದ ಶ್ರೀ ಕೆಂಪೇಗೌಡ ಕ್ರೀಡಾಂಗಣದಲ್ಲಿ ಅಖಾಡ ಸಜ್ಜುಗೊಳಿಸಲಾಗಿದೆ.

30 ಜೊತೆ ಕುಸ್ತಿ ಪಂದ್ಯ ನಡೆಯಲಿದ್ದು, ಪ್ರತಿ ಪಂದ್ಯದಲ್ಲಿ 5ರಿಂದ 10 ನಿಮಿಷ ಕಾಲ ಪೈಲ್ವಾನರ ಕಾದಾಟ ನಡೆಯಲಿದೆ. ಮೈಸೂರು ಮತ್ತು ಮಂಡ್ಯ ಜಿಲ್ಲೆಯ ಕುಸ್ತಿ ಪಟುಗಳು ಇಲ್ಲಿನ ಕುಸ್ತಿಯಲ್ಲಿ ಭಾಗವಹಿಸಲಿದ್ದಾರೆ. ಗೆಲುವು ಸಾಧಿಸುವ ಪೈಲ್ವಾನರಿಗೆ ಅವರ ಸಾಧನೆ ಆಧಾರದಲ್ಲಿ ಗೌರವ ಧನ ನೀಡಲಾಗುತ್ತದೆ. ಶ್ರೀ ಮಹದೇಶ್ವರ ಕ್ರೀಡಾ ಹಾಗೂ ಕುಸ್ತಿದಾರರ ಸೇವಾ ಸಂಘದಿಂದ ಕುಸ್ತಿ ಪಂದ್ಯಾವಳಿ ಎಲ್ಲಾ ವ್ಯವಸ್ಥೆ ನಡೆಯುತ್ತಿದೆ.

ಕಬಡ್ಡಿ ಪಂದ್ಯಾವಳಿ: ಜಾತ್ರೆ ಮಹೋತ್ಸವದ ಅಂಗವಾಗಿ ಹಮ್ಮಿಕೊಂಡಿರುವ ಕುಂಬಾರಕೊಪ್ಪಲು ಕಬಡ್ಡಿ ಲೀಗ್ (ಕೆಕೆಎಲ್) ಮ್ಯಾಟ್ ಕಬಡ್ಡಿ ಪಂದ್ಯಾವಳಿಗೆ ಇಂದು ಚಾಲನೆ ದೊರೆಯಿತು. ಮಾರಿಗುಡಿ ಗ್ರೂಪ್ಸ್, ಅಂಬಾರಿ ವಾರಿಯರ್ಸ್, ಫ್ರೆಂಡ್ಸ್ ಕ್ರೀಡಾ ಸಂಸ್ಥೆ, ಅಯ್ಯ ಸ್ಪೋರ್ಟ್ಸ್ ಕ್ಲಬ್, ಮಾರುತಿ ಕ್ರೀಡಾ ಸಂಸ್ಥೆ, ದೇವ್ ವಾರಿಯರ್ಸ್, ಗಂಧರ್ವ ಸ್ಪೋರ್ಟ್ಸ್ ಕ್ಲಬ್ ಹಾಗೂ ಜಿಂಜರ್ ಕಿಂಗ್ ಕೊಡಗು ರಾಮಣ ತಂಡಗಳು ಪಂದ್ಯಾವಳಿಯಲ್ಲಿ ಪಾಲ್ಗೊಂಡಿವೆ. ಪಂದ್ಯಾವಳಿಯ ವಿಜೇತ ತಂಡಕ್ಕೆ ಲಕ್ಷ ರೂ. ನಗದು ಬಹುಮಾನ ಹಾಗೂ ದ್ವಿತೀಯ ಸ್ಥಾನ ಗಳಿಸುವ ತಂಡಕ್ಕೆ 50 ಸಾವಿರ ರೂ. ನಗದು ಬಹುಮಾನ ನೀಡಲಾಗುತ್ತದೆ.

ಎತ್ತಿನ ಗಾಡಿ ಓಟದ ಸ್ಪರ್ಧೆ ರದ್ದು: ಜಾತ್ರೆಯ ಅಂಗವಾಗಿ ಅ.26 ಮತ್ತು 27ರಂದು ಪಿ.ಕೆ.ಸ್ಯಾನಿಟೋರಿಯಂ ಆಸ್ಪತ್ರೆಯ ಮೈದಾನದಲ್ಲಿ ಹಮ್ಮಿಕೊಂಡಿದ್ದ ಎತ್ತಿನ ಗಾಡಿ ಓಟದ ಸ್ಪರ್ಧೆ ರದ್ದುಗೊಳಿಸಲಾಗಿದೆ. ಜಾನುವಾರುಗಳಲ್ಲಿ ಚರ್ಮಗಂಟು ರೋಗ ಹರಡುವ ಭೀತಿ ಹಿನ್ನೆಲೆಯಲ್ಲಿ ಜಿಲ್ಲಾಡಳಿತದ ಸೂಚನೆ ಮೇರೆಗೆ ಎತ್ತಿನ ಗಾಡಿ ಓಟದ ಸ್ಪರ್ಧೆ ರದ್ದು ಮಾಡಲಾಗಿದೆ.

ಭಾವೈಕ್ಯತೆಯ ಜಾತ್ರೆ



ಕುಂಬಾರಕೊಪ್ಪಲು ಶ್ರೀ ಮಹದೇಶ್ವರಸ್ವಾಮಿ ಜಾತ್ರೆಯು ಇಲ್ಲಿನ ಧಾರ್ಮಿಕ, ಸಾಂಸ್ಕೃತಿಕ ಹಾಗೂ ಕ್ರೀಡಾ ಚಟುವಟಿಕೆ ಒಳಗೊಂಡ ದೊಡ್ಡ ಹಬ್ಬ. ಗ್ರಾಮದ ಎಲ್ಲಾ ಜಾತಿ–ಜನಾಂಗಗಳು ಇದರಲ್ಲಿ ಭಾಗವಹಿಸಿ ಭಾವೈಕ್ಯತೆ ಮೆರೆಯಲಿವೆ. ಗ್ರಾಮಸ್ಥರು ಹಾಗೂ ಅವರ ನೆಂಟರಿಷ್ಟರು ಸೇರಿದಂತೆ ಸುಮಾರು 30 ಸಾವಿರ ಮಂದಿ ಈ ಮೂರು ದಿನಗಳ ಜಾತ್ರಾಮಹೋತ್ಸವದಲ್ಲಿ ಪಾಲ್ಗೊಳ್ಳುವುದು ವಿಶೇಷ. ಪ್ರತಿವರ್ಷ ಜಾತ್ರೆಯ ಪ್ರಯುಕ್ತ ಕನಿಷ್ಠ 10 ಸಾವಿರ ಮಂದಿಗೆ ಅನ್ನಸಂತರ್ಪಣೆ ಮಾಡಲಾಗುತ್ತಿದೆ. ಕಳೆದ 15 ವರ್ಷಗಳಿಂದ ಅನ್ನಸಂತರ್ಪಣೆ ಕಾರ್ಯಕ್ರಮ ನಡೆಸಲಾಗುತ್ತಿದೆ

-ಚೇತನ್ ವಿಷಕಂಠೇಗೌಡ,
ಕಾರ್ಯಕಾರಿ ಸಮಿತಿ ಸದಸ್ಯರು,
ಕುಂಬಾರಕೊಪ್ಪಲು ಅಭ್ಯುದಯ ಸಂಘ.

ಕುಸಿದಿದ್ದ ಅರಮನೆ ಕೋಟೆ ಗೋಡೆ ಪುನರ್ ನಿರ್ಮಾಣ ಕಾಮಗಾರಿಗೆ ಚಾಲನೆ



ಮೈಸೂರು, ಅ.25(ಎಂಟಿವೈ)– ಸತತ ಮಳೆಯಿಂದಾಗಿ ಶಿಥಿಲಗೊಂಡು ಕುಸಿದಿದ್ದ ಮೈಸೂರು ಅರಮನೆಯ ಕೋಟೆ ಗೋಡೆಯ ಪುನರ್ ನಿರ್ಮಾಣ ಕಾಮಗಾರಿ ಆರಂಭಿಸಲಾಗಿದೆ.

ದಸರಾ ವೇಳೆ ಸಿಡಿಸಿದ್ದ ಕುಶಾಲ ತೋಪು ಹಾಗೂ ಸತತ ಮಳೆಯಲ್ಲಿ ನೆನೆದು ಶಿಥಿಲಗೊಂಡಿದ್ದ ಶತಮಾನಕ್ಕೂ ಹಳೆಯದಾದ ಅರಮನೆಯ ಕೋಟೆ ಗೋಡೆ ಕೋಟೆ ಮಾರಮ್ಮ ದೇವಾಲಯದ ಸಮೀಪ ಅ.18ರಂದು ಕುಸಿದು ಬಿದ್ದಿತ್ತು. ಕೋಟೆಯ ಆಗ್ನೇಯ ಮೂಲೆಯಲ್ಲಿ 20 ಮೀಟರ್ ಅಗಲ ಹಾಗೂ 7 ಮೀಟರ್ ಎತ್ತರದ ಗೋಡೆ ನೆಲಕ್ಕೆ ಉರುಳಿ ಬಿದ್ದಿತ್ತು. ಅರಮನೆ ಮಂಡಳಿ ವತಿಯಿಂದ ಕುಸಿದಿದ್ದ ಕೋಟೆ ಗೋಡೆಯ ಭಾಗಕ್ಕೆ ಟಾರ್ಪಲ್ ಹೊದಿಸಿ ಮತ್ತೆ ಕುಸಿಯದಂತೆ ಸಂರಕ್ಷಣಾ ಕ್ರಮ ಕೈಗೊಳ್ಳಲಾಗಿತ್ತು.

ಶಿಥಿಲಗೊಂಡಿರುವ ಕೋಟೆಯ 50 ಮೀಟರ್ ಉದ್ದದ ದುರಸ್ತಿಗೆ 39 ಲಕ್ಷ ರೂ. ಮೊತ್ತದ ಟೆಂಡರ್ ಅನ್ನು ಒಂದೂವರೆ ತಿಂಗಳ ಹಿಂದೆಯೇ ಕರೆಯಲಾಗಿತ್ತು. ಇದರಲ್ಲಿ ಕುಸಿದ ಭಾಗವು ಸೇರಿತ್ತು. ಇದೀಗ ದುರಸ್ತಿ ಕಾರ್ಯ ಆರಂಭಿಸಲಾಗಿದೆ. ಕಲ್ಲುಗಳೊಂದಿಗೆ ನಿರ್ಮಿತವಾಗಿದ್ದ ಗೋಡೆಯ ಕುಸಿದ ಭಾಗದ ಪುನರ್ ನಿರ್ಮಾಣ ಕಾರ್ಯ ನಡೆದಿದ್ದು, ಜೆಸಿಬಿ ಬಳಸಿ ಕಾಮಗಾರಿ ನಡೆಸಲಾಗುತ್ತಿದೆ. ಕುಸಿದಿದ್ದ ಗೋಡೆಯ ಅವಶೇಷ ದೂರ ಸರಿಸಿ, ಕಾಮಗಾರಿ ನಡೆಸಲಾಗುತ್ತಿದೆ ತಜ್ಞರ ಮಾರ್ಗದರ್ಶನದಲ್ಲಿ ಕಾಮಗಾರಿ ನಡೆಸಲಾಗುತ್ತಿದೆ. ಪಾರಂಪರಿಕ ಕಟ್ಟಡವಾಗಿರುವುದರಿಂದ ಮೂಲ ಸ್ವರೂಪ ಹಾಗೂ ಕಟ್ಟಲು ಬಳಸಲಾಗಿದ್ದ ವಸ್ತುಗಳಿಂದಲೇ ದುರಸ್ತಿ ಕಾಮಗಾರಿ ನಡೆದಿದೆ. 90 ದಿನಗಳೊಳಗೆ ಇದು ಮುಗಿಯುವ ನಿರೀಕ್ಷೆ ಇದೆ.

ಕಲ್ಲು ಹಾಗೂ ಸುರ್ಕಿ ಗಾರೆಯಿಂದ ನಿರ್ಮಿಸಲಾದ ಕೋಟೆಗೆ 220 ವರ್ಷಗಳ ಇತಿಹಾಸವಿದ್ದು, ಅಲ್ಲಲ್ಲಿ ಬಿರುಕುಗಳು ಮೂಡಿವೆ. ಶಿಥಿಲಗೊಂಡಿರುವುದನ್ನು ಮನಗಂಡು ಕೋಟೆ ಗೋಡೆಯ ದುರಸ್ತಿಗೆ ಕ್ರಮ ಕೈಗೊಳ್ಳಲಾಗಿತ್ತು. ಇದರಿಂದಲೇ ದಸರಾ ವೇಳೆ ಸಿಡಿಮದ್ದು ತಾಲೀಮು ನಡೆಸದಂತೆ ಮನವಿ ಮಾಡಲಾಗಿತ್ತು. ಅರಮನೆಯ ಮಂಡಳಿ ಮನವಿ ಮೇರೆಗೆ ಎರಡು ಬಾರಿ ಸಿಡಿಮದ್ದು ತಾಲೀಮನ್ನು ದಸರಾ ವಸ್ತುಪ್ರದರ್ಶನದ ಪಾರ್ಕಿಂಗ್ ಸ್ಥಳದಲ್ಲಿ ನಡೆಸಲಾಗಿತ್ತು ಆದರೂ, ನಾಲ್ಕು ಬಾರಿ ವರಾಹ ದ್ವಾರದ ಪಾರ್ಕಿಂಗ್ ಸ್ಥಳದಲ್ಲಿ ಸಿಡಿಮದ್ದು ತಾಲೀಮು ನಡೆಸಲಾಗಿತ್ತು ಹಾಗಾಗಿ ಮೊದಲೇ ಬಿರುಕು ಬಿಟ್ಟಿದ್ದ ಕೋಟೆ ಗೋಡೆ ಕಳೆದ 20 ದಿನದಿಂದ ಸುರಿಯುತ್ತಿದ್ದ ಸತತ ಮಳೆಗೆ ಗೋಡೆ ದುರ್ಬಲಗೊಂಡು ಕುಸಿದಿತ್ತು.

ಕುಸಿದಿದ್ದ ಕೋಟೆ ಗೋಡೆಯ ಭಾಗದಿಂದ ಯಾರೂ ಅರಮನೆಗೆ ನುಸುಳದಂತೆ ಕಟ್ಟೆಚ್ಚರ ವಹಿಸಲಾಗಿತ್ತು. ಬೇಲಿಯೊಂದಿಗೆ ಟಾರ್ಪಾಲ್ ಕಟ್ಟಿ ಸೂಕ್ಷ್ಮವಾಗಿ ಗಮನ ಹರಿಸಲಾಗಿತ್ತು. ಆದರೆ, ಕಾಮಗಾರಿ ಆರಂಭವಾಗಿರುವುದರಿಂದ ತ್ವರಿತಗತಿಯಲ್ಲಿ ಕಾಮಗಾರಿ ಪೂರ್ಣಗೊಳಿಸಲು ಕ್ರಮ ಕೈಗೊಳ್ಳಲಾಗಿರುವುದರಿಂದ ಅರಮನೆ ಭದ್ರತೆಗೆ ಯಾವುದೇ ಅಪಾಯವಿಲ್ಲದಂತಾಗಿದೆ.

ಪೂರ್ಣ ಪ್ರವೇಶಾತಿ ಶುಲ್ಕ ಪಾವತಿಸಬೇಕೆಂದು

ಒತ್ತಾಯಿಸದಂತೆ ಆಗ್ರಹಿಸಿ ಪ್ರತಿಭಟನೆ



ಮೈಸೂರು,ಅ.25(ಪಿಎಂ)– ಮೈಸೂರು ವಿಶ್ವವಿದ್ಯಾನಿಲಯ ವ್ಯಾಪ್ತಿಯಲ್ಲಿ ಪದವಿ ಹಾಗೂ ಸ್ನಾತಕೋತ್ತರ ಪದವಿಗೆ ಪರಿಶಿಷ್ಟ ಜಾತಿ ಮತ್ತು ಪಂಗಡದ ವಿದ್ಯಾರ್ಥಿಗಳು ಪೂರ್ಣ ಪ್ರಮಾಣದ ಪ್ರವೇಶ ಶುಲ್ಕ ಪಾವತಿಸಿ ಪ್ರವೇಶಾತಿ ಪಡೆಯಬೇಕೆಂದು ಒತ್ತಡಹೇರದಂತೆ ಕ್ರಮ ವಹಿಸಬೇಕೆಂದು ಒತ್ತಾಯಿಸಿ ಕರ್ನಾಟಕ ರಾಜ್ಯ ಸಂಶೋಧಕರ ಸಂಘದ ನೇತೃತ್ವದಲ್ಲಿ ಮಹಾರಾಜ ಕಾಲೇಜು ಮತ್ತು ಯುವರಾಜ ಕಾಲೇಜು ವಿದ್ಯಾರ್ಥಿಗಳು ಮಂಗಳವಾರ ಪ್ರತಿಭಟನೆ ನಡೆಸಿದರು.

ಮೈಸೂರು ವಿಶ್ವವಿದ್ಯಾನಿಲಯದ ಕ್ರಾಫರ್ಡ್ ಭವನದ ಎದುರು ಜಮಾಯಿಸಿದ ಪ್ರತಿಭಟನಾಕಾರರು, ಪದವಿ ಹಾಗೂ ಸ್ನಾತಕೋತ್ತರ ಪದವಿ ಪ್ರವೇಶಾತಿಗೆ ಪೂರ್ಣ ಶುಲ್ಕ ಪಾವತಿಸುವಂತೆ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದ ವಿದ್ಯಾರ್ಥಿಗಳನ್ನು ಒತ್ತಾಯ ಮಾಡುವಂತಿಲ್ಲವೆಂದು ಸಮಾಜ ಕಲ್ಯಾಣ ಇಲಾಖೆ ಜಂಟಿ ನಿರ್ದೇಶಕರು ಆದೇಶ ಹೊರಡಿಸಿದ್ದಾರೆ. ಅದಾಗ್ಯೂ ಪ್ರಸಕ್ತ 2022–23ನೇ ಸಾಲಿನಲ್ಲಿ ಪದವಿ ಹಾಗೂ ಸ್ನಾತಕೋತ್ತರ ಪದವಿಗೆ ಪ್ರವೇಶಾತಿ ನೀಡಲು ಪರಿಶಿಷ್ಟ ಜಾತಿ, ಪಂಗಡದ ವಿದ್ಯಾರ್ಥಿಗಳಿಗೆ ಪೂರ್ಣ ಶುಲ್ಕ ಪಾವತಿಸುವಂತೆ ಒತ್ತಾಯಿಸಲಾಗುತ್ತಿದೆ ಎಂದು ಆಕ್ರೋಶ ವ್ಯಕ್ತಪಡಿಸಿದರು.

ಪೂರ್ಣ ಶುಲ್ಕ ಪಾವತಿಸಲು ಒತ್ತಡ ಹೇರುತ್ತಿರುವ ಕಾರಣ ಗ್ರಾಮೀಣ ಪ್ರದೇಶದ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದ ಬಡ ವಿದ್ಯಾರ್ಥಿಗಳಿಗೆ ಉನ್ನತ ವಿದ್ಯಾಭ್ಯಾಸ ಮುಂದುವರಿಸಲು ಕಷ್ಟಕರವಾಗಿದೆ. ಪರಿಶಿಷ್ಟ ಜಾತಿ, ಪಂಗಡದ ವಿದ್ಯಾರ್ಥಿಗಳ ಶೈಕ್ಷಣಿಕ ಹಿತದೃಷ್ಟಿಯಿಂದ ಪ್ರವೇಶಾತಿ ಸಂದರ್ಭದಲ್ಲಿ ಪೂರ್ಣ ಪ್ರವೇಶ ಶುಲ್ಕ ಭರಿಸಿ ಎಂದು ಒತ್ತಾಯ ಮಾಡಬಾರದೆಂದು ಸಮಾಜ ಕಲ್ಯಾಣ ಇಲಾಖೆ ಜಂಟಿ ನಿರ್ದೇಶಕರು ಆದೇಶ ಹೊರಡಿಸಿದ್ದಾರೆ. ಈ ಆದೇಶದ ಅನ್ವಯ ಪದವಿ ಮತ್ತು ಸ್ನಾಕೋತ್ತರ ಪದವಿಗೆ ಪ್ರವೇಶಾತಿ ನೀಡಬೇಕೆಂದು ಒತ್ತಾಯಿಸಿದರು.

ಪ್ರತಿಭಟನೆ ಹಿನ್ನೆಲೆಯಲ್ಲಿ ಪ್ರತಿಭಟನಾ ಸ್ಥಳಕ್ಕೆ ಆಗಮಿಸಿದ ಕುಲಪತಿ ಪ್ರೊ.ಜಿ.ಹೇಮಂತ್‌ಕುಮಾರ್, ಪ್ರವಾಶಾತಿಗೆ ಪೂರ್ಣ ಶುಲ್ಕ ಪಾವತಿಗೆ ಒತ್ತಡಹೇರದಂತೆ ಕ್ರಮ ಕೈಗೊಳ್ಳಲಾಗುವುದು. ಜೊತೆಗೆ ಪ್ರವೇಶಾತಿ ಪಡೆಯುವ ದಿನಾಂಕ ವಿಸ್ತರಿಸಲಾಗುವುದು ಎಂಬ ಭರವಸೆ ನೀಡಿದರು. ಈ ಹಿನ್ನೆಲೆಯಲ್ಲಿ ಪ್ರತಿಭಟನೆ ಕೈಬಿಡಲಾಯಿತು ಎಂದು ಸಂಶೋಧಕರ ಸಂಘದ ರಾಜ್ಯಾಧ್ಯಕ್ಷ ಎಸ್.ಮರಿದೇವಯ್ಯ ತಿಳಿಸಿದರು.

ಜಾಗತಿಕ ಬಂಡವಾಳ ಹೂಡಿಕೆದಾರರ ಸಮಾವೇಶ ವಿರೋಧಿಸಿ

ನ.2ರಂದು ಬೆಂಗಳೂರಿನ ಫ್ರೀಡಂ ಪಾರ್ಕ್‌ನಲ್ಲಿ ಬೃಹತ್ ಸಮಾವೇಶ

ಸಂಯುಕ್ತ ಹೋರಾಟ ಕರ್ನಾಟಕ ಸಂಚಾಲಕ ಬಡಗಲಪುರ ನಾಗೇಂದ್ರ

ಮೈಸೂರು, ಅ.25(ಆರ್‌ಕೆಬಿ)– ಉದ್ಯೋಗ ಸೃಷ್ಟಿ ನೆಪದಲ್ಲಿ ರಾಜ್ಯದ ಫಲವತ್ತಾದ ಕೃಷಿ ಭೂಮಿ, ನೀರು, ವಿದ್ಯುತ್ ಅನ್ನು ಖಾಸಗಿ ಕಂಪನಿಗಳಿಗೆ ನೀಡಲು ನಡೆಸುತ್ತಿರುವ ಜಾಗತಿಕ ಬಂಡವಾಳ ಹೂಡಿಕೆದಾರರ ಸಮಾವೇಶ ವಿರೋಧಿಸಿ ನ.2 ರಂದು ಬೆಂಗಳೂರಿನ ಫ್ರೀಡಂ ಪಾರ್ಕ್‌ನಲ್ಲಿ ಬೃಹತ್ ಸಮಾವೇಶ ಆಯೋಜಿಸಲಾಗಿದೆ ಎಂದು ಸಂಯುಕ್ತ ಹೋರಾಟ ಕರ್ನಾಟಕದ ಸಂಯೋಜಕ ಬಡಗಲಪುರ ನಾಗೇಂದ್ರ ತಿಳಿಸಿದರು.

ಮೈಸೂರು ಪತ್ರಕರ್ತರ ಭವನದಲ್ಲಿ ಮಂಗಳವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿ, ನ.2 ರಿಂದ 4 ರವರೆಗೆ ಬೆಂಗಳೂರಿನಲ್ಲಿ ನಡೆಯುತ್ತಿರುವ ಜಾಗತಿಕ ಬಂಡವಾಳ ಹೂಡಿಕೆದಾರರ ಸಮಾವೇಶ ರಾಜ್ಯಕ್ಕೆ ಹೊಸತಲ್ಲ. ಈ ಹಿಂದೆಯೂ ಇಂತಹ ಸಮಾವೇಶ ನಡೆದಿವೆ. ಸಾಮಾನ್ಯವಾಗಿ ಚುನಾವಣೆಗಳು ಸಮೀಪಿಸುತ್ತಿರುವ ಸಮಯದಲ್ಲಿ ಇಂತಹ ಸಮಾವೇಶ ಸಂಘಟಿಸಿ, ಲಕ್ಷ ಲಕ್ಷ ಕೋಟಿ ಬಂಡವಾಳ ಹೂಡಿಕೆಯಾಗುತ್ತಿದೆ. ಇದರ ಫಲವಾಗಿ ಇಷ್ಟು ಲಕ್ಷ ಜನರಿಗೆ ಉದ್ಯೋಗ ಸೃಷ್ಟಿಯಾಗಲಿದೆ, ಇದರಿಂದ ರಾಜ್ಯದ ಯುವಜನರಿಗೆ ಉದ್ಯೋಗ ಸಿಗುತ್ತದೆ ಎಂದು ಅಬ್ಬರದ ಪ್ರಚಾರ ಮಾಡಲಾಗುತ್ತದೆ. ಈ ರೀತಿ ಭ್ರಮೆ ಸೃಷ್ಟಿಸಲಾಗುತ್ತದೆ ಎಂದು ಆರೋಪಿಸಿದರು.



ವಾಸ್ತವದಲ್ಲಿ ಇಂತಹ ಹೂಡಿಕೆ ದಾರರ ಸಮಾವೇಶಗಳಿಂದ ರಾಜ್ಯದ ಅಭಿವೃದ್ಧಿ, ಉದ್ಯೋಗ ಸೃಷ್ಟಿಗೆ ಅನುಕೂಲ ವಾಗುವ ಬದಲು ಕಾರ್ಪೊರೇಟ್ ಕಂಪನಿಗಳು, ಏಜೆಂಟರಿಗೆ ಲಾಭವಾಗುತ್ತದೆ. ಅಲ್ಲದೆ, ಒಂದು ಕಡೆ ರೈತರು ತಮ್ಮ ಭೂಮಿ ಕಳೆದುಕೊಳ್ಳುತ್ತಾರೆ. ಕಾರ್ಮಿಕರ ಶೋಷಣೆ ಇನ್ನಷ್ಟು ಹೆಚ್ಚುತ್ತದೆ ಎಂದು ದೂರಿದರು.

ಹೀಗಾಗಿ ಇಂತಹ ಹೂಡಿಕೆದಾರರ ಸಮಾವೇಶ ಅಗತ್ಯವಿಲ್ಲ. ಬಲಾತ್ಕಾರವಾಗಿ ಭೂಮಿ ಕಸಿದುಕೊಳ್ಳಬಾರದು. ರೈತರು, ದಲಿತರ ಸ್ವಾಧೀನದಲ್ಲಿರುವ ಕೃಷಿ ಭೂಮಿ ಸಕ್ರಮಗೊಳಿಸಬೇಕು. ಅತಿವೃಷ್ಟಿಯಿಂದ ನಷ್ಟಕ್ಕೀಡಾದವರಿಗೆ ಕೂಡಲೇ ಸೂಕ್ತ ಪರಿಹಾರ ನೀಡಬೇಕು. ವಿದ್ಯುತ್ ಕ್ಷೇತ್ರದ ಖಾಸಗೀಕರಣ ನಿಲ್ಲಬೇಕು. ಕಾರ್ಪೊರೇಟ್ ಕಂಪನಿಗಳಿಗೆ ಅನುಕೂಲವಾಗುವ ರೀತಿ ಕಾರ್ಮಿಕ ಕಾಯ್ದೆಗಳಿಗೆ ತಿದ್ದುಪಡಿ ತರಬಾರದು ಎಂದು ಒತ್ತಾಯಿಸಿ ಹಾಗೂ ಕೇಂದ್ರ, ರಾಜ್ಯ ಸರ್ಕಾರಗಳ ರೈತ, ಕಾರ್ಮಿಕ ವಿರೋಧಿ ನೀತಿಗಳ ವಿರುದ್ಧ ಪ್ರತಿಭಟನಾ ಸಮಾವೇಶ ಹಮ್ಮಿಕೊಳ್ಳಲಾಗುತ್ತಿದೆ ಎಂದು ತಿಳಿಸಿದರು.

ಸುದ್ದಿಗೋಷ್ಠಿಯಲ್ಲಿ ರೈತಸಂಘದ ಪದಾಧಿಕಾರಿಗಳಾದ ಹೊಸೂರು ಕುಮಾರ್, ಹೊಸಕೋಟೆ ಬಸವರಾಜು, ಪಿ.ಮರಂಕಯ್ಯ ಉಪಸ್ಥಿತರಿದ್ದರು.

ತಂಬಾಕಿಗೆ ಸೂಕ್ತ ದರ ನಿಗದಿಗೆ ಆಗ್ರಹ

ಮೈಸೂರು, ಅ.25(ಆರ್‌ಕೆಬಿ)– ತಂಬಾಕು ಬೆಳೆದ ರೈತರು ಸೂಕ್ತ ಮಾರುಕಟ್ಟೆಯಿಲ್ಲದೆ ತೊಂದರೆಗೀಡಾಗಿದ್ದು, ಸರ್ಕಾರ ಮತ್ತು ತಂಬಾಕು ಮಂಡಳಿ ರೈತರ ನೆರವಿಗೆ ಧಾವಿಸಬೇಕು. ಸೂಕ್ತ ದರ ಸಿಗುವ ರೀತಿಯಲ್ಲಿ ನೆರವಾಗುವಂತೆ ರೈತಸಂಘದ ಮೈಸೂರು ಜಿಲ್ಲಾಧ್ಯಕ್ಷ ಹೊಸೂರು ಕುಮಾರ್ ಆಗ್ರಹಿಸಿದ್ದಾರೆ.

'ಮೈಸೂರು ಮಿತ್ರ'ನೊಂದಿಗೆ ಮಾತನಾಡಿದ ಅವರು, ಅ.10ರಂದು ಆರಂಭವಾದ ತಂಬಾಕು ಮಾರುಕಟ್ಟೆಗಳಲ್ಲಿ ಪ್ರಾರಂಭದಲ್ಲಿ ಗುಣಮಟ್ಟದ ತಂಬಾಕು ಕೆಜಿಗೆ ರೂ.200ರಿಂದ ಆರಂಭವಾದ ಹರಾಜು ಪ್ರಕ್ರಿಯೆ ರೂ.275ರವರೆಗೂ ಹರಾಜಾಗಿತ್ತು ಒಳ್ಳೆ ಮಾರುಕಟ್ಟೆ ಬೆಲೆ ಸಿಕ್ಕಿತೆಂದು ರೈತರು ಸಂತೋಷಪಡುವಷ್ಟರಲ್ಲಿ ಏಕಾಏಕಿ 35ರಿಂದ 40ರೂ.ಗಳಷ್ಟು ಕಡಿಮೆಯಾಯಿತು. ಇದರಿಂದಾಗಿ ರೈತರು ಪ್ರತಿಭಟನೆ ನಡೆಸಿದ್ದರಿಂದ ಮಾರುಕಟ್ಟೆ ಬಂದ್ ಆಯಿತು. ನಂತರ ಇತ್ತೀಚೆಗೆ ನಡೆದ ಮಂಡಳಿ ಅಧಿಕಾರಿಗಳು, ವರ್ತಕರು ಮತ್ತು ರೈತರ ನಡುವಿನ ಮಾತುಕತೆಯಿಂದ ಯಥಾಸ್ಥಿತಿ ಕಾಪಾಡಿಕೊಂಡು ಹೋಗುವ ತೀರ್ಮಾನವಾಗಿತ್ತು.

ಆದರೆ, ಮಾರುಕಟ್ಟೆಗಳಲ್ಲಿ ಹರಾಜಾಗದೆ ಉಳಿದಿದ್ದ ತಂಬಾಕು ಬೇಲ್‌ಗಳು ಶೀತ ವಾತಾವರಣದಿಂದ ಕೆಡುವ ಸ್ಥಿತಿಗೆ ಬಂದಿದ್ದರಿಂದ ಮಾರುಕಟ್ಟೆಗಳಲ್ಲಿ ಉಳಿದಿರುವ ತಂಬಾಕು ಕುರಿತಂತೆ ಮಂಡಳಿ ಮತ್ತು ರೈತರು ಒಂದು ನಿರ್ಧಾರಕ್ಕೆ ಬಂದಿದ್ದರಿಂದ ಇತ್ತೀಚೆಗೆ ಹರಾಜು ಪ್ರಕ್ರಿಯೆ ನಡೆದು, 250 ರೂ.ಗಳಿಗೆ ಖರೀದಿ ನಡೆದಿತ್ತು.

ಈಗ ರೈತರು ಮಂಡಳಿಗೆ ಮೂರು ಬೇಡಿಕೆಗಳನ್ನು ಮುಂದಿಟ್ಟಿದ್ದು, ತಂಬಾಕಿಗೆ ಪ್ರತಿ ಕೆಜಿಗೆ ರೂ.250ಕ್ಕಿಂತ ಹೆಚ್ಚು ನಿಗದಿಯಾಗಬೇಕು. ಕಡಿಮೆ ಗುಣಮಟ್ಟದ ತಂಬಾಕಿಗೆ ಯಾವುದೇ ಕಾರಣಕ್ಕೂ 200 ರೂ.ಗಳಿಗಿಂತ ಕಡಿಮೆಗೆ ಇಳಿಯದಂತೆ ನೋಡಿಕೊಳ್ಳಬೇಕು. ಒಟ್ಟಾರೆ ತಂಬಾಕು ಸರಾಸರಿ ದರ ರೂ. 225ಕ್ಕೆ ಕಡಿಮೆ ಆಗಬಾರದು. ಹಾಗೇನಾದರೂ ರೈತರಿಗೆ ನಷ್ಟವಾಗುವಂತೆ ನಡೆದುಕೊಂಡರೆ ರೈತರು ಮಂಡಳಿ ವಿರುದ್ಧ ಪ್ರತಿಭಟನೆ ಹಮ್ಮಿಕೊಳ್ಳಬೇಕಾಗುತ್ತದೆ ಎಂದು ಹೊಸೂರು ಕುಮಾರ್ ಎಚ್ಚರಿಕೆ ನೀಡಿದ್ದಾರೆ.

ಶಾಸಕ ಸಾರಾ ಸಮ್ಮುಖದಲ್ಲಿ 'ಕೈ' ಮುಖಂಡರು ಜೆಡಿಎಸ್ ಸೇರ್ಪಡೆ

ಭೇರ್ಯ, ಅ.25– ನೊಂದವರಿಗೆ, ಬಡವರಿಗೆ ಸಹಾಯ ಮಾಡುವ ಜೊತೆಗೆ ಅವರ ತಾಲೂಕಿನಲ್ಲಿ ಸಮಗ್ರ ನೀರಾವರಿ ಯೋಜನೆ ಕೈಗೊಂಡಿರುವುದನ್ನು ಮನಗಂಡು ಶಾಸಕ ಸಾ.ರಾ.ಮಹೇಶ್ ಬೆಂಬಲಿಸಬೇಕೆಂದು ತೀರ್ಮಾನಿಸಿ, ಕಾಂಗ್ರೆಸ್ ತೊರೆದು ಜೆಡಿಎಸ್ ಸೇರುತ್ತಿದ್ದೇವೆ ಎಂದು ಎಲೆಮುದ್ದನಹಳ್ಳಿ ಗ್ರಾಮದ ವೀರಶೈವ ಮುಖಂಡ ಹಾಗೂ ಗ್ರಾಪಂ ಮಾಜಿ ಸದಸ್ಯ ಉರಿಲಿಂಗಪ್ಪ ತಿಳಿಸಿದರು.

ಸಾಲಿಗ್ರಾಮ ತಾಲೂಕಿನ ಎಲೆಮುದ್ದನಹಳ್ಳಿಯಲ್ಲಿ ಆಯೋಜಿಸಿದ್ದ ವೀರಶೈವ, ದಲಿತ ಹಾಗೂ ಮಡಿವಾಳ ಸಮಾಜದ 65 ಮುಖಂಡರ ಕಾಂಗ್ರೆಸ್ ತೊರೆದು ಜೆಡಿಎಸ್ ಸೇರ್ಪಡೆ ಕಾರ್ಯಕ್ರಮದಲ್ಲಿ ಮಾತನಾಡಿದ ಅವರು, ಶಾಸಕ ಸಾ.ರಾ.ಮಹೇಶ್ ಅವರ ಜನಪರ ಕಾರ್ಯವನ್ನು ಎಲ್ಲರು ಮೆಚ್ಚಬೇಕು. 3 ಬಾರಿ ಶಾಸಕರಾಗಿ, ಸಚಿವರಾಗಿ ಅವರಿ ತಾಲೂಕಿಗೆ ಸಾಕಷ್ಟು ಅನುದಾನ ತಂದು ಅಭಿವೃದ್ಧಿ ಮಾಡಿದ್ದಾರೆ. ತಾಲೂಕಿನ ಅತಿ ಸೂಕ್ಷ್ಮಾತಿ ಸೂಕ್ಷ್ಮ ಸಮಾಜಗಳಿಗೆ ಬೆನ್ನೆಲುಬಾಗಿ ನಿಂತಿದ್ದಾರೆ. ಯಾವುದೇ ಗಲಾಟೆ, ಘರ್ಷಣೆಗೆ ಅವಕಾಶ ಕೊಡದೆ 14 ವರ್ಷಗಳ ಕಾಲ ಶಾಸಕರಾಗಿ ಉತ್ತಮ ಆಡಳಿತ ನೀಡುತ್ತಾ ಬಂದಿದ್ದಾರೆ. ಇಂತಹ ಶಾಸಕರನ್ನು ಮತ್ತೊಮ್ಮೆ ಆಯ್ಕೆ ಮಾಡುವುದು ನಮ್ಮೆಲ್ಲರಿಗೂ ಹೆಮ್ಮೆ ಎಂದರು.

ಕೆ.ಆರ್.ನಗರ ತಾಲೂಕು ವೀರಶೈವ ಲಿಂಗಾಯತ ಯುವ ವೇದಿಕೆ ಸಂಚಾಲಕ ಮಂಜುನಾಥ್ ಮಾತನಾಡಿ, ಶಾಸಕ ಸಾ.ರಾ.ಮಹೇಶ್ ಮಾಡಿರುವಷ್ಟು ಸಮಾಜ ಸೇವೆಯನ್ನು ಬೇರೆ ಯಾವ ಮುಖಂಡರು ಮಾಡಲು ಸಾಧ್ಯವಿಲ್ಲ. ನಮ್ಮ ಗ್ರಾಮದ ವೀರಶೈವ ಸಮಾಜದ ಲೋಕೇಶ್ ಅವರ ಪುತ್ರ ಪ್ರವೀಣ್ ಕುಮಾರ್ ಅಪಘಾತದಲ್ಲಿ ತೀವ್ರ ಗಾಯಗೊಂಡು ಮೈಸೂರಿನ ಖಾಸಗಿ ಆಸ್ಪತ್ರೆಗೆ ದಾಖಲಾಗಿದ್ದರು. ಈ ವೇಳೆ ವಿಷಯ ತಿಳಿದು ಚಿಕಿತ್ಸೆಗಾಗಿ ಆರ್ಥಿಕ ನೆರವು ನೀಡಿದರು. ಅಲ್ಲದೇ ಮನೆಗೆ ಭೇಟಿ ನೀಡಿ ಆರೋಗ್ಯ ವಿಚಾರಿಸಿದರು. ಇದು ಮಾನವೀಯತೆ ಅಲ್ಲವೇ ಇಂತಹವರು ನಮ್ಮ ಶಾಸಕರಾಗಿರುವುದೇ ನಮ್ಮ ಭಾಗ್ಯ ಎಂದರು.

ಇದಕ್ಕೂ ಮುನ್ನಾ ಶಾಸಕ ಸಾ.ರಾ.ಮಹೇಶ್ ಅವರಿಗೆ ಭಾರೀ ಗಾತ್ರದ ಸೇಬಿನ ಹಾರ ಹಾಕಿ ಅಭಿನಂದಿಸಲಾಯಿತು.

ಇದೇ ವೇಳೆ ಎಲೆಮುದ್ದನಹಳ್ಳಿ ಗ್ರಾಮದ ಮುಖಂಡರಾದ ನಂದೀಶ, ಶಿವಣ್ಣ, ಕೀರ್ತಿ, ಕರಣ, ಸಂತೋಷ್, ರೂಪೇಶ್, ನವೀನ, ಅಂಗಡಿ ನಾಗೇಶ್, ಮಡಿವಾಳ ಸಮಾಜದ ಕುಮಾರ್, ಅಣ್ಣಯ್ಯ ಶೆಟ್ಟಿ, ಮರಿಶೆಟ್ಟಿ, ರಾಘು, ಚೆನ್ನಶೆಟ್ಟಿ, ಭರತ್, ಪಾಪು, ದೇವರಾಜ್, ಪ್ರವೀಣ, ಮಂಜು, ದಲಿತ ಮುಖಂಡರಾದ ನಾಗೇಶ್, ಸಂತೋಷ್, ವಿನಯ್, ವಿಶಾಲಚೇತನ ಸತೀಶ್, ಕೆಂಪು ಶಿವಣ್ಣ ಸೇರಿದಂತೆ 65 ಮಂದಿ ಮುಖಂಡರು ಕಾಂಗ್ರೆಸ್ ತೊರೆದು ಜೆಡಿಎಸ್ ಪಕ್ಷಕ್ಕೆ ಸೇರ್ಪಡೆಗೊಂಡರು.

ಈ ವೇಳೆ ಜಿಪಂ ಮಾಜಿ ಉಪಾಧ್ಯಕ್ಷ ಚೆನ್ನಬಸಪ್ಪ, ರಾಜ್ಯ ಜೆಡಿಎಸ್ ಘಟಕದ ಪ್ರಧಾನ ಕಾರ್ಯದರ್ಶಿ ಚಂದ್ರಶೇಖರ್, ಪುರಸಭಾ ಸದಸ್ಯ ಕೆ.ಪಿ.ಪ್ರಭುಶಂಕರ್, ತಾಲೂಕು ಜೆಡಿಎಸ್ ಪ್ರಧಾನ ಕಾರ್ಯದರ್ಶಿ ಮಹೇಶ್, ಜೆಡಿಎಸ್ ತಾಲೂಕು ಅಧ್ಯಕ್ಷ ಮೆಡಿಕಲ್ ರಾಜಣ್ಣ ವಕ್ತಾರ ಕೆ.ಎಲ್.ರಮೇಶ್, ಎಪಿಎಂಸಿ ಮಾಜಿ ರಾಜಣ್ಣ, ತಾಪಂ ಮಾಜಿ ಉಪಾಧ್ಯಕ್ಷೆ ನೀಲಮ್ಮ, ನಿವೃತ್ತ ಶಿಕ್ಷಕ ಪ್ರಕಾಶ್, ಜೆಡಿಎಸ್ ಮುಖಂಡರಾದ ನಾಗೇಂದ್ರ ಇತರರಿದ್ದರು.



ನಿಮ್ಮ ಪ್ರೀತಿ ವಿಶ್ವಾಸದಿಂದ ಕೆ.ಆರ್.ನಗರ ವಿಧಾನಸಭಾ ಕ್ಷೇತ್ರದಲ್ಲಿ 3 ಬಾರಿ ಶಾಸಕನಾಗಿ ಆಯ್ಕೆಯಾಗಿದ್ದೇನೆ. ನನ್ನನ್ನು ತಾಲೂಕಿನ ಜನತೆ ಮನೆಮಗ, ಅಣ್ಣ ತಮ್ಮನಂತೆ ಕಂಡಿದ್ದಾರೆ. ಗ್ರಾಮದ ಯಾವುದೇ ಸಮಸ್ಯೆಗಳಿದ್ದರೂ, ವಾರದ 5 ದಿನ ಕ್ಷೇತ್ರದ ಯಾವುದಾದರೂ ಒಂದು ಗ್ರಾಮದಲ್ಲಿರುತ್ತೇನೆ. ಈ ವೇಳೆ ಸಂಪರ್ಕ ಮಾಡಿದರೆ ಸಮಸ್ಯೆ ಬಗೆಹರಿಸಲು ಪ್ರಯತ್ನಿಸುತ್ತೇನೆ.
- ಸಾ.ರಾ.ಮಹೇಶ್, ಶಾಸಕ.

ಡಿಆರ್‌ಸಿ ಸಿನಿಮಾಸ್
ದೂ : 4240422/4241800

ಸ್ಕ್ರೀನ್ 1	ಕಾಂತಾರ (ಕ): ಬೆ.10.20ಕ್ಕೆ, ಮ.1.15ಕ್ಕೆ, ಸಂ.4.15ಕ್ಕೆ, ರಾ.7.15ಕ್ಕೆ, ರಾ.10.15ಕ್ಕೆ
ಸ್ಕ್ರೀನ್ 2	ಹೆಡ್ ಬುಷ್(ಕ): ಬೆ.8ಕ್ಕೆ, 10.45ಕ್ಕೆ, ಮ.1.30ಕ್ಕೆ, ಕಾಂತಾರ (ಕ): ಸಂ.4.15ಕ್ಕೆ, ಹೆಡ್ ಬುಷ್(ಕ): ಸಂಜೆ 7.15ಕ್ಕೆ, ಮಾನ್ಸ್ಟರ್(ಮ): ರಾ. 10ಕ್ಕೆ
ಸ್ಕ್ರೀನ್ 3	ಹೆಡ್ ಬುಷ್(ಕ): ಬೆ.8.05ಕ್ಕೆ ಬ್ಲ್ಯಾಕ್ ಆಡಮ್ (ಇ): ಬೆ.10.45ಕ್ಕೆ, ರಾತ್ರಿ 7.20ಕ್ಕೆ, 9.55ಕ್ಕೆ, ಸರ್ದಾರ್ (ತ): ಮ.1.15ಕ್ಕೆ, ಪ್ರಿನ್ಸ್(ತ): ಸಂ.4.30ಕ್ಕೆ,
ಸ್ಕ್ರೀನ್ 4	ಕಾಂತಾರ (ಕ): ಬೆ.10.10ಕ್ಕೆ, ರಾ.10ಕ್ಕೆ ಪ್ರಿನ್ಸ್ (ತ): ಮ.1.10ಕ್ಕೆ, ಸಂ.4.5ಕ್ಕೆ, ಸರ್ದಾರ್ (ತ): ಸಂ 6.55ಕ್ಕೆ

ಐನಾಕ್ಸ್ ಮೂವೀಸ್
INOX LIVE THE MOVIE
ದೂ : 2533444 / 2433456

ಸ್ಕ್ರೀನ್ 1	ಕಾಂತಾರ (ಕ): ಬೆ.9.10ಕ್ಕೆ, ಮ.12.15ಕ್ಕೆ, ಮ.3.20ಕ್ಕೆ, ಸಂ.6.25ಕ್ಕೆ, ರಾ.9.30ಕ್ಕೆ
ಸ್ಕ್ರೀನ್ 2	ಕಾಂತಾರ (ಕ): ಬೆ.10ಕ್ಕೆ, ಮ.1.05ಕ್ಕೆ, ಸಂ.4.10ಕ್ಕೆ, ರಾ.7.15ಕ್ಕೆ, ರಾ.10.30ಕ್ಕೆ
ಸ್ಕ್ರೀನ್ 3	ಹೆಡ್ ಬುಷ್ (ಕ): ಬೆ.11.30ಕ್ಕೆ, ಸ.5ಕ್ಕೆ, ರಾ.10.30ಕ್ಕೆ ಬ್ಲ್ಯಾಕ್ ಆಡಮ್ (ಇ): ಬೆ.9ಕ್ಕೆ, ಮ.2.20ಕ್ಕೆ, ರಾ.7.50ಕ್ಕೆ
ಸ್ಕ್ರೀನ್ 4	ಪ್ರಿನ್ಸ್ (ತ): ಬೆ.9.55ಕ್ಕೆ, ರಾ.7.10ಕ್ಕೆ ಕಾಂತಾರ (ಕ): ಮ.12.45ಕ್ಕೆ, ಸರ್ದಾರ್ (ತ): ಮ.3.50ಕ್ಕೆ, ರಾ. 10.10ಕ್ಕೆ

ಮೈಸೂರು ವಿಷನ್ ಸಿನಿಮಾ
ದೂ : 0821–2973519

ಸ್ಕ್ರೀನ್ 1	ಭೂ ನಾಟಕ ಮಂಡಳಿ(ಕ): ಬೆ.10.20ಕ್ಕೆ, ಸರ್ದಾರ್ (ತ): ಮ.12.40ಕ್ಕೆ, ಪ್ರಿನ್ಸ್ (ತ): ಮ.3.50ಕ್ಕೆ, ಸಂ. 6.40ಕ್ಕೆ ಮಾನ್ಸ್ಟರ್ (ಮ): ರಾ.9.30ಕ್ಕೆ
ಸ್ಕ್ರೀನ್ 2	ಕಾಂತಾರ (ಕ): ಬೆ.10.15ಕ್ಕೆ, ಸಂ. 4ಕ್ಕೆ, ಹೆಡ್ ಬುಷ್ (ಕ): ಮ.1.10ಕ್ಕೆ, ಸಂ.7ಕ್ಕೆ, ರಾ.9.45ಕ್ಕೆ.
ಸ್ಕ್ರೀನ್ 3	ಹೆಡ್ ಬುಷ್ (ಕ): ಬೆ.10ಕ್ಕೆ, ಮ.3.55ಕ್ಕೆ, ಕಾಂತಾರ (ಕ): ಮ.1ಕ್ಕೆ, ಸ.6.40ಕ್ಕೆ, 9.45ಕ್ಕೆ
ಸ್ಕ್ರೀನ್ 4	ಕಥಾನಾಯಕ (ಕ): ಬೆ.10.15ಕ್ಕೆ, ಪ್ರಿನ್ಸ್ (ತ): ಮ.1ಕ್ಕೆ, ಸರ್ದಾರ್ (ತ): ಮ. 3.55ಕ್ಕೆ, ಮಾನ್ಸ್ಟರ್ (ಮ): ಸಂ.7.05ಕ್ಕೆ, ಸರ್ದಾರ್ (ತ): ರಾ. 9.45ಕ್ಕೆ

ಪಿವಿಆರ್ ಸಿನಿಮಾಸ್
ಮೊ.ನಂ: 8951357139
ನೆಕ್ಸಸ್ ಸೆಂಟರ್‌ಸಿಟಿ ಮಾಲ್, 2ನೇ ಮಹಡಿ,

ಕಾಂತಾರ (ಕ): ಬೆ.9.20ಕ್ಕೆ, ಮ.12.30ಕ್ಕೆ, ಮ.1ಕ್ಕೆ, ಮ.3.40ಕ್ಕೆ, ಸಂ.6.35ಕ್ಕೆ, ರಾ.9.45ಕ್ಕೆ, ದಿ ಬ್ಲ್ಯಾಕ್ ಆಡಮ್ (ಇ): ಬೆ.9.55ಕ್ಕೆ, ಮ.12.45ಕ್ಕೆ, ಸ.7.05ಕ್ಕೆ, ರಾ.9.50ಕ್ಕೆ, ಪ್ರಿನ್ಸ್ (ತ): ಮ.12.40ಕ್ಕೆ, ರಾ.7.10ಕ್ಕೆ ಸರ್ದಾರ್ (ತ): ಬೆ. 9.15ಕ್ಕೆ ಮ.3.45ಕ್ಕೆ,

ಸೂಚನೆ : ಸಿನಿಮಾ ಮಾರ್ಗದರ್ಶಿಯಲ್ಲಿ ಮಾಹಿತಿಯನ್ನು ಪರಿಪೂರ್ಣಗೊಳಿಸಲು ನಾವು ಸಾಧ್ಯವಾದಷ್ಟೂ ಪ್ರಯತ್ನಿಸುತ್ತಿದ್ದೇವೆ. ಆದರೂ ಕೆಲವೊಮ್ಮೆ ಮಾಹಿತಿ ಅಲಭ್ಯತೆಯಿಂದ ಲೋಪಗಳು ಉಂಟಾಗುವ ಸಾಧ್ಯತೆಯಿದ್ದು, ಸಾರ್ವಜನಿಕರು ಸಹಕರಿಸಬೇಕಾಗಿ ಕಳಕಳಿ ಮನವಿ.

ಪದ್ಮ ಚಿತ್ರಮಂದಿರ	(ದೂ: 2521923)
ಗುರು ಶಿಷ್ಯರು (ಕ)	4 ಪ್ರದರ್ಶನಗಳು
ವುಡ್‌ಲ್ಯಾಂಡ್ಸ್ ಚಿತ್ರಮಂದಿರ	(ದೂ: 2422871)
ಕಾಂತಾರ (ಕ)	4 ಪ್ರದರ್ಶನಗಳು
ಉಮಾ ಚಿತ್ರಮಂದಿರ	(ದೂ: 2520009)
ಮಿಸ್ ಮಲ್ಲಿಗೆ (ಕ)	4 ಪ್ರದರ್ಶನಗಳು
ಬಾಲಾಜಿ ಚಿತ್ರಮಂದಿರ	(ದೂ: 2497199)
ಥ್ಯಾಂಕ್ ಗಾಡ್ (ಹಿ)	4 ಪ್ರದರ್ಶನಗಳು
ಮಹದೇಶ್ವರ ಚಿತ್ರಮಂದಿರ	(ಮೊ:9900820093)
ಕಾಂತಾರ (ಕ)	4 ಪ್ರದರ್ಶನಗಳು
ಗಾಯಿತ್ರಿ	
ಹೆಡ್ ಅಂಡ್ ಬುಷ್ (ಕ)	4 ಪ್ರದರ್ಶನಗಳು
ರಾಜ್‌ಕಮಲ್	
ಸರ್ದಾರ್ (ತ)	4 ಪ್ರದರ್ಶನಗಳು
ಸಂಗಂ	
ಹೆಡ್ ಅಂಡ್ ಬುಷ್ (ಕ)	4 ಪ್ರದರ್ಶನಗಳು
ಲಿಡೋ	
ಹೆಡ್ ಅಂಡ್ ಬುಷ್ (ಕ)	4 ಪ್ರದರ್ಶನಗಳು
ತಿಬ್ಬಾದೇವಿ	
ಹೆಡ್ ಅಂಡ್ ಬುಷ್ (ಕ)	4 ಪ್ರದರ್ಶನಗಳು
ಪ್ರಭಾ	
ಪ್ರಿನ್ಸ್ (ತ)	4 ಪ್ರದರ್ಶನಗಳು

ಗಾವಡಗೆರೆಯಲ್ಲಿ ಅದ್ದೂರಿ ಶ್ರೀ ಕಾಲಭೈರವೇಶ್ವರಸ್ವಾಮಿ ಉತ್ಸವ



ಹಿರೀಕ್ಯಾತನಹಳ್ಳಿ, ಅ.25– ಇಲ್ಲಿಗೆ ಸಮೀಪದ ಗಾವಡಗೆರೆಯಲ್ಲಿ ದೀಪಾವಳಿ ಹಬ್ಬದ ಅಮಾವಾಸ್ಯೆ ಪ್ರಯುಕ್ತ ಶ್ರೀಕಾಲಭೈರವೇಶ್ವರಸ್ವಾಮಿ ಉತ್ಸವ ಅದ್ದೂರಿಯಾಗಿ ನಡೆಯಿತು.

ಉತ್ಸವದ ಅಂಗವಾಗಿ ಮುಂಜಾನೆಯೇ ಶ್ರೀಕಾಲಭೈರವೇಶ್ವರಸ್ವಾಮಿಗೆ ಅಭಿಷೇಕ, ಹೋಮ–ಹವನ, ಪೂಜಾ ಕೈಂಕರ್ಯ ನೆರವೇರಿಸಲಾಯಿತು. ನಂತರ ಗ್ರಾಮದ ಕೆರೆಯಿಂದ ವಿಶೇಷವಾಗಿ ಅಲಂಕರಿಸಿದ್ದ ಸ್ವಾಮಿ ಉತ್ಸವ ಮೂರ್ತಿಯನ್ನು ನೂರಾರು ಕಳಸ ಹೊತ್ತ ಮಹಿಳೆಯರೊಂದಿಗೆ ಗುಡ್ಡಕುಣಿತ, ತಮಟೆ ವಾದ್ಯ, ಡೊಳ್ಳು ಕುಣಿತ, ಮಂಗಳವಾದ್ಯ ಸೇರಿದಂತೆ ಇನ್ನಿತರ ಕಲಾ ಪ್ರಕಾರದೊಂದಿಗೆ ಗ್ರಾಮದ ಪ್ರಮುಖ ಬೀದಿಗಳಲ್ಲಿ ಮೆರವಣಿಗೆ ಮಾಡಲಾಯಿತು. ಈ ವೇಳೆ ಭಕ್ತರು ಸ್ವಾಮಿಗೆ ಉದ್ಘೋಷಗಳನ್ನು ಕೂಗಿ ಭಕ್ತಿಭಾವ ಮೆರೆದರು.

ನಂತರ ದೇವಸ್ಥಾನದಲ್ಲಿ ಸರತಿ ಸಾಲಿನಲ್ಲಿ ನಿಂತ ಸಾವಿರಾರು ಭಕ್ತರು ದೇವರ ದರ್ಶನ ಪಡೆದು ಪುನೀತರಾದರು. ಮಧ್ಯಾಹ್ನ ಅನ್ನಸಂತರ್ಪಣೆ ನಡೆಯಿತು. ಸಂಜೆ ಪ್ರಥಮ ಕಾರ್ತಿಕ ಮಾಸದ ಅಂಗವಾಗಿ ದೇವಸ್ಥಾನದಲ್ಲಿ ಸಾವಿರಾರು ಹಣತೆ ಹಚ್ಚುವ ಮೂಲಕ ದೀಪೋತ್ಸವಕ್ಕೆ ಮೆರಗು ನೀಡಿದರು. ಉತ್ಸವದಲ್ಲಿ ಸಮಿತಿ ಪದಾಧಿಕಾರಿಗಳಾದ ವಿಠಲ್‌ರಾವ್ ಪವಾರ್, ಹೊನ್ನಪ್ಪ ರಾವ್ ಕಾಳಿಂಗೆ, ಜಿ.ವಿ.ಶ್ರೀನಾಥ್, ಮದನ್ ಬೊದೆ, ಗ್ರಾಪಂ ಸದಸ್ಯರಾದ ಮಧುಮತಿ ಬಾಯಿ, ಶ್ರೀನಾಥ್.ಪಿ ಹಾಗೂ ರುಕ್ಮಾಂಗದ ರಾವ್ ಪವಾರ್, ಭರತ್ ಬೊದೆ, ಸೇರಿದಂತೆ ಭಕ್ತರು ಹಾಜರಿದ್ದರು.

ಜಾನುವಾರುಗಳ ಚರ್ಮಗಂಟು ರೋಗದ ಬಗ್ಗೆ ಎಚ್ಚರ ವಹಿಸಿ

ರೈತರಿಗೆ ಪಶು ಸಂಗೋಪನಾ ಇಲಾಖೆ ಸಹಾಯಕ ನಿರ್ದೇಶಕ ಡಾ.ಲಿಂಗರಾಜು ಸಲಹೆ



ತಿ.ನರಸೀಪುರ, ಅ.25– ಇತ್ತೀಚೆಗೆ ಜಾನುವಾರುಗಳಲ್ಲಿ ಕಂಡು ಬರುತ್ತಿರುವ ಚರ್ಮಗಂಟು ರೋಗ ನಮ್ಮ ತಾಲೂಕಿನಲ್ಲೂ ಕಾಣಿಸಿಕೊಳ್ಳುವ ಸಾಧ್ಯತೆಯಿದೆ. ಈ ಖಾಯಿಲೆಯಿಂದ ರಾಸುಗಳ ಮರಣ ಪ್ರಮಾಣ ಶೇ.5 ರಷ್ಟಿದ್ದು, ಈ ಬಗ್ಗೆ ರೈತರು ಎಚ್ಚರ ವಹಿಸಬೇಕು ಎಂದು ಪಶು ಸಂಗೋಪನಾ ಇಲಾಖೆ ಸಹಾಯಕ ನಿರ್ದೇಶಕ ಡಾ.ಲಿಂಗರಾಜು ತಿಳಿಸಿದರು.

ಪಟ್ಟಣದ ತಮ್ಮ ಕಚೇರಿಯಲ್ಲಿ ಮಾತನಾಡಿದ ಅವರು, ಜಾನುವಾರುಗಳಲ್ಲಿ ಕಂಡುಬರುವ ಈ ಕಾಯಿಲೆ ಮನುಷ್ಯನಿಗೆ ಹರಡುವ ಸಾಧ್ಯತೆ ಇಲ್ಲ ಎಂದು ಸ್ಪಷ್ಟಪಡಿಸಿದ ಅವರು, ಈ ಖಾಯಿಲೆ ಬಗ್ಗೆ ತಾಲೂಕಿನ ರೈತರಲ್ಲಿ ಅರಿವು ಮೂಡಿಸುತ್ತಿದ್ದು, ಹಾಲು ಉತ್ಪಾದಕರ ಸಹಕಾರ ಸಂಘಗಳ ಮುಖೇನ ರೈತರಿಗೆ ರೋಗದ ಬಗ್ಗೆ ಮಾಹಿತಿ ನೀಡಲಾಗುತ್ತಿದೆ. ಖಾಯಿಲೆಯು ನೊಣ, ಸೊಳ್ಳೆ ಮತ್ತು ಉಣ್ಣೆಗಳಿಂದ ಹರಡಬಹುದು ಎಂದು ಅಂದಾಜಿಸಲಾಗಿದೆ ಎಂದು.

ಖಾಯಿಲೆ ನಿಯಂತ್ರಣದ ಬಗ್ಗೆ ತಾಪಂ ಇಓಗಳಿಗೆ ಪತ್ರ ಬರೆದಿದ್ದು, ಎಲ್ಲಾ ಗ್ರಾಪಂ ವ್ಯಾಪ್ತಿಯ ಕೊಟ್ಟಿಗೆಗಳು, ನೀರು ನಿಲ್ಲುವ ಸ್ಥಳಗಳನ್ನು ಸ್ಯಾನಿಟೈಜ್ ಮಾಡುವಂತೆ ಮನವಿ ಮಾಡಲಾಗಿದೆ. ಅಲ್ಲದೆ ಜಿಲ್ಲಾಧಿಕಾರಿಗಳು ಕೂಡ ಮುಂಜಾಗ್ರತಾ ಕ್ರಮವಾಗಿ ದನಗಳ ಜಾತ್ರೆ, ಬಂಡಿ ಓಟ, ವಾರದ ದನಗಳ ಸಂತೆ ಮತ್ತು ಇನ್ನಿತರ ದನಗಳ ಸಂದಣಿ ನಿಷೇಧಿಸಿದ್ದಾರೆ. ಈಗಾಗಲೇ ತಾಲೂಕಿನ 30 ಗ್ರಾಮಗಳಲ್ಲಿ ಜಾನುವಾರುಗಳಿಗೆ 'Goat fox vaccine' ಎಂಬ ಚುಚ್ಚುಮದ್ದನ್ನು ಮುಂಜಾಗ್ರತಾ ಕ್ರಮವಾಗಿ ನೀಡಲಾಗಿದ್ದು, ಇನ್ನಿತರ ಗ್ರಾಮಗಳ ಜಾನುವಾರುಗಳಿಗೂ ತುರ್ತು ಚುಚ್ಚುಮದ್ದು ನೀಡಲಾಗುವುದು ಎಂದರು.

ರೋಗಗ್ರಸ್ತ ಜಾನುವಾರುಗಳನ್ನು ಆರೋಗ್ಯವಂತ ರಾಸುಗಳಿಂದ ಬೇರ್ಪಡಿಸುವುದು, ರಾಸುಗಳನ್ನು ಸೋಂಕಿತ ವಲಯದಿಂದ ಅನ್ಯ ಸ್ಥಳಗಳಿಗೆ ಪ್ರಯಾಣಿಸದಂತೆ ನಿಯಂತ್ರಿಸುವುದು. ರೋಗದಿಂದ ಮರಣ ಹೊಂದಿದ ರಾಸುಗಳನ್ನು ಸೂಕ್ತ ರೀತಿ ಹೂಳುವುದು ಖಾಯಿಲೆ ಹರಡದಂತೆ ಕೈಗೊಳ್ಳುವ ಮುಂಜಾಗ್ರತಾ ಕ್ರಮಗಳಾಗಿವೆ ಎಂದರು.

ರೋಗದ ಲಕ್ಷಣಗಳು

ರಾಸುಗಳಲ್ಲಿ ಅತೀ ಜ್ವರ, ಮೈ ಮೇಲೆ ಗುಂಡಾಕಾರದ ಗಂಟು, ಗಾಯ, ಕಾಲಿನಲ್ಲಿ ಊತ, ಕಣ್ಣು ಮತ್ತು ಮೂಗು ಸೋರುವುದು, ಬಾಯಿ, ಗಂಟಲು, ಶ್ವಾಸನಾಳಗಳಲ್ಲಿ ಗಾಯ, ಹಾಲಿನ ಇಳುವರಿಯಲ್ಲಿ ಗಣನೀಯ ಇಳಿಕೆ ಚರ್ಮಗಂಟು ಖಾಯಿಲೆಯ ಲಕ್ಷಣಗಳಾಗಿವೆ.

ಪರಿಹಾರ ಕ್ರಮಗಳು

ರೋಗಗ್ರಸ್ತ ಜಾನುವಾರುಗಳಿಗೆ ಗೊಂಡೆ/ಚೆಂಡು ಹೂ ಅಥವಾ ಸೇಮತಿ ಹೂವಿಗೆ ಬೇವಿನ ಸೊಪ್ಪು, ಬೆಳ್ಳುಳ್ಳಿ, ಅರಿಶಿಣ, ಪುದೀನ ಸೊಪ್ಪು, ದಾಲ್ಚಿನಿ ಚಕ್ಕೆಗಳನ್ನು ಒಟ್ಟಿಗೆ ಸೇರಿಸಿ ಅರೆದು ಗಾಯ ಮತ್ತು ಗಂಟು ಇರುವ ಜಾಗಕ್ಕೆ ಹಚ್ಚುವುದು. ಖಾಯಿಲೆ ಪ್ರಮಾಣ ಹೆಚ್ಚಿದ್ದರೆ ಆರತಿ ಕರ್ಪೂರ ಮತ್ತು ನೀಲಗಿರಿ ತೈಲವನ್ನು ಗಾಯದ ಜಾಗಕ್ಕೆ ಹಚ್ಚುಹುದು.

ಗುಣಮಟ್ಟದ ಹಾಲು ಉತ್ಪಾದನೆಗೆ ಒತ್ತು ನೀಡಲು ಸಲಹೆ



ಸರಗೂರು, ಅ.25– ಹಾಲು ಉತ್ಪಾದಕರು ಗುಣಮಟ್ಟದ ಹಾಲಿನ ಉತ್ಪಾದನೆಗೆ ಹೆಚ್ಚು ಒತ್ತು ನೀಡಬೇಕು ಎಂದು ಮೈಮುಲ್ ನಿರ್ದೇಶಕ ಕೆ.ಈರೇಗೌಡ ಸಲಹೆ ನೀಡಿದರು.

ಶ್ರೀಕ್ಷೇತ್ರ ಧರ್ಮಸ್ಥಳ ಗ್ರಾಮಾಭಿವೃದ್ಧಿ ಯೋಜನೆಯಿಂದ ಬೋರೆದೇವರಮುಂಟಿ, ಎನ್.ಬೇಗೂರು, ಬೀರಂಬಳ್ಳಿ ಗ್ರಾಮದಲ್ಲಿ ನಿರ್ಮಾಣವಾಗುತ್ತಿರುವ ಡೈರಿ ಕಟ್ಟಡ ಕಾಮಗಾರಿಗೆ ತಲಾ 1 ಲಕ್ಷ ಅನುದಾನದ ಮುಂಜೂರಾತಿ ಪತ್ರ ವಿತರಣಾ ಕಾರ್ಯಕ್ರಮದಲ್ಲಿ ಮಾತನಾಡಿದ ಅವರು, ಮೈಮುಲ್ ನಿರ್ದೇಶಕಿ ದಾಕ್ಷಾಯಿಣಿ ಅವರ ಅನುದಾನದಲ್ಲಿ ಬೋರೆದೇವರಮುಂಟಿಗೆ 4 ಲಕ್ಷ, ಬೀರಂಬಳ್ಳಿಗೆ 4 ಲಕ್ಷ, ಎನ್.ಬೇಗೂರು ಡೈರಿಗೆ 4.5 ಲಕ್ಷ ರೂ. ನೀಡಿದ್ದು, ಶ್ರೀಕ್ಷೇತ್ರ ಧರ್ಮಸ್ಥಳ ಗ್ರಾಮಾಭಿವೃದ್ಧಿ ಯೋಜನೆಯಿಂದ ತಲಾ 1 ಲಕ್ಷದ ಅನುದಾನ ಮುಂಜೂರಾತಿ ಪತ್ರ ವಿತರಿಸಲಾಗಿದೆ. ಹಾಲು ಉತ್ಪಾದಕರು ಗುಣಮಟ್ಟದ ಹಾಲಿನ ಉತ್ಪಾದನೆಗೆ ಹೆಚ್ಚು ಒತ್ತು ನೀಡಿದರೆ ಮಾತ್ರ ಸಂಘ ಲಾಭಗಳಿಸಲು ಸಾಧ್ಯ ಎಂದರು.

ಶ್ರೀಕ್ಷೇತ್ರ ಧರ್ಮಸ್ಥಳ ಗ್ರಾಮಾಭಿವೃದ್ಧಿ ಯೋಜನಾಧಿಕಾರಿ ಶಶಿಧರ್ ಮಾತನಾಡಿ, ಹೆಚ್.ಡಿ.ಕೋಟೆ ಹಾಗೂ ಸರಗೂರು ತಾಲೂಕಿನ 85 ಡೈರಿ ಕಟ್ಟಡಗಳಿಗೆ ಅನುದಾನ ನೀಡಲಾಗಿದೆ. ಈ ಪೈಕಿ ಬಿಎಂಸಿ ಕಟ್ಟಡಕ್ಕೆ 2 ಲಕ್ಷರೂ. ನೀಡಲಾಗಿದೆ ಅಲ್ಲದೇ ಗ್ರಾಮೀಣ ಭಾಗದ ಬಡವರಿಗೆ ಮನೆ ಹಾಗೂ ಮಾಸಶನ ಸೇರಿದಂತೆ ಹತ್ತು ಹಲವು ಸೌಲಭ್ಯಗಳನ್ನು ನೀಡಲಾಗಿದೆ. ಎಲ್ಲರೂ ಆರ್ಥಿಕವಾಗಿ ಮುಂದೆ ಬರಬೇಕು ಎಂಬುದೇ ಧರ್ಮಸ್ಥಳ ಗ್ರಾಮಾಭಿವೃದ್ಧಿ ಯೋಜನೆಯ ಗುರಿ ಎಂದರು.

ಈ ವೇಳೆ ಮೈಮುಲ್ ಹಿರಿಯ ವಿಸ್ತರಣಾಧಿಕಾರಿ ಆರೀಫ್, ಅವಿನಾಶ್, ಗ್ರಾಪಂ ಅಧ್ಯಕ್ಷೆ ಸುಶೀಲಮ್ಮ, ಸದಸ್ಯರಾದ ಪ್ರಕಾಶ್, ಧರ್ಮಸ್ಥಳ ಯೋಜನೆ ವಲಯ ಬೀಚನಹಳ್ಳಿ ಮೇಲ್ವಿಚಾರಕಿ ವೀಣಾ, ಡೈರಿ ಅಧ್ಯಕ್ಷರು, ಸರ್ವ ಸದಸ್ಯರು ಹಾಗೂ ಗ್ರಾಮಸ್ಥರಿದ್ದರು.

ಸೂರ್ಯಗ್ರಹಣ: ಶ್ರೀಕಂಠೇಶ್ವರನಿಗೆ ವಿಶೇಷ ಪೂಜೆ

ನಂಜನಗೂಡು, ಅ.25– ಸೂರ್ಯಗ್ರಹಣದ ಅಂಗವಾಗಿ ನಗರದ ಶ್ರೀಕಂಠೇಶ್ವರಸ್ವಾಮಿ ದೇವಾಲಯದಲ್ಲಿ ಸ್ವಾಮಿಗೆ ಮಂಗಳವಾರ ವಿಶೇಷ ಪೂಜೆ ನಡೆಸಲಾಯಿತು. ದೇವಾಲಯದ ಆಗಮಿಕ ನಾಗಚಂದ್ರ ದೀಕ್ಷಿತ್ ಮಾತನಾಡಿ, ಸೂರ್ಯ ಗ್ರಹಣದ ವೇಳೆ ಇಲ್ಲಿನ ಶಿವನ ದೇವಾಲಯ ಮುಚ್ಚುವ ಸಂಪ್ರದಾಯವಿಲ್ಲ. ಗ್ರಹಣದ ವೇಳೆ ವಿಷ್ಣು ದೇವಾಲಯಗಳನ್ನು ಮುಚ್ಚುತ್ತಾರೆ. ಶ್ರೀಕಂಠೇಶ್ವರನ ದೇವಾಲಯದಲ್ಲಿ ಪ್ರತಿನಿತ್ಯ ಆರು ಜಾವಗಳಲ್ಲಿ ಸ್ವಾಮಿಗೆ ಅಭಿಷೇಕ ನಡೆಸಲಾಗುತ್ತದೆ. ಗ್ರಹಣದ ಸಮಯದಲ್ಲಿ ಶಿವನನ್ನು ಕುರಿತು ಜಪ, ತಪ, ಹೋಮಾದಿಗಳನ್ನು ನಡೆಸುವುದರಿಂದ ನೂರರಷ್ಟು ಫಲ ದೊರೆಯುತ್ತದೆ ಎಂಬ ನಂಬಿಕೆ ಇರುವುದರಿಂದ ದೇವಾಲಯದಲ್ಲಿ 1 ಬಾರಿ ಹೆಚ್ಚಾಗಿ ಸ್ವಾಮಿಗೆ ಅಭಿಷೇಕ ನಡೆಸಲಾಗುತ್ತದೆ. ಶ್ರೀಕಂಠೇಶ್ವರ, ಪಾರ್ವತಿ ಅಮ್ಮನವರು, ಸುಬ್ರಹ್ಮಣ್ಯಸ್ವಾಮಿಗೆ ಅಭಿಷೇಕ, ಮಹಾಮಂಗಳಾರತಿ ನಡೆಸಲಾಯಿತು. ಗ್ರಹಣದ ನಂತರ ಸ್ನಾನಾದಿಗಳನ್ನು ಮುಗಿಸಿಕೊಂಡು ಹೆಚ್ಚಿನ ಭಕ್ತರು ದೇವಾಯಲಕ್ಕೆ ಭೇಟಿ ನೀಡಿ ಸ್ವಾಮಿ ದರ್ಶನ ಪಡೆಯುತ್ತಾರೆ ಎಂದರು.



ಸವಿತಾ ಸಮಾಜ ಸಮುದಾಯ ಭವನಕ್ಕೆ ಚಾಲನೆ

ನಂಜನಗೂಡು, ಅ.25– ಶೋಷಿತ ಸಮಾಜಗಳಿಗೂ ಸಮಾನ ಅವಕಾಶ ಸಿಗಬೇಕೆಂಬ ಹಿತದೃಷ್ಟಿಯಿಂದ ಸವಿತಾ ಸಮಾಜದ ಸಮುದಾಯ ಭವನ ನಿರ್ಮಾಣ ಕಾಮಗಾರಿಗೆ ಚಾಲನೆ ನೀಡಲಾಗಿದೆ ಎಂದು ಶಾಸಕ ಬಿ.ಹರ್ಷವರ್ಧನ್ ತಿಳಿಸಿದರು.




ನಗರದ ಬೈಪಾಸ್ ರಸ್ತೆಯಲ್ಲಿ 20 ಲಕ್ಷ ರೂ. ವೆಚ್ಚದಲ್ಲಿ ಸವಿತಾ ಸಮಾಜದ ಸಮುದಾಯ ಭವನ ನಿರ್ಮಾಣ ಕಾಮಗಾರಿಗೆ ಚಾಲನೆ ನೀಡಿ ಮಾತನಾಡಿದ ಅವರು, ಸಂಸದ ವಿ.ಶ್ರೀನಿವಾಸ ಪ್ರಸಾದ್ ಅವರು ಅಂಬೇಡ್ಕರ್ ಪುತ್ಥಳಿ ಮುಂಭಾಗ ಎಲ್ಲಾ ಸಮಾಜದ ಸಮುದಾಯ ಭವನಗಳು ನಿರ್ಮಾಣವಾಗಬೇಕು. ಆಗ ತಾಲೂಕಿನ ಎಲ್ಲಾ ಸಮಾಜಗಳಿಗೂ ಸಾಮಾಜಿಕ ನ್ಯಾಯ ಒದಗಿಸಿದಂತಾಗುತ್ತದೆ ಎಂದು ಎಲ್ಲಾ ಸಮಾಜಗಳ ಸಮುದಾಯ ಭವನಕ್ಕೆ ಜಾಗ ನೀಡಿದ್ದಾರೆ. ಬಹುತೇಕ ಎಲ್ಲಾ ಸಮಾಜಗಳ ಸಮುದಾಯ ಭವನಗಳಿಗೆ ಚಾಲನೆ ನೀಡಲಾಗಿದ್ದು, ಶೀಘ್ರ ಮುಕ್ತಾಯವಾಗಲಿದೆ. ಇನ್ನೂ ಉಪ್ಪಾರ ಸಮುದಾಯ ಭವನ ಮಾತ್ರ ಬಾಕಿ ಉಳಿದಿದ್ದು, ಶೀಘ್ರ ಅನುದಾನ ನೀಡಿ ಗುದ್ದಲಿ ಪೂಜೆ ನೆರವೇರಿಸಲಾಗುವುದು ಎಂದರು.

ಈ ವೇಳೆ ಸಂಸದ ವಿ.ಶ್ರೀನಿವಾಸಪ್ರಸಾದ್, ನಗರಸಭಾಧ್ಯಕ್ಷ ಹೆಚ್.ಎಸ್.ಮಹದೇವಸ್ವಾಮಿ, ಉಪಾಧ್ಯಕ್ಷೆ ನಾಗಮಣಿ, ಮುಖಂಡರಾದ ಸುಬ್ಬಣ್ಣ, ಬಾಲಚಂದ್ರು, ಕೇಶಾಲಂಕಾರಿಗಳ ಸಂಘದ ಅಧ್ಯಕ್ಷ ಪುಟ್ಟರಾಜು, ಗೌರವಾಧ್ಯಕ್ಷ ಆನಂದ್, ನಾಗೇಂದ್ರ, ಕೆಂಪರಾಜು, ರವಿ, ಡಿ.ಮಹೇಶ್, ಶ್ರೀಕಂಠ ಪ್ರಸಾದ್, ಶಿವಪ್ರಸಾದ್ ಸೇರಿದಂತೆ ಇತರರಿದ್ದರು.



ದೀಪಾವಳಿ ಹಬ್ಬದ ಪ್ರಯುಕ್ತ ಕಂಪಲಾಪುರದಲ್ಲಿ ಶ್ರೀಕರಕಂಠೇಶ್ವರಸ್ವಾಮಿ ಉತ್ಸವ ಅದ್ದೂರಿಯಾಗಿ ನೆರವೇರಿತು.

ಶ್ರೀ ಸಿಡಿಲು ಮಲ್ಲಿಕಾರ್ಜುನಸ್ವಾಮಿಗೆ ವಿಶೇಷ ಪೂಜೆ



ಬೆಟ್ಟದಪುರ, ಅ.25– ದೀಪಾವಳಿ ಅಮಾವಾಸ್ಯೆ ಅಂಗವಾಗಿ ಇತಿಹಾಸ ಪ್ರಸಿದ್ಧ ಶ್ರೀಸಿಡಿಲು ಮಲ್ಲಿಕಾರ್ಜುನಸ್ವಾಮಿ ಬೆಟ್ಟದ ದೇವಾಲಯದಲ್ಲಿ ಭಕ್ತರು ಸ್ವಾಮಿಗೆ ವಿಶೇಷ ಪೂಜೆ ಸಲ್ಲಿಸಿದರು.

ಮುಂಜಾನೆಯೇ ಬೆಟ್ಟದ ಹತ್ತಿದ ಸಾವಿರಾರು ಭಕ್ತರು ವಿಶೇಷ ಪೂಜೆ ಸಲ್ಲಿಸಿ, ದೇವರ ದರ್ಶನ ಪಡೆದು ಪುನೀತರಾದರು. ಬಳಿಕ ಬೆಟ್ಟದ ಮೇಲೆ ನಿಂತು ಪ್ರಕೃತಿ ಸೌಂದರ್ಯ ಸವಿದರು.

ದೇವಾಲಯಕ್ಕೆ ಆಗಮಿಸಿದ ಗಾವಡಗೆರೆ ಮಠದ ನಟರಾಜ ಸ್ವಾಮೀಜಿ ಮಲ್ಲಿಕಾರ್ಜುನ ಸ್ವಾಮಿಗೆ ಪೂಜೆ ಸಲ್ಲಿಸಿ, ಆಶೀರ್ವಚನ ನೀಡಿ ಮಾತನಾಡಿದರು. ಅಲ್ಲದೇ ಮಂಗಳೂರು ಜಿಲ್ಲಾ ಪ್ರಧಾನ ನ್ಯಾಯಾಧೀಶ ಮಲ್ಲಿಕಾರ್ಜುನ ಅವರು ಕುಟುಂಬ ಸಮೇತರಾಗಿ ಆಗಮಿಸಿ ಶ್ರೀಸಿಡಿಲು ಮಲ್ಲಿ ಕಾರ್ಜುನ ಸ್ವಾಮಿಗೆ ವಿಶೇಷ ಪೂಜೆ ಸಲ್ಲಿಸಿದರು. ಬೆಟ್ಟದಪುರ ಎಸ್ಐ ಪ್ರಕಾಶ್ ಎತ್ತಿನ ಮನಿ ನೇತೃತ್ವದಲ್ಲಿ ಬಿಗಿ ಬಂದೋಬಸ್ತ್ ಕೈಗೊಳ್ಳಲಾಗಿತ್ತು ಸಾವಿರಾರು ಭಕ್ತರಿಗೆ ಬೆಟ್ಟದ ತಪ್ಪಲಿನಲ್ಲಿ ಅನ್ನದಾನ ಏರ್ಪಡಿಸಲಾಯಿತು. ಈ ವೇಳೆ ತಾಪಂ ಮಾಜಿ ಅಧ್ಯಕ್ಷ ಮಹದೇವಸ್ವಾಮಿ, ಪತ್ರಕರ್ತ ಶಿವದೇವ್, ಬಿ.ಸಿ.ರಾಜೇಂದ್ರ ಶಿಲ್ಪಾ, ಸದಾನಂದ, ಭರತ್, ಮಂಜುನಾಥ್, ವಸಂತ್, ಕುಮಾರ್, ಜಗದೀಶ್, ಶಿವಕುಮಾರ್, ನಾಗರಾಜ ಶೆಟ್ಟಿ, ಬಿ.ಎಸ್.ಮಹದೇವಪ್ಪ ದಯಾ ನಂದ್, ಕುಮಾರ್, ಮಹದೇವಪ್ಪ ಸುರೇಶ್ ಇತರರಿದ್ದರು.



ಹುಣಸೂರು ತಾಲೂಕಿನ ಕಣಗಾಲು ಗ್ರಾಮಕ್ಕೆ ಮಹದೇಶ್ವರ ಟ್ರಸ್ಟ್ ಉದ್ಘಾಟನೆಗೆ ಆಗಮಿಸಿದ್ದ ಎಂಸಿಡಿಸಿಸಿ ಬ್ಯಾಂಕ್ ಅಧ್ಯಕ್ಷ ಜಿ.ಡಿ.ಹರೀಶ್‌ಗೌಡರನ್ನು ಗ್ರಾಮಸ್ಥರು ಸನ್ಮಾನಿಸಿದರು. ಈ ವೇಳೆ ಮೈಮುಲ್ ನಿರ್ದೇಶಕ ಕೆ.ಎಸ್.ಕುಮಾರ್, ಗ್ರಾಪಂ ಅಧ್ಯಕ್ಷೆ ರಂಜಿತಾ, ನಗರಸಭೆ ಸದಸ್ಯರಾದ ಹರೀಶ್, ಸತೀಶ್, ರಾಮೇಗೌಡ, ಗ್ರಾಪಂ ಮಾಜಿ ಅಧ್ಯಕ್ಷ ಪುಟ್ಟರಾಜ, ಪಾಪಣ್ಣ, ಪ್ರಭಾಕರ್, ಆರಾಧ್ಯ, ದೊಡ್ಡಹೆಜ್ಜೂರು ಗ್ರಾಪಂ ಅಧ್ಯಕ್ಷ ಸುಭಾಷ್, ಡೈರಿ ಅಧ್ಯಕ್ಷ ಮಾದೇಗೌಡ ಮತ್ತಿತರರಿದ್ದರು.

ಮಹದೇಶ್ವರಸ್ವಾಮಿ ಜಾತ್ರೆ ಆರಂಭ

ಬನ್ನೂರು, ಅ.25– ಅರಟೆಬರೆ ಜಾತ್ರೆ ಎಂದೇ ಸುತ್ತಮುತ್ತಲಿನ ಗ್ರಾಮಗಳಲ್ಲಿ ಪ್ರಖ್ಯಾತಗೊಂಡಿರುವ ಅರವಟ್ಟಿಗೆಕೊಪ್ಪಲು ಕೊಡಗಹಳ್ಳಿ ಗ್ರಾಮಸ್ಥರ ಸಹಕಾರದೊಂದಿಗೆ 12 ದಿನ ನಡೆಯುವ ಮಹದೇಶ್ವರಸ್ವಾಮಿ ಜಾತ್ರಾ ಮಹೋತ್ಸವ ಇಂದಿನಿಂದ(ಅ.25) ವಿಧ್ಯುಕ್ತವಾಗಿ ಆರಂಭಗೊಂಡಿದ್ದು, ಶನಿವಾರ ಮಹದೇಶ್ವರ ಸ್ವಾಮಿ ಮಹಾ ರಥೋತ್ಸವ ಜರುಗಲಿದೆ. ಅ.26 ರಂದು ಹುಲಿ ವಾಹನೋತ್ಸವ, 27 ರಂದು ವೃಷಭ ವಾಹನೋತ್ಸವ, 28 ರಂದು ಅಡ್ಡಪಲ್ಲಕ್ಕಿ ಉತ್ಸವ ನಡೆಯುತ್ತದೆ. 29 ರಂದು ಸಲ್ಲುವ ಶುಭ ಮುಹೂರ್ತದಲ್ಲಿ ಸಂಜೆ 4 ಗಂಟೆಗೆ ಮಹದೇಶ್ವರ ದೇವರ ಮಹಾರಥೋತ್ಸವ ನಡೆಯಲಿದೆ. 30ರಿಂದ ನ.3 ರವರೆಗೂ ಹುಲಿ ವಾಹನೋತ್ಸವ ನಡೆಯಲಿದ್ದು, 4 ರಂದು ಹುಲಿ ವಾಹನೋತ್ಸವದೊಂದಿಗೆ ತೀರ್ಥಸ್ನಾನದ ಮೂಲಕ ಜಾತ್ರಾ ಮಹೋತ್ಸವಕ್ಕೆ ತೆರೆ ಬೀಳಲಿದೆ.



ಕ್ರೀಡೆಯಿಂದ ಮಕ್ಕಳಲ್ಲಿ ನಾಯಕತ್ವ ಗುಣ ಬೆಳೆಯಲಿದೆ: ಹೆಚ್‌ಪಿಎಂ

ಹುಣಸೂರು, ಅ.25– ಮಕ್ಕಳು ಪಾಠ ಪ್ರವಚನದ ಜೊತೆಗೆ ಶ್ರದ್ಧೆ, ಭಕ್ತಿ ಮತ್ತು ಕ್ರೀಡೆಗೆ ಒತ್ತು ನೀಡಿದರೆ ನಾಯಕತ್ವ ಗುಣಗಳು ಬೆಳೆಯಲಿದೆ ಎಂದು ಶಾಸಕ ಹೆಚ್.ಪಿ.ಮಂಜುನಾಥ್ ತಿಳಿಸಿದರು.



ತಾಲೂಕಿನ ಅರಸು ಕಲ್ಲಹಳ್ಳಿ ಸರ್ಕಾರಿ ಶಾಲೆಯಲ್ಲಿ ಆಯೋಜಿಸಿದ್ದ ತಿಂಗಳ ಚಂದಿರ 5ನೇ ಸಂಚಿಕೆಯಲ್ಲಿ ಮಾತನಾಡಿದ ಅವರು, ಒಂದು ಪ್ರತಿಮೆಯಾಗಲು ನೂರಾರು ಉಳಿ ಪೆಟ್ಟು ಬೀಳಬೇಕು ಎಂದ ಅವರು, ನನ್ನ ಮೇಲೆ ಪ್ರಭಾವ ಬೀರಿದ್ದು ನನ್ನ ತಾಯಿ ಹಾಗೂ ವಿದ್ಯೆ ಕಲಿಸಿದ ಗುರುಗಳು. ಅಂದು ತಿದ್ದಿತೀಡಿ ನನ್ನನ್ನು ಕೆತ್ತಿ ಶಿಲೆ ಮಾಡದಿದ್ದರೆ ಇಂದು ನಿಮ್ಮ ಮುಂದೆ ಶಾಸಕನಾಗಿ ನಿಲ್ಲಲು ಸಾಧ್ಯವಿರಲಿಲ್ಲ. ಆದ್ದರಿಂದ ಸೋಲು ಗೆಲುವುಗಳನ್ನು ಸಮಾನವಾಗಿ ಸ್ವೀಕರಿಸಿ. ನಿಮ್ಮ ಸಾಧನೆಗೆ ನೆರವಾದ ಗುರು ಹಿರಿಯರಿಗೆ ಗೌರವ ನೀಡಿ ಎಂದರು.

ದಿ.ದೇವರಾಜ ಅರಸು ಕರ್ಮಭೂಮಿಯಲ್ಲಿ ಹುಣಸೂರು ಜನತೆ ಸೌಹಾರ್ದತೆಯಿಂದ ಬದುಕುತ್ತಿದ್ದಾರೆ. ಅರಸರಂತೆ ನಾನೂ ಕೂಡ ಅಲ್ಪಸಂಖ್ಯಾತನಾದರೂ 3 ಬಾರಿ ಶಾಸಕನಾಗಲು ಸಹಕಾರ ನೀಡಿದ್ದಾರೆ. ಅವರ ಭಾವನೆಗೆ ಎಂದೂ ಚ್ಯುತಿ ಬಾರದಂತೆ ತಾಲೂಕಿನ 42 ಕೆರೆಗಳಿಗೆ ನೀರು ತುಂಬಿಸಿದ್ದೇನೆ. ಪ್ರತಿ ಹಳ್ಳಿಗೂ ಸಿಮೆಂಟ್ ರಸ್ತೆ, ವಿದ್ಯುತ್ ಸಂಪರ್ಕ, ನೀರಾವರಿ ಯೋಜನೆ, ಸಮುದಾಯ ಭವನಗಳು, ಸಾರ್ವಜನಿಕ ಆಸ್ಪತ್ರೆ, ಸಾವಿರಾರು ಡಿಪ್ಲೊಮೋ ವಿದ್ಯಾರ್ಥಿಗಳಿಗೆ ಐಟಿಐ ನೂತನ ಕಟ್ಟಡ, ಮಹಿಳಾ ಕಾಲೇಜು ಸೇರಿದಂತೆ ಶಿಕ್ಷಣ ಇಲಾಖೆಗೆ ಒತ್ತು ನೀಡಿರುವುದು ನನಗೆ ತೃಪ್ತಿ ತಂದಿದೆ.

ವಿದ್ಯಾರ್ಥಿ ಜೀವನದಲ್ಲಿ ರಾಷ್ಟ್ರಮಟ್ಟದ ಕ್ರೀಡಾಪಟುವಾಗಿದ್ದ ನಾನು ಎಲ್ಲಾ ಆಟದಲ್ಲೂ ಮುಂದಿದ್ದೆ. 2007ರಲ್ಲಿ ರಾಜಕೀಯ ಪ್ರವೇಶಿಸಿ 3 ಬಾರಿ ಶಾಸಕನಾದೆ. ಅದೇ ರೀತಿ ತಾಲೂಕಿನ ಜನತೆ ಸೋಲಿನ ರುಚಿ ತೋರಿಸಿದ್ದಾರೆ. ಆದರೂ ಹುಣಸೂರಿನ ರಾಜಕೀಯ ಸೆಳೆತ ನನ್ನನ್ನು ಬಿಡುತ್ತಿಲ್ಲ ಎಂದರು.

ಸರ್ಕಾರದಿಂದ ಮೊದಲ ಬಾರಿಗೆ ಬಂದ 8 ಕೋಟಿ ಹಣದಲ್ಲಿ 7 ಕೋಟಿ ಹಣವನ್ನು ಶಾಲಾ ಕಟ್ಟಡಗಳಿಗೆ ನೀಡಿದ್ದೇನೆ. ಅದೇ ರೀತಿ ನಿಮ್ಮ ಶಾಲೆ ಅಗತ್ಯವಿರುವ ಪಟ್ಟಿ ನೀಡಿ ಇಲಾಖೆ ಮತ್ತು ನನ್ನ ವೈಯಕ್ತಿಕ ಖರ್ಚಿನಿಂದ ನಿಮ್ಮ ಶಾಲೆಯ ಸಮಸ್ಯೆಗಳಿಗೆ ನೆರವಾಗಲಿದ್ದೇನೆ ಎಂದು ಅಭಯ ನೀಡಿದ ಅವರು ತಿಂಗಳ ಚಂದಿರ ಪ್ರತಿ ಶಾಲೆಯಲ್ಲೂ ನಡೆದರೆ ಅಲ್ಲಿನ ಸಮಸ್ಯೆಗಳು ನಿವಾರಣೆಯಾಗಲೂ ಸಹಕಾರಿಯಾಗಲಿದೆ ಎಂದರು.

ಕಾರ್ಯಕ್ರಮದಲ್ಲಿ ಎಸ್‌ಡಿಎಂಸಿ ಅಧ್ಯಕ್ಷ ಕೆ.ಎಸ್.ರವಿ, ಹಳೇ ವಿದ್ಯಾರ್ಥಿ ಸಂಘದ ಅಧ್ಯಕ್ಷ ಶಿವಮೂರ್ತಿ, ಗ್ರಾಪಂ ಅಧ್ಯಕ್ಷೆ ಪುಟ್ಟತಾಯಮ್ಮ, ಕ್ಷೇತ್ರ ಸಮನ್ವಯಾಧಿಕಾರಿ ಸಂತೋಷ್ ಕುಮಾರ್, ಸಿಆರ್‌ಪಿ ದಿವಾಕರ್, ಶಿಕ್ಷಕರ ಸಹಕಾರ ಸಂಘದ ಅಧ್ಯಕ್ಷ ಮಹದೇವ್, ಮುಖ್ಯ ಶಿಕ್ಷಕ ಕೆ.ರಾಜಶೇಖರ್, ಸಹಶಿಕ್ಷಕರಾದ ಕೃಷ್ಣ, ನಾಗಮಣಿ, ಮೇಘನಾ, ಪ್ರೌಢಶಾಲಾ ಮುಖ್ಯಶಿಕ್ಷಕ ರವಿಶಂಕರ್, ಶಾಲಾ ಮಕ್ಕಳು ಮತ್ತು ಗ್ರಾಮಸ್ಥರಿದ್ದರು.

ಲಲಿತಮ್ಮ ನಿಧನ



ಹುಣಸೂರು, ಅ.25– ತಾಲೂಕಿನ ಕಟ್ಟೆಮಳಲವಾಡಿ ಗ್ರಾಮದ ಪತ್ರಿಕಾ ವಿತರಕ ಕಿರಣ್ ಕುಮಾರ್ ಅವರ ತಾಯಿ ಲಲಿತಮ್ಮ (73) ಸೋಮವಾರ ರಾತ್ರಿ ನಿಧನರಾದರು. ಮೃತರು ಇಬ್ಬರು ಪುತ್ರರು, ಓರ್ವ ಪುತ್ರಿ ಸೇರಿದಂತೆ ಅಪಾರ ಬಂಧುಗಳನ್ನು ಅಗಲಿದ್ದಾರೆ. ಅಂತ್ಯಕ್ರಿಯೆ ಮಂಗಳವಾರ ಮಧ್ಯಾಹ್ನ ಹೆಚ್.ಡಿ.ಕೋಟೆಯಲ್ಲಿ ನೆರವೇರಿತು ಎಂದು ಕುಟುಂಬದ ಮೂಲಗಳು ತಿಳಿಸಿವೆ.

ಅಮೆರಿಕಾದಲ್ಲೂ ದೀಪಾವಳಿ ಸಂಭ್ರಮ



ವಾಷಿಂಗ್ಟನ್, ಅ.25– ಬೆಳಕಿನ ಹಬ್ಬ ದೀಪಾವಳಿ ಸಂಭ್ರಮ ಅಮೆರಿಕಾದಲ್ಲೂ ಮನೆ ಮಾಡಿದ್ದು, ಶ್ವೇತಭವನದಲ್ಲಿ ಅಮೆರಿಕದ ಅಧ್ಯಕ್ಷ ಜೋ ಬೈಡನ್ ಮತ್ತು ಪ್ರಥಮ ಮಹಿಳೆ ಜಿಲ್ ಬೈಡನ್ ಅವರು ಶ್ವೇತಭವನದಲ್ಲಿ ದೀಪಾವಳಿ ಆಚರಿಸಿದರು.

ಶ್ವೇತಭವನದಲ್ಲಿ ದೀಪ ಬೆಳಕಿಸಿದ ಜೋ ಬೈಡನ್ ಅವರು, ಉಪಾಧ್ಯಕ್ಷೆ ಕಮಲಾ ಹ್ಯಾರಿಸ್ ನೇತೃತ್ವದಲ್ಲಿ ನಾವು ಅಧಿಕೃತ ಶ್ವೇತಭವನದ ದೀಪಾವಳಿ ಆಯೋಜಿಸಿದ್ದೇವೆ. ಅಮೆರಿಕಾದ ಇತಿಹಾಸದಲ್ಲಿ ಅತ್ಯಂತ ವೈವಿಧ್ಯಮಯ ಆಡಳಿತದ ಸದಸ್ಯರಿಂದ ಸುತ್ತುವರಿದ ದೀಪವನ್ನು ಬೆಳಗಿಸಲು ನಮಗೆ ಗೌರವವಿದೆ ಎಂದು ಹೇಳಿದರು.

ಇದೇ ವೇಳೆ ಅಮೆರಿಕದಾದ್ಯಂತ ದಕ್ಷಿಣ ಏಷ್ಯಾದ ಸಮುದಾಯವು ಪ್ರದರ್ಶಿಸಿದ ಆಶಾವಾದ, ಧೈರ್ಯ ಮತ್ತು ಸಹಾನುಭೂತಿಗೆ ಬೈಡನ್ ಧನ್ಯವಾದ ಅರ್ಪಿಸಿದರು. ಬೈಡನ್ ಆಡಳಿತದ ಹಲವಾರು ಭಾರತೀಯ ಅಮೆರಿಕನ್ನರು ಸಮಾರಂಭದಲ್ಲಿ ಉಪಸ್ಥಿತರಿದ್ದರು.

ಪ್ರಾರ್ಥನೆಗಳು, ನೃತ್ಯಗಳು, ಪಟಾಕಿಗಳು ಮತ್ತು ಸಿಹಿತಿಂಡಿಗಳೊಂದಿಗೆ, ದೀಪಾವಳಿಯನ್ನು ಆಚರಿಸುವ ಪ್ರತಿಯೊಬ್ಬರೂ ಹಬ್ಬ ಆಚರಿಸಲು ಮತ್ತು ಸಂಪರ್ಕಿಸಲು, ಸಮುದಾಯದ ಹೆಮ್ಮೆಯನ್ನು ಅನುಭವಿಸಲು ಮತ್ತು ಬೆಳಕಿನ ಕೂಟದಲ್ಲಿನ ಶಕ್ತಿಯನ್ನು ನೆನಪಿಸಿಕೊಳ್ಳುವ ಅವಕಾಶವನ್ನು ಆನಂದಿಸಲಿ ಎಂದು ಬೈಡನ್ ತಿಳಿಸಿದರು.

ಅಮೆರಿಕಾ ಉಪಾಧ್ಯಕ್ಷೆ ಕಮಲಾ ಹ್ಯಾರಿಸ್ ಕೂಡ ದೀಪಾವಳಿ ಆಚರಣೆಯ ಸಂದರ್ಭದಲ್ಲಿ ಶ್ವೇತಭವನದಿಂದ ಶುಭ ಕೋರಿದರು. ಶ್ವೇತಭವನವು ಜನರ ಮನೆಯಾಗಿದೆ ಮತ್ತು ನಮ್ಮ ಅಧ್ಯಕ್ಷರು ಮತ್ತು ಪ್ರಥಮ ಮಹಿಳೆ ಒಟ್ಟಾಗಿ ಪ್ರತಿ ಅಮೆರಿಕನ್ನರು ತಮ್ಮ ಗೌರವ ಮತ್ತು ಸಂಪ್ರದಾಯವನ್ನು ಆಚರಿಸಲು ಈ ಸ್ಥಳವನ್ನು ಮಾಡಿದ್ದಾರೆ ಎಂದು ಹೇಳಿದರು.

ಪ್ರಥಮ ಮಹಿಳೆ ಜಿಲ್ ಬೈಡನ್ ಮಾತನಾಡಿ, ಉಪಾಧ್ಯಕ್ಷೆ ಕಮಲಾ ಹ್ಯಾರಿಸ್, ಅಧ್ಯಕ್ಷೆ ಜೋ ಬೈಡನ್ ಆಡಳಿತವು ದೀಪವನ್ನು ಬೆಳಗಿಸಲು ಪ್ರಪಂಚದಾದ್ಯಂತ 1 ಶತಕೋಟಿ ಜನರನ್ನು ಸೇರುತ್ತದೆ ಮತ್ತು ಅಜ್ಞಾನದ ಮೇಲೆ ಜ್ಞಾನ ಮತ್ತು ಕತ್ತಲೆಯ ಮೇಲೆ ಬೆಳಕು ಚೆಲ್ಲಲು ಒಳ್ಳೆಯದಕ್ಕಾಗಿ ಹೋರಾಟವನ್ನು ಆಚರಿಸುತ್ತದೆ ಎಂದರು.

ಇಶಾ ಫೌಂಡೇಶನ್‌ನಲ್ಲಿ ಕಾಂತಾರ ಪ್ರದರ್ಶನ

ಕೊಯಂಬತ್ತೂರು, ಅ.25– ಈಗಾಗಲೇ ಕಾಂತಾರ ಸಿನಿಮಾದ ಸ್ಪೆಷಲ್ ಸ್ಕ್ರೀನಿಂಗ್ ಅನೇಕ ಕಡೆಗಳಲ್ಲಿ ನಡೆದಿವೆ. ಆದರೆ, ಈವರೆಗೂ ಕನ್ನಡದ ಯಾವುದೇ ಸಿನಿಮಾ ಕೊಯಂಬತ್ತೂರಿನ ಇಶಾ ಫೌಂಡೇಶನ್‌ನಲ್ಲಿ ಪ್ರದರ್ಶನ ಕಂಡಿರಲಿಲ್ಲ. ಇದೀಗ ಮೊದಲ ಬಾರಿಗೆ ಕಾಂತಾರ ಅಲ್ಲಿ ವಿಶೇಷ ಪ್ರದರ್ಶನ ಕಂಡಿದ್ದು, ಈ ಕುರಿತು ಇಶಾ ಫೌಂಡೇಶನ್ ತನ್ನ ಅಧಿಕೃತ ಪೇಜಿನಲ್ಲಿ ಬರೆದುಕೊಂಡಿದೆ. ಚಿತ್ರದ ಬಗ್ಗೆ ಹೊಗಳಿಕೆಯ ಮಾತುಗಳನ್ನೂ ಆಡಿದೆ.

ಇಶಾ ಫೌಂಡೇಶನ್ ಯೋಗ ಕೇಂದ್ರದಲ್ಲಿ ಸಾಮಾನ್ಯವಾಗಿ ಸಿನಿಮಾಗಳನ್ನು ತೋರಿಸುವುದಿಲ್ಲವಂತೆ. ಈ ಹಿಂದೆ ಕಂಗನಾ ರಣಾವತ್ ನಟನೆಯ ಮಣಿಕರ್ಣಿಕ ಚಿತ್ರವನ್ನು ಪ್ರದರ್ಶಿಸಲಾಗಿತ್ತು. ಅದರ ನಂತರ ಕಾಂತಾರಕ್ಕೆ ಈ ಯೋಗ ಸಿಕ್ಕಿದೆ. ದಕ್ಷಿಣ ಭಾರತದಲ್ಲೇ ಇಶಾ ಫೌಂಡೇಶನ್‌ನಲ್ಲಿ ಪ್ರದರ್ಶನವಾದ ಮೊದಲ ಸಿನಿಮಾ ಕಾಂತಾರ ಆಗಿದೆ. ಈ ಕುರಿತು ಹೆಮ್ಮೆಯಿಂದಲೇ ಫೌಂಡೇಶನ್ ಬರೆದುಕೊಂಡಿದೆ.

ದೀಪಾವಳಿ ಹಬ್ಬದ ರಜೆಯ ಕಾರಣದಿಂದಾಗಿ ಬಾಕ್ಸ್ ಆಫೀಸ್ ಭರ್ತಿ ಆಗುತ್ತಿದೆ. ಇದೊಂದು ಐತಿಹಾಸಿಕ, ಮಹಾ ಗೆಲುವು ಎಂದು ಬಣ್ಣಿಸ ಲಾಗುತ್ತಿದೆ. ಈ ಗೆಲುವನ್ನು ರಿಷಬ್ ಶೆಟ್ಟಿ ದೈವಕ್ಕೆ ಅರ್ಪಿಸಿದ್ದಾರೆ. ಈ ಸಿನಿಮಾ ಗೆಲ್ಲಲು ದೈವ ಕಾರಣ, ಜನರಲ್ಲಿ ನಾನು ದೇವರನ್ನು ಕಾಣುತ್ತೇನೆ ಎಂದು ಹೇಳಿದ್ದಾರೆ ರಿಷಬ್ ಶೆಟ್ಟಿ.

ಕರ್ನಾಟಕ ಸರ್ಕಾರ
ತಾಲ್ಲೂಕು ಪಂಚಾಯಿತಿ ಕಾರ್ಯಾಲಯ, ತಿ.ನರಸೀಪುರ

ವಾಹನ ಟೆಂಡರ್ ಪ್ರಕಟಣೆ

2022–23ನೇ ಸಾಲಿನಲ್ಲಿ ದಿನಾಂಕ:01.11.2022 ರಿಂದ 31.10.2023ರ ತಾತ್ಕಾಲಿಕ ಅವಧಿಗೆ ತಾಲ್ಲೂಕು ಪಂಚಾಯಿತಿ ತಿ.ನರಸೀಪುರ ಕಛೇರಿಯ ಸಹಾಯಕ ನಿರ್ದೇಶಕರು(ಗ್ರಾ.ಉ) ರವರ ಕಛೇರಿ ಉಪಯೋಗಕ್ಕಾಗಿ ಹೊರಗುತ್ತಿಗೆ ಆಧಾರದ ಮೇಲೆ ವಾಹನ ಸೇವೆಯನ್ನು ಪಡೆಯಲು ಟೆಂಡರ್ ಪ್ರಕಟಣೆಯನ್ನು ಹೊರಡಿಸಲಾಗಿದೆ.

(1) ಟೆಂಡರ್ ಪ್ರಕಟಣೆ : **14.10.2022.** (2) ಅರ್ಜಿ ಸಲ್ಲಿಸಲು ಕೊನೆಯ ದಿನಾಂಕ : **28.10.2022.** (3) ತಾಂತ್ರಿಕ ಲಕೋಟೆ ತೆರೆಯುವ ದಿನಾಂಕ : **28.10.2022 (ಬೆ.11.30 ಗಂಟೆಗೆ).** (4) ಆರ್ಥಿಕ ಲಕೋಟೆ ತೆರೆಯುವ ದಿನಾಂಕ : **29.10.2022 (ಮ. 3.30 ಗಂಟೆಗೆ).** (5) ಟೆಂಡರ್ ಮೊತ್ತ **4.80 (ಲಕ್ಷಗಳಲ್ಲಿ).**

ಸಹಿ/–ಕಾರ್ಯನಿರ್ವಾಹಕ ಅಧಿಕಾರಿ,
ತಾಲ್ಲೂಕು ಪಂಚಾಯಿತಿ, ತಿ.ನರಸೀಪುರ

ವಾಪಾಸಂಇ/ಉನಿ–ಮೈ/ಎಂಸಿ&ಎ/597/2022–23